Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–7 | ಫೆಬ್ರವರಿ 12–18, 2024 | ಪುಟ 16 | ರೂ. 10/–
Volume-18 | Issue-7 | February 12-18, 2024 | Pages:16 | Price: 10/-



ಸಂಚುಕೋರ ಸಂಘ ಪರಿವಾರ: ಮಂಡ್ಯ ಜನತೆಯ ದಿವ್ಯ ತಿರಸ್ಕಾರ



ಕೇರಳ : ರಾಜ್ಯಗಳ ಹಕ್ಕುಗಳ ರಕ್ಷಣೆಗಾಗಿ ಹೋರಾಟ

ಫೆಬ್ರವರಿ 16



ಗ್ರಾಮೀಣ ಬಂದ್ ಮತ್ತು ಕೈಗಾರಿಕಾ ಮುಷ್ಕರ

ಹತ್ರಾಸ್: ಮನುವಾದಿ ದೌರ್ಜನ್ಯಗಳ ಮುನ್ನುಡಿ

ಹಾಥ್ರಸ್ ಕಾಂಡ: ಮನುವಾದಿ ಅನ್ಯಾಯಕ್ಕೊಂದು ರೂಪಕ



ಹಾಥ್ರಸ್ ದಲಿತರು ಮತ್ತು ಮಹಿಳೆಯರ ವಿರುದ್ಧ ಬಿಜೆಪಿಯ ಡಬಲ್ ಇಂಜಿನ್ ಸರ್ಕಾರದ ಅನ್ಯಾಯ, ಕ್ರೌರ್ಯ ಮತ್ತು ಮನುಸ್ಮೃತಿಯ ಜಾರಿಗೆ ಒಂದು ರೂಪಕವಾಗಿದೆ. ಇದರಲ್ಲಿ ನಾಲ್ಕು ಹಂತಗಳಿವೆ ಎಂದು ಇತ್ತೀಚೆಗೆ ಸಪ್ಟಂಬರ್ 2020ರ ಹಾಥ್ರಸ್ ಅತ್ಯಾಚಾರ ಮತ್ತು ಕೊಲೆ ಸಂತ್ರಸ್ತೆಯ ಕುಟುಂಬದವರನ್ನು ಭೇಟಿ ಮಾಡಿದಾಗ ತಿಳಿಯಿತು.

ಬೃಂದಾ ಕಾರತ್ ಅನು: ಸಿ.ಸಿದ್ದಯ್ಯ

"ಕೈದಿಗಳು ನಾವೇ. ನನ್ನ ತಂಗಿಯನ್ನು ಸಾಮೂಹಿಕ ಅತ್ಯಾಚಾರ ನಡೆಸಿ ಕೊಲೆ ಮಾಡಿ, ಭಯಾನಕ ದೌರ್ಜನ್ಯ ನಡೆಸಿದವರು ಮುಕ್ತವಾಗಿ ಅಡ್ಡಾಡಿಕೊಂಡಿದ್ದಾರೆ. ಅವರು ಊರಿನಲ್ಲಿ ವಿಜೇತರಂತೆ ತಿರುಗಾಡುತ್ತಿದ್ದಾರೆ. ಆದರೆ ನಮಗೆ ನಮ್ಮ ಮನೆಯಿಂದ ಹೊರಬರಲು ಸಾಧ್ಯವಾಗುತ್ತಿಲ್ಲ" ಇದು ಹಾಥ್ರಸ್‌ನ ಸಂತ್ರಸ್ತೆಯ 33 ವರ್ಷದ ಸಹೋದರ ಸತೀಂದರ್ ಕುಮಾರ್ ಮಾತು. ಜನವರಿ 17ರಂದು ಅವರ ಯೋಗಕ್ಷೇಮ ವಿಚಾರಿಸಲುಅವರ ಗ್ರಾಮ ಬುಲ್ ಗರ್ಹಿಗೆ ನಾನು ಮತ್ತು ಸುಭಾಷಿಣಿ ಅಲಿ ಹೋಗಿದ್ದೆವು. ನಾವಲ್ಲಿ ಕಂಡದ್ದು ನ್ಯಾಯದ ದಮನ ಮತ್ತು ಅಲಿಖಿತ ಜಾತಿ ಸಂಹಿತೆಯ ಪಾಲನೆ. ಇದರಿಂದ ಉತ್ತರಪ್ರದೇಶದಲ್ಲಿ ದಲಿತನೊಬ್ಬ ನ್ಯಾಯಕ್ಕಾಗಿ ಹೋರಾಡುವುದು ತುಂಬಾ ಕಷ್ಟ ಎಂಬ ಸತ್ಯ ನಮಗೆ ಕಣ್ಣು ಕುಕ್ಕುವ ರೀತಿಯಲ್ಲಿ ಮನದಟ್ಟಾಯಿತು. ಸಂತ್ರಸ್ತೆಯ ಕುಟುಂಬಕ್ಕೆ ಆಗಿರುವ ಆಘಾತದ ವಿವರಗಳನ್ನು ಪಡೆಯುವಾಗ ಈ ಮನುವಾದಿ ಜಾತಿ ನಿಯಮಗಳ ಅನುಷ್ಠಾನದಲ್ಲಿ ನಾಲ್ಕು ಹಂತಗಳಿವೆ ಎಂದು ತಿಳಿಯಿತು.

ಮೊದಲ ಹಂತ–ಅಪರಾಧ

ಮೊದಲನೆಯದು, ಸೆಪ್ಟೆಂಬರ್ 2020 ರ ಅಪರಾಧ: ಬಡ ದಲಿತ ಕುಟುಂಬದ 19 ವರ್ಷದ ಹುಡುಗಿಯ ಮೇಲೆ ನಾಲ್ಕು ಮೇಲ್ಜಾತಿ ಪುರುಷರು ಸಾಮೂಹಿಕ ಅತ್ಯಾಚಾರ ಮಾಡಿ ನಂತರ ಹತ್ಯೆ ಮಾಡಿದರು. ಆಕೆ ಬದುಕಿದ್ದೇ ಜಾತಿ, ವರ್ಗ ಮತ್ತು ಪಿತೃಪ್ರಧಾನ್ಯತೆಯ ಶೋಷಣೆಗಳು ಒಟ್ಟುಗೂಡಿರುವ ಭಾರತದ್ದೇ ಆದ ವಿಶಿಷ್ಟ ಸನ್ನಿವೇಶದಲ್ಲಿ. ಅದೊಂದು ಜಾತಿ ಅಪರಾಧವಾಗಿತ್ತು; ಒಬ್ಬ ಮಹಿಳೆಯ ಮೇಲೆ ಎಸಗಿದ ಅಪರಾಧವಾಗಿತ್ತು; ಅದು ಪ್ರಬಲ ಗ್ರಾಮೀಣ ಉಚ್ಚವರ್ಗದವರು ಒಬ್ಬ ಬಡ ಮಹಿಳೆಯ ಮೇಲೆ ನಡೆಸಿದ್ದ ಒಂದು ವರ್ಗ ಅಪರಾಧವೂ ಆಗಿತ್ತು; ಮತ್ತು 'ಹಕ್ಕಿನಿಂದ' ನಡೆಸಿದ ಅಪರಾಧವಾದ್ದರಿಂದ ಅದನ್ನು ಅಪರಾಧವೆಂದೇ ಪರಿಗಣಿಸಲಾಗದು!

ಎರಡನೇ ಹಂತ–ಸರ್ಕಾರದ ಪಕ್ಷಪಾತ

ಎರಡನೇ ಹಂತವೆಂದರೆ ಆಡಳಿತ ಇಲಾಖೆ ಮತ್ತು ಉತ್ತರಪ್ರದೇಶ ಸರ್ಕಾರದಿಂದ ಅದನ್ನು ಮುಚ್ಚಿ ಹಾಕುವ ಜಾತಿ-ಪ್ರೇರಿತ ಕ್ರಮ. ಸೆಪ್ಟೆಂಬರ್ 2020 ರಲ್ಲಿ ಅಪರಾಧ ನಡೆದಿದೆ. ಆಡಳಿತ ಮತ್ತು ಉತ್ತರಪ್ರದೇಶ ಸರಕಾರ ತನಿಖೆಯನ್ನು ಬುಡಮೇಲು ಮಾಡಲು ಸಾಧ್ಯವಾದಷ್ಟು ಪ್ರಯತ್ನಿಸಿತು. ಆರಂಭದಿಂದಲೇ ಅವರು ಅತ್ಯಾಚಾರ



ಹಾಥ್ರಸ್ ಸಂತ್ರಸ್ತೆಯ ಸಾಮೂಹಿಕ ಬಲಾತ್ಕಾರ ನಡೆಸಿ ಕೊಲೆ ಮಾಡಲಾಯಿತು-ಸಿಬಿಐ ಚಾರ್ಜ್‌ಶೀಟ್
ವ್ಯಂಗ್ಯಚಿತ್ರ ಕೃಪೆ: ಆರ್.ಪ್ರಸಾದ್.



ನಿಜವಾಗಿ ನಡೆದೇ ಇಲ್ಲ, ಏನೇ ನಡೆದಿದ್ದರೂ ಒಪ್ಪಿಗೆಯಿಂದಲೇ ನಡೆದಿದೆ ಎಂಬ ಸುಳ್ಳನ್ನು ಪಸರಿಸಲಾಯಿತು. ಐದು ದಿನಗಳಾದರೂ ಎಫ್.ಐ.ಆರ್. ದಾಖಲಿಸಲಿಲ್ಲ. ವೈದ್ಯಕೀಯ ಪರೀಕ್ಷೆಯನ್ನು ವಿಳಂಬಗೊಳಿಸಲಾಯಿತು ಮತ್ತು

ಮಹತ್ವಪೂರ್ಣ ಸಾಕ್ಷ್ಯ ಇಲ್ಲದಂತೆ ಮಾಡಲಾಯಿತು. ಅಗತ್ಯ ತುರ್ತು ಚಿಕಿತ್ಸೆ ನೀಡದ ಕಾರಣ ಆ ಬಾಲಕಿಯ ಆರೋಗ್ಯ ಹದಗೆಟ್ಟಿತು. ನಂತರ ಆಕೆಯನ್ನು ಬಹಳ ತಡವಾಗಿ ದಿಲ್ಲಿಯ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಆಕೆಯ ಸಾವಿನ ನಂತರ, ಪೋಲೀಸರು ಮೃತದೇಹವನ್ನು ಬಲವಂತವಾಗಿ ತೆಗೆದುಕೊಂಡು, ಕುಟುಂಬ ಸದಸ್ಯರ ಅನುಮತಿಯಿಲ್ಲದೆ ರಾತ್ರೋ ರಾತ್ರಿ ಅಂತ್ಯಸಂಸ್ಕಾರ ಮಾಡಿದರು. ಶವದಹನದ ಮೂಲಕ ಎರಡನೇ ಮರಣೋತ್ತರ ಪರೀಕ್ಷೆಗೆ ಆಗ್ರಹ ಬರದಂತೆ ತಡೆಯಲಾಯಿತು. ದೇಶಾದ್ಯಂತ ಪ್ರತಿಭಟನೆ ಮತ್ತು ಆಕ್ರೋಶದ ನಂತ ಪ್ರಕರಣವನ್ನು ಸಿಬಿಐಗೆ ವಹಿಸಲಾಯಿತು.

ಮೂರನೇ ಹಂತ–ಕಾನೂನು ಹೋರಾಟ

ಮನುವಾದ ಜಾತಿ ವ್ಯವಸ್ಥೆಯು ಮೂರನೇ ಹಂತವೆಂದರೆ, ನ್ಯಾಯಾಂಗ ಪ್ರಕ್ರಿಯೆಯಲ್ಲಿ ಸರ್ಕಾರದ ಪಕ್ಷಪಾತದ ಧೋರಣೆಯ ಮುಂದುವರಿಕೆ. ಆಯುವತಿಯ ಮೇಲಿನ ದೌರ್ಜನ್ಯದ ಎಲ್ಲ ವಿವರಗಳು ಸಿಬಿಐ ಚಾರ್ಜ್‌ಶೀಟನಲ್ಲಿವೆ. ಸಾಮೂಹಿಕ ಅತ್ಯಾಚಾರ, ಕೊಲೆ ಮತ್ತು ಪಿತೂರಿಯ ನಿಬಂಧನೆಗಳ ಅಡಿಯಲ್ಲಿ ಆರೋಪಗಳನ್ನು ಹೊರಿಸಲಾಗಿತ್ತು. ಚಾರ್ಜ್‌ಶೀಟ್ ಸಂತ್ರಸ್ತೆಯ ಸಾಯುವಾಗಿನ ಹೇಳಿಕೆಯನ್ನು ಮತ್ತು ಆಕೆಯನ್ನು ಚಿತ್ರಹಿಂಸೆಯ ಸ್ಥಿತಿಯಲ್ಲಿ ಕಂಡ ಮೊದಲ ವ್ಯಕ್ತಿಯಾದ ಆಕೆಯ ತಾಯಿಯ ಹೇಳಿಕೆಯನ್ನು ಆಧರಿಸಿತ್ತು. ಪರಿಶಿಷ್ಟ ಜಾತಿಗಳು ಮತ್ತು ಪಂಗಡಗಳ ಮೇಲೆ ದೌರ್ಜನ್ಯ ತಡೆ ಕಾಯ್ದೆಯ ಅಡಿಯಲ್ಲಿ ಪ್ರಕರಣಗಳ ವಿಚಾರಣೆ ನಡೆಸುವ ವಿಶೇಷ ಜಿಲ್ಲಾ ನ್ಯಾಯಾಲಯವು ವಿಚಾರಣೆಯನ್ನು ಕೈಗೆತ್ತಿಕೊಂಡಿತು.

ಯಾವುದೇ ಕಾರಣ ನೀಡದೆ ಸಂತ್ರಸ್ತೆಯ ಸಾವಿನ ಹೇಳಿಕೆಯನ್ನು ತಳ್ಳಿಹಾಕಿದ ನ್ಯಾಯಾಲಯ, ತಾಯಿಯ ಹೇಳಿಕೆಯನ್ನು ಕೂಡ ಬದಿಗೊತ್ತಿತು. ಬಾಲಕಿಯು ಹೆಸರಿಸಿದ ನಾಲ್ವರು ಆರೋಪಿಗಳಲ್ಲಿ ಮೂವರನ್ನು ಖುಲಾಸೆಗೊಳಿಸಲಾಯಿತು. ಮತ್ತು ನಾಲ್ಕನೆಯವನಿಗೆ ಸೆಕ್ಷನ್ 304ರ ಅಡಿಯಲ್ಲಿ 'ಶಿಕ್ಷಾರ್ಹ ನರಹತ್ಯೆ' ಎಂಬ ಕಡಿಮೆ ಅಪರಾಧಕ್ಕಾಗಿ ಶಿಕ್ಷೆ ವಿಧಿಸಲಾಯಿತು.

ಉತ್ತರಪ್ರದೇಶದಲ್ಲಿ ಮುಖ್ಯಮಂತ್ರಿ ಆದಿತ್ಯ ನಾಥ್ ಅವರ ಜಾತಿಬಾಂಧವರಿಗೆ ಶಿಕ್ಷೆಯಿಂದ ವಿನಾಯಿತಿ ಇದೆ. ಒಂದು ವೇಳೆ ಜಾತಿ ಸಮೀಕರಣ ವ್ಯತಿರಿಕ್ತವಾಗಿದ್ದರೆ, ಬಾಧಿತರು ಮೇಲ್ಜಾತಿಗೆ ಸೇರಿದವರಾಗಿದ್ದರೆ, ಅಪರಾಧಿಗಳು ದಲಿತರು ಅಥವಾ ಇತರ ಅಲ್ಪಸಂಖ್ಯಾತರಾಗಿದ್ದರೆ, ಒಂದುವೇಳೆ ಆ ಹುಡುಗಿ ಹಾಥ್ರಸ್‌ನಲ್ಲಿ ಬಲಿಯಾದವಳಂತೆ ಸಾಯುವ ಮುನ್ನದ ಹೇಳಿಕೆಯನ್ನು ನೀಡಿದ್ದರೆ, ಅದನ್ನು ಯಾವುದೇ ತಕರಾರಿಲ್ಲದೆ ಒಪ್ಪಿಕೊಳ್ಳುತ್ತಿದ್ದರು. ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸುತ್ತಿದ್ದರು. ನ್ಯಾಯಾಲಯವು ಯಾವಾಗಲೂ ಸಾಯುವ ಮುನ್ನ ಬಾಧಿತರು ಕೊಡುವ ಹೇಳಿಕೆಗಳಿಗೆ ವಿಶೇಷ ಗಮನ ನೀಡುತ್ತದೆ. ಆದರೆ ಹಾಥ್ರಸ್‌ನಲ್ಲಿ ಬಲಿಯಾದವಳು ವಾಲ್ಮೀಕಿ ಸಮುದಾಯಕ್ಕೆ ಸೇರಿದ ಹುಡುಗಿ. ಮತ್ತು ಆಕೆ ಮೇಲ್ಜಾತಿಗೆ ಸೇರಿದವರ ಮೇಲೆ ಆರೋಪ ಮಾಡಿದ್ದಳು. ಕುಟುಂಬದವರ ಮೇಲೆ ರಾಜಿ ಮಾಡಿಕೊಂಡು ತೀರ್ಪನ್ನು ಒಪ್ಪಿಕೊಳ್ಳುವಂತೆ ಒತ್ತಡ ಹೇರಲಾಯಿತು. ಇಂತಹ ತೀರಾ ಅನ್ಯಾಯದ ತೀರ್ಪಿನ ವಿರುದ್ಧ ಸರ್ಕಾರ ಮೇಲ್ಮನವಿ ಸಲ್ಲಿಸುತ್ತದೆ ಎಂಬ ಅವರ ನಿರೀಕ್ಷೆ ಹುಸಿಯಾಯಿತು. ಉತ್ತರ ಪ್ರದೇಶ ಸರ್ಕಾರ ಮೇಲ್ಮನವಿ ಸಲ್ಲಿಸಲು ನಿರಾಕರಿಸಿತು. ಅಲ್ಲದೆ ಅಷ್ಟೇ ಖಂಡನೀಯ ಸಂಗತಿಯೆಂದರೆ, ಆರೋಪ ಪಟ್ಟಿ ಹಾಕಿದ್ದ, ಈ ಪ್ರಕರಣದಲ್ಲಿ ಪ್ರಮುಖ ಫಿರ್ಯಾದಿಯಾಗಿದ್ದ ಸಿಬಿಐ ಕೂಡ ಮೇಲ್ಮನವಿ ಸಲ್ಲಿಸಲು ನಿರಾಕರಿಸಿತು. ಸಾಮೂಹಿಕ ಅತ್ಯಾಚಾರ, ಪಿತೂರಿ ಮತ್ತು ಕೊಲೆಯಂತಹ ಗಂಭೀರ ಆರೋಪಗಳನ್ನು ಹಾಕಿದ್ದ ಸಿಬಿಐ ತನ್ನದೇ ಪ್ರಕರಣವನ್ನು ಸಮರ್ಥಿಸಿಕೊಳ್ಳಲಿಕ್ಕೆ ಮೇಲ್ಮನವಿ ಸಲ್ಲಿಸಲು ನಿರಾಕರಿಸುವಇಂತಹ ಉದಾಹರಣೆಗಳು ಈ ಹಿಂದೆ ಇವೆಯೇ? ಸಿಬಿಐ ಕೇಂದ್ರ ಗೃಹ ಇಲಾಖೆಯ ಅಡಿಯಲ್ಲಿದೆ. ಮೇಲ್ಮನವಿ ಸಲ್ಲಿಸದಿರುವ ನಿರ್ಧಾರದ ಹಿಂದೆ ಗೃಹ ಸಚಿವಾಲಯ ಮತ್ತು ಸಚಿವ ಅಮಿತ್ ಶಾ ಅವರ ಅನುಮೋದನೆ ಇದೆ ಎಂದು ಖಂಡಿತಾ ಊಹಿಸಬಹುದು.

ಸರ್ಕಾರ ಮತ್ತು ಸಿಬಿಐ ಮೇಲ್ಮನವಿ ಸಲ್ಲಿಸಲು ನಿರಾಕರಿಸಿದ್ದರಿಂದ ಸಂತ್ರಸ್ತೆಯ ಕುಟುಂಬ, ಒತ್ತಡವನ್ನೂ ಲೆಕ್ಕಿಸದೆ ಅಲಹಾಬಾದ್ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದೆ. ಆ ಪ್ರಕರಣ ಈಗ ಬಾಕಿ ಇದೆ. ಎರಡನೇ ಪ್ರಕರಣ ಲಖ್ನೌ ಪೀಠಕ್ಕೆ ಸಂಬಂಧಿಸಿದ್ದು. ಸೆಪ್ಟೆಂಬರ್ 2020 ರಲ್ಲಿ ಘೋರ ಅಪರಾಧ ನಡೆದ ನಂತರ

ಲಕ್ನೌ ಪೀಠ ಪ್ರಕರಣವನ್ನು ತಾನಾಗಿಯೇ ಕೈಗೆತ್ತಿಕೊಂಡಿತು. ಅಕ್ಟೋಬರ್ 2020 ರಲ್ಲಿ ಸಂತ್ರಸ್ತ ಕುಟುಂಬವನ್ನು ನ್ಯಾಯಾಲಯಕ್ಕೆ ಕರೆಸಲಾಯಿತು. ಕುಟುಂಬದ ಒಬ್ಬರಿಗೆ ಸರ್ಕಾರಿ ನೌಕರಿ ನೀಡಿ, ಕುಟುಂಬಕ್ಕೆ ಭದ್ರತೆ ಒದಗಿಸಿ ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸುವಂತೆ ನ್ಯಾಯಾಲಯ ಸರ್ಕಾರಕ್ಕೆ ಸೂಚಿಸಿತು. ಆರೋಪಿಗಳ ಖುಲಾಸೆ ವಿರುದ್ಧ ಮೇಲ್ಮನವಿ ಸಲ್ಲಿಸಲು ನಿರಾಕರಿಸಿದ ಉತ್ತರಪ್ರದೇಶ ಸರ್ಕಾರ, ಒಬ್ಬ ವ್ಯಕ್ತಿಗೆ ಉದ್ಯೋಗ ಮತ್ತು ಕುಟುಂಬಕ್ಕೆ ಪರ್ಯಾಯ ವಸತಿ ಒದಗಿಸುವ ಲಕ್ನೌ ನ್ಯಾಯಾಲಯದ ಆದೇಶದ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತು. ಸಂತ್ರಸ್ತೆಯ ಕುಟುಂಬ ಸುಪ್ರೀಂ

ಪುಟ 4 ಕ್ಕೆ



"ಅಯೋಧ್ಯೆಗೆ ಮರಳುತ್ತಿರುವ ರಾಮ"
ಮಹಿಳೆಯರ ವಿರುದ್ಧ ಅಪರಾಧದಲ್ಲಿ ಯುಪಿ ನಂ.1
ಬಿಹೆಚ್‌ಯು ಪ್ರಕರಣದಲ್ಲಿ ಆರೋಪಿಗಳು ಬಿಜೆಪಿ ಐಟಿ ಸೆಲ್‌ನವರು
ವ್ಯಂಗ್ಯಚಿತ್ರ ಕೃಪೆ: ರಾಕೇಶ್ ರಂಜನ್, ಮೊಲಿಟಿಕ್ಸ್.ಇನ್

ಸಂಪಾದಕೀಯ

ಈ ಹೋರಾಟ ಬಲಗೊಂಡು ವಿಸ್ತರಿಸಲಿ

ರಾಜ್ಯಗಳಿಗೆ ನ್ಯಾಯಯುತವಾಗಿ ಸಿಗಬೇಕಾದ ತೆರಿಗೆಯಲ್ಲಿ ಪಾಲು, ಭಾರತದ ಒಕ್ಕೂಟದ ಸರ್ಕಾರ ರಾಜ್ಯಗಳ ಕುರಿತು ಅನುಸರಿಸುತ್ತಿರುವ ತಾರತಮ್ಯ ಹಾಗೂ ಸಾಂವಿಧಾನಿಕ ಹಕ್ಕುಗಳ ದಮನದ ವಿರುದ್ಧ ನಡೆಯುತ್ತಿರುವ ಹೋರಾಟ ತೀಕ್ಷ್ಣತೆ ಹಾಗೂ ವ್ಯಾಪಕ ಸ್ವರೂಪವನ್ನು ಪಡೆಯುತ್ತಿದೆ. ಕೇರಳದ ಎಡ ಪ್ರಜಾಸತ್ತಾತ್ಮಕ ರಂಗದ ಸರ್ಕಾರದ ಮಂತ್ರಿಮಂಡಲ, ಶಾಸಕರು ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಇದೇ ಫೆಬ್ರವರಿ 8, 2024, ರಂದು ದೆಹಲಿಯ ಜಂತರ್ ಮಂತರ್ ನಲ್ಲಿ ಧರಣಿ ನಡೆಸಿದರು. ಫೆಬ್ರವರಿ 7 ರಂದು ಕರ್ನಾಟಕದ ಸರ್ಕಾರ ಪ್ರತಿಭಟನೆಯನ್ನು ನಡೆಸಿತು. ಫೆಬ್ರವರಿ 8 ರಂದು ಕೇರಳ ಸರ್ಕಾರ ಆಯೋಜಿಸಿದ ಪ್ರತಿಭಟನೆಯಲ್ಲಿ ಅವರಂತೆ ಅನ್ಯಾಯ, ನಿರ್ಲಕ್ಷ್ಯಕ್ಕೆ ಒಳಗಾಗಿರುವ ಪಂಜಾಬ್, ದೆಹಲಿ ರಾಜ್ಯಗಳ ಮುಖ್ಯಮಂತ್ರಿಗಳು, ಮಂತ್ರಿಗಳು, ತಮಿಳುನಾಡಿನ ಸಚಿವರೂ, ರಾಜಕೀಯ ಪಕ್ಷಗಳ ನಾಯಕರೂ ಭಾಗವಹಿಸಿದ್ದು ಪ್ರತಿಭಟನೆಯ ವ್ಯಾಪ್ತಿಯನ್ನು ವಿಸ್ತರಿಸಿತು. ದೇಶದ ಜನತೆಗೆ ಇಂದಿನ ಸನ್ನಿವೇಶದ ಗಂಭೀರತೆಯನ್ನು ಮನಗಾಣಿಸುವ ಅತ್ಯಂತ ಗಮನಾರ್ಹ ಹಾಗೂ ಸಕಾರಾತ್ಮಕವಾದ ಬೆಳವಣಿಗೆ.

ಕೇಂದ್ರ ಮತ್ತು ರಾಜ್ಯಗಳ ನಡುವಿನ ವಿಕೃತಗೊಂಡ ಸಂಬಂಧಗಳು ಮತ್ತು ಅದಕ್ಕೆ ವ್ಯಕ್ತಗೊಳ್ಳುವ ಪ್ರತಿರೋಧವನ್ನು ದಕ್ಷಿಣ ವರ್ಸಸ್ ಉತ್ತರದ ಪ್ರಶ್ನೆ ಎಂಬಂತೆ ವ್ಯಾಖ್ಯಾನಿಸುತ್ತಿದ್ದ ಸಂಕುಚಿತವಾದದ ಟೊಳ್ಳುತನವನ್ನು ಈ ಧರಣಿಯು ಮತ್ತೊಮ್ಮೆ ಬಯಲಿಗಿಟ್ಟಿತು.

ಭಾರತದ ಸಂವಿಧಾನ ಕೇಂದ್ರ ಮತ್ತು ರಾಜ್ಯಗಳ ಸಂಬಂಧವನ್ನು ಹಾಗೂ ನಮ್ಮ ವ್ಯವಸ್ಥೆಯನ್ನು ಒಕ್ಕೂಟದ ಸ್ವರೂಪವೆಂದು ಧೃಡಪಡಿಸಿದೆಯಾದರೂ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ, ಇರುವ ಬಹುತೇಕ ಸರ್ಕಾರಗಳು ಅತ್ಯಂತ ಸರ್ವಾಧಿಕಾರಿಯಾಗಿಯೇ ವರ್ತಿಸುತ್ತಲೇ ಬಂದಿವೆ. ಏಕಸ್ವಾಮ್ಯ ಬಂಡವಾಳಗಾರರು, ಭೂಮಾಲೀಕ ವರ್ಗಗಳ ಸಂಯೋಜನೆಯ ಈ ಪ್ರಭುತ್ವ ತನ್ನ ಅಭಿವೃದ್ಧಿ ಪಥಕ್ಕನುಗುಣವಾಗಿಯೇ ಇಡೀ ಆರ್ಥಿಕತೆಯನ್ನು ರೂಪಿಸಿ ಬಳಸುತ್ತಿದೆ. ಉದಾರೀಕರಣದ ನಂತರದಲ್ಲಂತೂ ಅದು ಮತ್ತಷ್ಟೂ ತೀವ್ರ ಸ್ವರೂಪವನ್ನು ಪಡೆದಿದೆ. ಕೆಲವು ಕಾರ್ಪೊರೇಟ್ ಕಂಪನಿಗಳ ಬೆಳವಣಿಗೆ ಮತ್ತು ಕೇಂದ್ರ ಸರ್ಕಾರದಲ್ಲಿ ಅಪಾರ ಪ್ರಮಾಣದ ಸಂಪನ್ಮೂಲಗಳ ಸಂಗ್ರಹವೇ ದೇಶದ ಅಭಿವೃದ್ಧಿ ಎಂದು ಬಿಂಬಿಸ ತೊಡಗಿದೆ. ಕೇಂದ್ರವು ರಾಜ್ಯಗಳನ್ನು ತನ್ನ ಅಧೀನ ಸಂಸ್ಥೆಗಳಂತೆ ಗಣಿಸಿ ಒಕ್ಕೂಟದ ವ್ಯವಸ್ಥೆಯನ್ನೇ ಪ್ರಾಯೋಗಿಕವಾಗಿ ಶಿಥಿಲಗೊಳಿಸುತ್ತಾ ಬರುತ್ತಿದೆ. ಭಾರತದ ಸಂವಿಧಾನ, ಪ್ರಜಾಪ್ರಭುತ್ವದ ಬಗ್ಗೆ ಕಡು ವಿರೋಧವಿರುವ ಫ್ಯಾಶಿಸ್ಟ್ ಮನೋಭಾವದ ಬಿಜೆಪಿ ಆಡಳಿತದಲ್ಲಿ ಸರ್ವಾಧಿಕಾರತ್ವ, ಏಕಸ್ವಾಮಿತ್ವವನ್ನು ತನ್ನ ಸಹಜ ಹಕ್ಕಿನಂತೆ ಪ್ರತಿಪಾದಿತವಾಗುತ್ತಿದೆ. ಒಕ್ಕೂಟ ಸರ್ಕಾರದ ತೆರಿಗೆ ನೀತಿ, ಅನುದಾನ, ಸಂಪನ್ಮೂಲಗಳ ಹಂಚಿಕೆಯಲ್ಲಿ ವಿಪರೀತ ತಾರತಮ್ಯಗಳಿವೆ. ಇದರ ಪರಿಣಾಮವಾಗಿ ಕಳೆದ 2017–18 ರಿಂದ ಈ ವರ್ಷಗಳಲ್ಲಿ ಕರ್ನಾಟಕ ಸುಮಾರು 1,87,867 ಕೋಟಿರೂ.ಗಳ ನಷ್ಟ ಅನುಭವಿಸಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ರಾಜ್ಯಕ್ಕೆ ನೀಡಬೇಕಾಗಿದ್ದ ತೆರಿಗೆಯ ಪಾಲಿನಲ್ಲಿ ಶೇಕಡಾ ಪ್ರಮಾಣವನ್ನು ಕುಂಠಿತಗೊಳಿಸಿದ್ದರಿಂದ ಕೇರಳ 57,000 ಕೋಟಿ ರೂ.ಗಳಿಗೂ ಅಧಿಕ ಹಣದಿಂದ ವಂಚಿತವಾಗಿದೆ. ಇಂತಹುದೇ ಹಾನಿ, ವಂಚನೆಯನ್ನು ತಮಿಳುನಾಡು, ಪ.ಬಂಗಾಳ, ದೆಹಲಿ, ಪಂಜಾಬ್ ಜಮ್ಮು–ಕಾಶ್ಮೀರ, ಆಂಧ್ರ–ತೆಲಂಗಾಣ ಮುಂತಾದ ರಾಜ್ಯಗಳು ಪ್ರಸಕ್ತವಾಗಿ ಮತ್ತು ಹಿಂದೆಯೂ ಅನುಭವಿಸುತ್ತಾ ಬಂದಿವೆ. ಇದರ ಪರಿಣಾಮವೆಂದರೆ ರಾಜ್ಯಗಳ ಅಭಿವೃದ್ಧಿ ಕುಂಠಿತಗೊಳ್ಳುವುದಲ್ಲದೆ ಸಾಮಾಜಿಕ ಪ್ರಗತಿಯನ್ನು ನಿರ್ಬಂಧಿಸುತ್ತದೆ ಮತ್ತು ಆದ ಬೆಳವಣಿಗೆಯನ್ನು ಹಿಂದಕ್ಕಟ್ಟುತ್ತದೆ. ತುಲನಾತ್ಮಕವಾಗಿ ಉತ್ತರದ ಹಲವು ರಾಜ್ಯಗಳಿಗಿಂತಲೂ ದಕ್ಷಿಣದ ರಾಜ್ಯಗಳು ಎಲ್ಲಾ ರಂಗಗಳಲ್ಲಿಯೂ ಪ್ರಗತಿಯನ್ನು ಸಾಧಿಸಿವೆ ಎಂಬುದು ವಾಸ್ತವ. ಅದರರ್ಥ ಸಮಸ್ಯೆಗಳಿಂದ ಮುಕ್ತವಾಹಿವೆ ಎಂದು ಅರ್ಥವಲ್ಲ. ಹಣ ಬಿಜೆಪಿ ಕೇಂದ್ರ ಸರ್ಕಾರ ರಾಜ್ಯಗಳಿಗೆ ಅನ್ಯಾಯ ಎಸಗುತ್ತಾ, ತಾನು ಆಡಳಿತದಲ್ಲಿರುವ ಉತ್ತರದ ಕೆಲವು ರಾಜ್ಯಗಳಿಗೆ ಹೆಚ್ಚಿನ ನೆರವು ಅವಕಾಶಗಳನ್ನು ನೀಡುತ್ತಿರುವುದು ಸಹ ಗಮನಿಸಬೇಕಾದ್ದು. ಅದರ ಅರ್ಥ ಆ ರಾಜ್ಯಗಳು ಬಹಳ ಪ್ರಗತಿಯನ್ನು ಸಾಧಿಸಿವೆ ಎಂದೇನಲ್ಲ. ದುರಂತವೆಂದರೆ, ಆ ರಾಜ್ಯಗಳಿಗೆ ನೀಡುತ್ತಿರುವ ಹಣವು ಕೂಡ ಮೂಲಭೂತ ಆರ್ಥಿಕ ಸಾಮಾಜಿಕ ಅಭಿವೃದ್ಧಿಗೆ ವ್ಯಯವಾಗದೇ ಪ್ರತಿಮೆಗಳು ಗುಡಿಗುಂಡಾರಗಳು ಮತ್ತು ಹೊರ ಆವರಣದ ವೈಭವೀಕರಣಕ್ಕೆ, ವ್ಯಾಪಕ ಭ್ರಷ್ಟಾಚಾರಕ್ಕೆ ಕೆಲವರ ಎಗ್ಗಿಲ್ಲದ ಲೂಟಿಗೆ ಅಪವ್ಯವಾಗುತ್ತಿರುವ ಅನೇಕ ಸಂದರ್ಭಗಳನ್ನು ಮಾಧ್ಯಮಗಳೂ ಗುರುತಿಸಿವೆ. ಹೀಗಾಗಿ ಅಲ್ಲಿಯ ಜನಸಾಮಾನ್ಯರ ಮಾನವ ಅಭಿವೃದ್ಧಿ ಸೂಚ್ಯಂಕ ಅತ್ಯಂತ ಕುಸಿತವನ್ನು ಕಂಡಿದೆ. ಹಾಗೂ ಅತ್ಯಂತ ಸಂಕೀರ್ಣವಾದ ಸಮಸ್ಯೆಗಳ ಸುಳಿಯಲ್ಲಿ ಮತ್ತು ದಿವಾಳಿತನದಲ್ಲಿ ಜನತೆ ಬದುಕು ನೀಗಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ ಭಾರತ ಒಕ್ಕೂಟ ಸರಕಾರದ ಸರ್ವಾಧಿಕಾರಿ, ತಾರತಮ್ಯದ ನೀತಿಯ ವಿರುದ್ಧ ರಾಜ್ಯಗಳು ಒಕ್ಕೂಟದ ಸ್ವರೂಪವನ್ನು ಸಂವಿಧಾನ ಕೊಡ ಮಾಡಿರುವ ಹಕ್ಕುಗಳ ರಕ್ಷಣೆಯ ಪ್ರಜಾಸತ್ತಾತ್ಮಕ ಕಣ್ಣೋಟದ ಆಧಾರದಲ್ಲಿ ಹೋರಾಟ ನಡೆಸಬೇಕಿದೆ.

ಇಂತಹ ಗಹನವಾದ ಪ್ರಶ್ನೆಯನ್ನು 1950 ರ ದಶಕದಲ್ಲಿಯೇ ಕಮ್ಯೂನಿಸ್ಟ್ ಪಕ್ಷ ಎತ್ತುತ್ತಲೇ ಬಂದಿದೆ.

ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿನ ರಾಜ್ಯ ಸರ್ಕಾರಗಳು ಆ ನಂತರದ ದಶಕಗಳ ಉದ್ದಕ್ಕೂ ಈ ಪ್ರಶ್ನೆಯನ್ನು ರಾಷ್ಟ್ರೀಯ ಪ್ರಶ್ನೆಯಾಗಿ ಪ್ರತಿಪಾದಿಸುತ್ತ ಮತ್ತು ರಾಜ್ಯಗಳ ಹಕ್ಕುಗಳ ಆಧಾರದಲ್ಲಿ ಎಲ್ಲರನ್ನು ಒಗ್ಗೂಡಿಸುವ ಪ್ರಯತ್ನವನ್ನು ನಡೆಸುತ್ತಾ ಬಂದಿದೆ. ಹೀಗಾಗಿಯೇ ಹಿಂದೆ ಕೇಂದ್ರ ಸರ್ಕಾರ 1983 ಜೂನ್ ರಲ್ಲಿ ಸರ್ಕಾರಿಯಾ ಆಯೋಗವನ್ನು (1988ರಲ್ಲಿ ವರದಿ ನೀಡಿತು) ಮತ್ತು ನಂತರದ ಅವಧಿಯಲ್ಲಿ 2007 ಎಪ್ರಿಲ್ 27 ರಂದು ಜಸ್ಟೀಸ್ ಮದನ್ ಮೋಹನ್ ಪಂಚ್ಚಿ ಯವರ ಆಯೋಗ, ಇತರೆ ಅದ್ಯಯನಗಳನ್ನು ನಡೆಸಿದೆ. ಆಯೋಗಗಳಿಂದ ಹಲವು ಪ್ರಮುಖ ಶಿಫಾರಸುಗಳನ್ನು ಕೂಡ ಪಡೆದಿದೆ. ಭಾರತದ ಯೋಜನಾ ಆಯೋಗವು ಈ ದೆಸೆಯಲ್ಲಿ ಎತ್ತಲಾದ ಪ್ರಶ್ನೆಗಳಿಗೆ ಸುಧಾರಣೆಗಳ ಹಲವು ಮಾರ್ಗಸೂಚಿಗಳನ್ನು ತಿಳಿಸಿದೆ. ಆದರೆ ಪರಿಸ್ಥಿತಿ ಅಷ್ಟೇನೂ ಸುಧಾರಿಸಿಲ್ಲ. ಭಾರತ ಒಕ್ಕೂಟ ಸರ್ಕಾರ ತನ್ನ ಬಂಡವಾಳಶಾಹಿ ಅಭಿವೃದ್ಧಿ ಪಥಕ್ಕೆ ಅನುಗುಣವಾಗಿಯೇ ನಡೆದುಕೊಳ್ಳುತ್ತಿದೆ ಹೊರತು ಬಹುತೇಕವಾಗಿ ಸಂವಿಧಾನಾತ್ಮಕ ಒಕ್ಕೂಟ ವ್ಯವಸ್ಥೆಯ ತತ್ವಗಳಿಗೆ ಬದ್ಧವಾಗಿ ಏನಲ್ಲ. ರಾಜ್ಯಗಳು ಸಂಪನ್ಮೂಲಗಳ ಕೊರತೆಯಿಂದ ನರಳಿದರೆ ಅಲ್ಲಿಯ ಜನತೆಗೆ ಪರಿಹಾರವನ್ನು ಮತ್ತು ಜೀವನಮಟ್ಟವನ್ನು ಎತ್ತರಿಸುವ ಅಭಿವೃದ್ಧಿಯನ್ನು ಸಹ ಒಂದು ಸೀಮಿತ ಅರ್ಥದಲ್ಲಿಯದರೂ ಸಾಧಿಸಲು ಸಾಧ್ಯವಾಗುವುದಿಲ್ಲ. ಇದು ರಾಜ್ಯಗಳಲ್ಲಿ ತೀವ್ರತರ ಅಸಹನೆ

ಪುಟ 6 ಕ್ಕೆ

ಬೀಸಲಾರಂಭಿಸಿದೆ ಚುನಾವಣಾ ಹವಾ

ಇದು 17 ನೆಯ ಲೋಕಸಭೆಯ ಕೊನೆಯ ಕಲಾಪ. ಹಾಗೇ ಅಲ್ಲಿ ಪ್ರಧಾನಿ ಮೋದಿಯವರ ಮಾತುಗಳೂ ಸಹ. ಮೋದಿಯವರು ಆಡಿದ ಮಾತುಗಳು ಮತ್ತು ಅದರ ಧಾಟಿ ವಿದಾಯದ ಹಾಗೂ ಚುನಾವಣಾ ಸಿದ್ಧತೆಯ ಪೂರ್ವ ಸೂಚನಾ ಭಾಷಣವಾಗಿದ್ದವು. ಅಂದರೆ ಲೋಕಸಭಾ ಚುನಾವಣೆ ತೀರಾ ನಿಕಟ ಎನ್ನುವುದನ್ನೂ ಸೂಚಿಸುತ್ತಿದ್ದವು.

17ನೆಯ ಲೋಕಸಭಾ ಚುನಾವಣೆಯ ಅವಧಿಯು ಜೂನ್ 16, 2024 ಕ್ಕೆ ಮುಗಿಯುತ್ತದೆ. ಸರಳ ಅಂದಾಜಿನಂತೆ ಮೇ ತಿಂಗಳಲ್ಲಿ 18ನೇ ಲೋಕಸಭೆ ಆಯ್ಕೆಗೊಳ್ಳಬೇಕು. ಅಂದರೆ ಏಪ್ರಿಲ್ ಅಥವಾ ಮೇ ಮಧ್ಯಭಾಗದಲ್ಲಿ ಚುನಾವಣೆಗಳು ನಡೆಯಬಹುದಾದ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ. ಆದರೆ ಈಗಿನ ಮಾಹಿತಿಯಂತೆ ಫೆಬ್ರವರಿ ಕೊನೆಯ ವಾರದಲ್ಲಿ ಅದರ ಕೆಲವು ಸೂಚನೆಗಳು ಸಿಗುವ ಸಂಭವ. ಮಾರ್ಚ್ ಮೊದಲ ವಾರ ಅಥವಾ ಎರಡನೇ ವಾರದಲ್ಲಿ ಚುನಾವಣಾ ಪ್ರಕ್ರಿಯೆಯು ಅಧಿಕೃತ ಪ್ರಕಟಗೊಳ್ಳಬಹುದು ಎನ್ನಲಾಗುತ್ತಿದೆ.

ಈ ವಾರ

ಎಸ್.ವೈ.ಗುರುಶಾಂತ್

ಇದು ಏನೇ ಇರಲಿ ಈಗಾಗಲೇ ಚುನಾವಣೆಯ ಸಿದ್ಧತೆಯ ಬಿರುಸು ಪಡೆದುಕೊಳ್ಳುತ್ತಿದೆ. ವಿವಿಧ ಪಕ್ಷಗಳ ಜೊತೆಗೆ ಮಾತುಕತೆಗಳು ಮತ್ತು ವಿವಿಧ ಪಕ್ಷಗಳ ನಾಯಕರುಗಳನ್ನು ಸೆಳೆಯುವುದು ಮತ್ತು ತಮಗಾಗದವರನ್ನು ಯಾವ ರೀತಿಯಲ್ಲಿ ಇ.ಡಿ. ಮುಂತಾದ ಏಜೆನ್ಸಿಗಳನ್ನು ಬಳಸಿ ಧಾಳಿಯ ಯತ್ನಗಳು ನಡೆಯುತ್ತಿವೆ. ಬಹುತೇಕ ಕರ್ನಾಟಕದಲ್ಲಿ 14ರಂದು ಹಣಕಾಸಿನ ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಬಜೆಟ್ ಮಂಡಿಸಿದ ನಂತರದಲ್ಲಿ ಚುನಾವಣಾ ಸಿದ್ದತೆಯು ವೇಗ ಪಡೆದುಕೊಳ್ಳಬಹುದು.

ಹಾಗೆ ನೋಡಿದರೆ ಸಿದ್ಧತೆಯ ವಿಷಯದಲ್ಲಿ ಕಾಂಗ್ರೆಸ್ ಇನ್ನು ಆಮೆ ನಡಿಗೆಯಲ್ಲಿದ್ದಂತೆ ಕಾಣುತ್ತದೆ, ಬಿಜೆಪಿ ಆಗಲೇ ಬಹಳಷ್ಟು ವೇಗದಲ್ಲಿ ಓಡುತ್ತಿದೆ. ಮುಖ್ಯವಾಗಿ ಕೆಳಹಂತದಲ್ಲಿ, ಬೂತ್ ಮಟ್ಟದ ಸಿದ್ಧತೆಯಲ್ಲಿ.

ಬಿಜೆಪಿ ಪ್ರತಿಯೊಂದು ಲೋಕಸಭಾ ಕ್ಷೇತ್ರದಲ್ಲಿ ತನ್ನ ಗೆಲುವಿಗೆ ಅಗತ್ಯವಿರುವ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ. ಒಟ್ಟಾರೆ ಕರ್ನಾಟಕದಲ್ಲಿ ಮತ್ತೆ ತನ್ನ ಹಿಂದಿನ ಸ್ಥಾನಗಳನ್ನಾದರೂ ಉಳಿಸಿಕೊಳ್ಳಬೇಕಾದರೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಆಗಿರುವ ಹಾನಿಯನ್ನು ತುಂಬಿಕೊಳ್ಳಲೇ ಬೇಕೆಂಬುದು ಅದರ ಲೆಕ್ಕಾಚಾರ. ಅದರ ಭಾಗವೇ ಯಡಿಯೂರಪ್ಪನವರ ಬಣಕ್ಕೆ ಮಣೆ! ಅವರ ಮಗ ಬಿ.ವೈ. ವಿಜಯೇಂದ್ರನನ್ನು ಬಿಜೆಪಿಯ ರಾಜ್ಯದ ಅಧ್ಯಕ್ಷನನ್ನಾಗಿಸುವ ಮೂಲಕ ಲಿಂಗಾಯತರ ಮತಗಳನ್ನು ಒಟ್ಟಿಗೆ ಇರಿಸಿಕೊಳ್ಳುವ ಒಂದು ಪ್ರಯತ್ನ. ಆದರೆ ಅದರಿಂದ ಅದೆಷ್ಟು ಪ್ರಯೋಜನವಾಗುತ್ತದೆ ಎನ್ನುವುದು ಸರಿಯಾಗಿ ಯಾರೂ ಹೇಳಲಾರರು! ಯಾಕೆಂದರೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯು ತನ್ನ ಶೇಕಡಾವಾರು ಮತಗಳನ್ನು ಹಾಗೆಯೇ ಉಳಿಸಿಕೊಂಡಿತ್ತು. ಈಗ ಕಾಂಗ್ರೆಸ್ ನಲ್ಲಿದ್ದ ಜಗದೀಶ್ ಶೆಟ್ಟರ್ ಅವರನ್ನು ಬಿಜೆಪಿ ತನ್ನತ್ತ ಮತ್ತೆ ಸೆಳೆದಿದೆಯಾದರೂ ಅದೆಷ್ಟು ಪರಿಣಾಮ ಬೀರಬಲ್ಲದು ಎನ್ನುವುದನ್ನು ಊಹಿಲಾಗದು. ಜಗದೀಶ್ ಶೆಟ್ಟರ್ ಅಂಥವರು ಬಿಜೆಪಿ ತೊರೆದು ಕಾಂಗ್ರೆಸ್ಸಿಗೆ ಬಂದದ್ದು ಆಗಲೇ ಬಿಜೆಪಿ ವಿರೋಧವಾಗಿ ಕಾಂಗ್ರೆಸ್ ಗೆ ಪರವಾಗಿ ಜನರ ನಡುವೆ ಇದ್ದ ಒಂದು ಭಾವನೆಗೆ ಬಲ ಕೊಡುವಂತಾಗಿದೆ ಎನ್ನುವುದನ್ನು ಹೊರತುಪಡಿಸಿದರೆ ಅದೆಷ್ಟು ಪ್ರಮಾಣದಲ್ಲಿ ಲಿಂಗಾಯಿತರ ಮತಗಳನ್ನು ತರಲು ಸಾಧ್ಯವಾಯಿತು ಎನ್ನುವುದು ಯಾರಿಗೂ ಖಚಿತವಿಲ್ಲ. ಆದರೂ ಈಗ ಅಂತವರನ್ನೆಲ್ಲ ಮತ್ತೆ ಪುನಃ ಸೆಳೆಯುವುದರ ಮೂಲಕ ಬಿಜೆಪಿ ದುರ್ಬಲವಲ್ಲ, ಆಗಿಲ್ಲ ಎನ್ನುವ ಒಂದು ಸೂಚನೆಯನ್ನು ಕೊಡುತ್ತಿದೆ. ಅದಕ್ಕೆ ಜೆಡಿ–ಎಸ್ ಸಾಥ್ ನೀಡುತ್ತಿರುವುದು ಹೆಚ್ಚಿನ ಬಲ ತಂದಂತಿದೆ. ಆದಾಗ್ಯೂ ಹಲವಾರು ಲೋಕಸಭಾ ಕ್ಷೇತ್ರದಲ್ಲಿ ಜೆಡಿಎಸ್ಸಿನ ಜೊತೆಯಲ್ಲಿ ಬಿಜೆಪಿ ಮೈತ್ರಿ ನೂರಕ್ಕೆ ನೂರರಷ್ಟು ವರ್ಕೌಟ್ ಆಗುತ್ತದೆ ಎಂದು ಹೇಳಲಾಗುವುದಿಲ್ಲ. ಕೆಲವೆಡೆ ಅದು ನೆಗೆಟಿವ್ ಸಹ ಆಗಬಹುದು. ಆದರೂ ಅವರ ನಡುವೆ ಒಂದು ವಾಸ್ತವಿಕ ಅಂದಾಜು ಇರುವುದನ್ನು ಅಲ್ಲಗಳೆಯಲಾಗುವುದಿಲ್ಲ. ಹಾಸನದಂತಹ ಕಡೆಯಲ್ಲಿ ಜೆ.ಡಿ.ಎಸ್. ನ ಪ್ರಜ್ವಲ ರೇವಣ್ಣ ಸ್ಪರ್ದೆಗೆ ಆಕ್ಷೇಪ, ಅಡ್ಡಿಗಳು ಎದ್ದು ಬಂದಿವೆ. ತುಮಕೂರಿನಲ್ಲಿ ಬಿಜೆಪಿಯು ಸ್ಪರ್ಧಿಸಲು ಸಿದ್ಧಗೊಂಡಿದೆ. ಜೆ.ಡಿ.ಎಸ್.ಗೆ ಮಂಡ್ಯ ಕೂಡ ಅಷ್ಟು ಸುಲಭ ಇಲ್ಲ. ಜೆಡಿಎಸ್ಸಿಗೆ ಆಸ್ಥಾನ ಬಿಟ್ಟುಕೊಟ್ಟರೆ ಸುಮಲತಾ ರವರು ಕಾಂಗ್ರೆಸ್ ನಿಂದ ಸ್ಪರ್ದಿಸಬಹುದು. ಇದರ ಪೂರ್ವ ಕಸರತ್ತಾಗಿ ಸುಮಲತಾ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾರ ಅವರನ್ನು ಕಂಡು ತಮ್ಮ ಆಹವಾಲನ್ನು ಸಲ್ಲಿಸಿದ್ದಾರೆ.

ಹೀಗೆ ಒಂದಲ್ಲೊಂದು ಬಗೆಯಲ್ಲಿ ಚುನಾವಣೆಯ ಸಿದ್ಧತೆಯ ಆರಂಭವೂ ವೇಗ ಪಡೆದುಕೊಳ್ಳುತ್ತಿದೆ. ಒಟ್ಟಾರೆ ಬಿಜೆಪಿಗೆ ಎದುರಾಗಿ ಒಂದು ಪರಿಣಾಮಕಾರಿಯಾಗಿ ಪ್ರತಿರೋಧ ಒಡ್ಡಲೇಬೇಕು ಮತ್ತು ಸೋಲಿಸಲೇಬೇಕು ಎನ್ನುವ ಪ್ರಯತ್ನಗಳು ಕೂಡ ನಡೆದಿವೆ.

* * *

ಬಿಜೆಪಿ ನಾಯಕರಲ್ಲಿ ಮಾತುಗಳ ಸ್ಪರ್ದೆ

ರಾಜ್ಯಕ್ಕೆ ಸಿಗಬೇಕಾದ ತೆರಿಗೆಯ ಪಾಲು ಮತ್ತು ಅನುದಾನ ಮುಂತಾದವುಗಳಲ್ಲಿ ಕೇಂದ್ರ ಸರ್ಕಾರ ಮಾಡುತ್ತಿರುವ ತಾರತಮ್ಯಗಳನ್ನ ವಿರೋಧಿಸಿ ಸಂಸದ ಡಿ.ಕೆ. ಸುರೇಶ ಆಡಿದ ಮಾತು ಇಂದಿಗೂ ಬಿಜೆಪಿ ನಾಯಕರ ಬಾಯಿಗವಳವಾಗಿದೆ. ಸಂಸದ ಸುರೇಶ್ ಅವರು ಆ ರೀತಿಯಲ್ಲಿ ಆಡಬೇಕಿರಲಿಲ್ಲ. ಯೋಚನೆಯ ಆ ಧಾಟಿಯೇ ತಪ್ಪು. ಅವರು ಅವರ ಮಾತುಗಳ ರಾಜಕೀಯ ಪರಿಣಾಮಗಳನ್ನು ಯೋಚಿಸಬೇಕಿತ್ತು. ಬಿಜೆಪಿಯ ಆಡಳಿತದ ರಾಜ್ಯಗಳಿಗೆ ನೀಡುತ್ತಿರುವ ಅನುದಾನ ಮತ್ತು ಸಂಪನ್ಮೂಲಗಳು ಅತ್ಯಧಿಕವಾಗಿರುವುದನ್ನು ಎತ್ತಿ ತೋರಿಸಿ ಕರ್ನಾಟಕ ಒಳಗೊಂಡು ಇತರೆ ದಕ್ಷಿಸದ ರಾಜ್ಯಗಳಿಗೆ ಆಗುತ್ತಿರುವ ಅನ್ಯಾಯಗಳನ್ನು ಬಿಡಿಸಿಟ್ಟ ಪ್ರಸಂಗವನ್ನೇ ಹಿನ್ನೆಲೆಯಾಗಿರಿಸಿ ಪ್ರಧಾನಿ ಮೋದಿಯವರು ಕೂಡ ಅಂತಹ ಮಾತುಗಳು ದೇಶ ವಿಭಜನೆಯ ಮಾತುಗಳು ಎಂದು ಸಂಸತ್ತಿನಲ್ಲಿ ಆಡಿರುವುದು ಕೂಡ ವಿಚಿತ್ರವಾಗಿದೆ! ಅಂತಹ ಮಾತುಗಳನ್ನೇ ಆಧಾರವಾಗಿಟ್ಟುಕೊಂಡು ಮೂಲಭೂತವಾಗಿ ತಮ್ಮ ದೋಷಗಳನ್ನು ಮತ್ತು ಮೋಸಗಳನ್ನು ಮುಚ್ಚಿ ಹಾಕಿಕೊಳ್ಳಲು ಬಿಜೆಪಿ ನಾಯಕರು ಪ್ರಯತ್ನಿಸಿದ್ದು ಸುಳ್ಳೇನಲ್ಲ.

ಪುಟ 6 ಕ್ಕೆ

ಹಾಥ್ರಸ್ ಕಾಂಡ: ಮನುವಾದಿ ಅನ್ಯಾಯಕ್ಕೊಂದು ರೂಪಕ.......... ಪುಟ 2 ರಿಂದ

ಕೋರ್ಟ್‌ನಲ್ಲಿ ಪ್ರಕರಣವನ್ನು ಎದುರಿಸಲು ಸೂಕ್ತ ವ್ಯವಸ್ಥೆ ಮಾಡಬೇಕಿತ್ತು, ಏಪ್ರಿಲ್ 2023ರಲ್ಲಿ, ಮುಖ್ಯ ನ್ಯಾಯಮೂರ್ತಿ ನೇತೃತ್ವದ ತ್ರಿಸದಸ್ಯ ಪೀಠವು ಲಕ್ನೌ ನ್ಯಾಯಾಲಯದ ತೀರ್ಪಿಗೆ ತಡೆ ಕೋರಿದ ಸರ್ಕಾರದ ಮನವಿಯನ್ನು ತಿರಸ್ಕರಿಸಿತು. ಆದರೆ ತೀರ್ಪನ್ನು ಜಾರಿಗೊಳಿಸಲು ಸರ್ಕಾರ ನಿರಾಕರಿಸಿತು. ಸುಪ್ರೀಂ ಕೋರ್ಟ್‌ನಲ್ಲಿ ಮುಂದಿನ ವಿಚಾರಣೆ ಜನವರಿ 2024ರ ನಂತರ ನಡೆಯಲಿದೆ. ಈ ಎರಡೂ ಪ್ರಕರಣಗಳಲ್ಲಿ ಕಾನೂನು ಪ್ರಕ್ರಿಯೆಯ ಹೊರೆ, ಆತಂಕ ಮತ್ತು ವೆಚ್ಚವನ್ನು ಕುಟುಂಬವೇ ಭರಿಸಬೇಕಾಗುತ್ತದೆ. ಎರಡೂ ಸಂದರ್ಭಗಳಲ್ಲಿ ಅವರು ಸರ್ಕಾರದ ವಿರುದ್ಧ ಹೋರಾಡಬೇಕಾಗಿರುವುದು ಕೂಡ ಅವರೇ.

ನಾಲ್ಕನೇ ಹಂತ-ಉಳಿವಿಗಾಗಿ ಹೋರಾಟ

ಪ್ರಸ್ತುತ ನಾಲ್ಕನೇ ಮತ್ತು ಮುಂದುವರೆಯುತ್ತಿರುವ ಹಂತವೆಂದರೆ, ಗ್ರಾಮ ಮಟ್ಟದಿಂದ ಸರ್ಕಾರದ ಉನ್ನತ ಮಟ್ಟದ ವರೆಗೆ ಬಲಿಷ್ಠ ಶಕ್ತಿಗಳ ವೈಷಮ್ಯವನ್ನು ಎದುರಿಸಿ ಕೇವಲ ಬದುಕುಳಿಯುವುದಕ್ಕೂ ದಿನನಿತ್ಯದ ಹೋರಾಟ ನಡೆಸಬೇಕಾದ ಹಂತ. ಕಳೆದ ವರ್ಷ ಆರೋಪಿಗಳು ಬಿಡುಗಡೆಯಾದ ದೃಶ್ಯಗಳ ಬಗ್ಗೆ ಸೋದರರಾದ ಸತಿಂದರ್ ಮತ್ತು ಸಂದೀಪ್ ನಮಗೆ ತಿಳಿಸಿದರು. ಬಿಲ್ಕಿಸ್ ಬಾನೋ ಪ್ರಕರಣದಲ್ಲಿ ಅತ್ಯಾಚಾರಿಗಳು ಮತ್ತು ಕೊಲೆಗಾರರನ್ನು ಬಿಡುಗಡೆ ಮಾಡಿದಾಗ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಆಚರಿಸಿದ ರೀತಿಯನ್ನು ಇದು ನಮಗೆ ನೆನಪಿಸುತ್ತದೆ. "ಮಾರ್ಚ್ 3, 2023ರಂದು ತೀರ್ಪಿನ ನಂತರ ಅವರನ್ನು ತಕ್ಷಣವೇ ಬಿಡುಗಡೆ ಮಾಡಲಾಯಿತು. ಇದು ಹೋಳಿ ಹಬ್ಬಕ್ಕೆ ಕೆಲವು ದಿನಗಳ ಮೊದಲು ಸಂಭವಿಸಿತು. ಆದರೆ ಆಗಲೇ ಹೋಳಿಯನ್ನು ಆಚರಿಸುವಂತಿತ್ತು. ತಮಟೆವಾದ್ಯಗಳೊಂದಿಗೆ ಹೂವುಗಳನ್ನು ಎರಚಿದರು, ಅವರ ಸಮುದಾಯದವರು ಹೂವಿನ ಹಾರ ಹಾಕಿ ಸ್ವಾಗತಿಸಿದವರು, ಊರೆಲ್ಲ ಮೆರವಣಿಗೆಯಲ್ಲಿ ಒಯ್ದರು" ಎಂದು ಅವರು ಹೇಳಿದರು. ಬುಲ್‌ಗರ್ಹಿ ಗ್ರಾಮದಲ್ಲಿ ಕೇವಲ ಆರು ದಲಿತ ಕುಟುಂಬಗಳಿವೆ. ಆ ಹಳ್ಳಿಯ ಬಹುಪಾಲು ಕುಟುಂಬಗಳು ಠಾಕೂರರು. ಆರೋಪಿಗಳೆಲ್ಲ ಈ ಜಾತಿಗೆ ಸೇರಿದವರು. ಬ್ರಾಹ್ಮಣ ಕುಟುಂಬಗಳ ಸಂಖ್ಯೆಯೂ ಗಮನಾರ್ಹವಾಗಿದೆ. ತಾವು ಭಯಭೀತರಾಗಿ, ಒಂಟಿಯಾಗಿರಬೇಕು ಎನ್ನುತ್ತಾರೆ ಸಂತ್ರಸ್ತ ಕುಟುಂಬದವರು.

ಆರಂಭದಲ್ಲಿ ಕುಟುಂಬಕ್ಕೆ ಸರ್ಕಾರ 25 ಲಕ್ಷ ರೂಪಾಯಿ ಪರಿಹಾರ ನೀಡಿತ್ತು. ಕುಟುಂಬಕ್ಕೆ 24 ಗಂಟೆ ಭದ್ರತೆ ನೀಡಬೇಕೆಂಬ ನ್ಯಾಯಾಲಯದ ಆದೇಶ ಜಾರಿಯಾಗಿದೆ. ನಾವು ಕುಟುಂಬವನ್ನು ಭೇಟಿ ಮಾಡಲು ಹೋದಾಗ, ಅವರ ಕಾಂಪೌಂಡ್‌ನ ಒಂದು ಭಾಗದಲ್ಲಿ ಕೇಂದ್ರೀಯ ಪಡೆಗಳ ಕ್ಯಾಂಪ್ ಕಾಣಿಸಿತು. ಕುಟುಂಬದ ರಕ್ಷಣೆ ಹಾಗೂ ಅವರ ಸುರಕ್ಷತೆಗಾಗಿ 15 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದರು. ಅವರಿಲ್ಲದಿದ್ದರೆ ಇಡೀ ಕುಟುಂಬವನ್ನೇ ಸಾಯಿಸುತ್ತಿದ್ದರು ಎಂದು ಕಾನ್‌ಸ್ಟೆಬಲ್ ಒಬ್ಬರು ಹೇಳಿದರು. "ಈ ಕುಟುಂಬದವರು ನ್ಯಾಯಾಲಯದಲ್ಲಿ ಹೋರಾಟ ನಡೆಸುತ್ತಿದ್ದಾರೆ ಎಂದು ಇವರ ಮೇಲೆ ಗ್ರಾಮಸ್ಥರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ" ಎಂದು ಪೊಲೀಸರು ತಿಳಿಸಿದರು..

ಆದರೆ ಭದ್ರತೆಯೂ ಕೂಡ ಎರಡು ಅಲುಗಿನ ಕತ್ತಿ ಎಂಬುದು ಸಾಬೀತಾಗಿದೆ. ಇಬ್ಬರು ಸಹೋದರರೂ ತಮ್ಮ ಉದ್ಯೋಗ ಕಳೆದುಕೊಂಡರು. ಸತೀಂದರ್ ನೋಯ್ಡಾದಲ್ಲಿ ಒಂದು ಉತ್ಪಾದನಾ ಕಾರ್ಖಾನೆಯಲ್ಲಿ ಆತನ ತಮ್ಮ ಸಂದೀಪ್ ಗಾಜಿಯಾಬಾದ್ ನ ಒಂದು ಮೊಬೈಲ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಅವರು ತಂದೆ-ತಾಯಿಯನ್ನು ನೋಡಿಕೊಳ್ಳಲು ಹಳ್ಳಿಯಲ್ಲಿರುವ ಮನೆಗೆ ಬರುವಂತಾಗಿದೆ. ಈಗ ಭದ್ರತಾ ಸಿಬ್ಬಂದಿ ಇಲ್ಲದೆ ಮನೆಯಿಂದ ಹೊರಬರುವಂತಿಲ್ಲ. ಅವರ ಜೊತೆ ಸಶಸ್ತ್ರ ಪೋಲೀಸರೂ ಇರುತ್ತಾರೆ. ಹಾಗಾಗಿ ಅವರನ್ನು ಯಾರೂ ಕೆಲಸ ತೆಗೆದುಕೊಳ್ಳಲು ಇಷ್ಟಪಡುವುದಿಲ್ಲ. ಕೆಲವು ದಶಕಗಳ ಹಿಂದೆ ದಲಿತರಿಗೆ ಭೂ ವಿತರಣಾ ಕಾರ್ಯಕ್ರಮದಲ್ಲಿ ಅವರಿಗೆ ಐದು ಭಿಗಾ ಭೂಮಿ ನೀಡಲಾಗಿತ್ತು. ಎರಡು ಭಿಗಾ ಭೂಮಿಯನ್ನು ಮೇಲ್ಜಾತಿಯವರು ಅಕ್ರಮವಾಗಿ ವಶಪಡಿಸಿಕೊಂಡಿದ್ದಾರೆ. ಉಳಿದ ಜಮೀನಿನಲ್ಲಿ ಕೃಷಿ ಕೆಲಸಕ್ಕೆ ಹೋಗುವಾಗಲೂ ಪೋಲೀಸರು ಜೊತೆಯಾಗುತ್ತಾರೆ, ಕೊನೆಗೆ ತರಕಾರಿ ಕೊಳ್ಳಲೂ ಮನೆಯಿಂದ ಹೊರಗೆ ಕಾಲಿಡಲಾಗದೆ, ಮಾರುಕಟ್ಟೆಗೆ ಹೋದಾಗ ಮುಂದೆ ಇಬ್ಬರು, ಹಿಂದೆ ಇಬ್ಬರು ಪೋಲೀಸರು, ಎಲ್ಲರ ಕಣ್ಣು ನಮ್ಮ ಮೇಲೆ ಇದೆ, ಆದ್ದರಿಂದ ನಾವು "ಹಾಥ್ರಸ್ ಪ್ರಕರಣ" ಕುಟುಂಬ ಎಂದು ಗುರುತಿಸಲ್ಪಟ್ಟಿದ್ದೇವೆ. ಕುಟುಂಬವು ಶಾಂತಿ ದೇವಿ ಎಂಬ 80 ವರ್ಷದ ಅಜ್ಜಿ ಮತ್ತು ಸಂತ್ರಸ್ತೆಯ ತಂದೆ ತಾಯಿಗಳಾದ ಓಂ ಪ್ರಕಾಶ್ ಮತ್ತು ರಮಾ ದೇವಿ ಅವರನ್ನು ಒಳಗೊಂಡಿದೆ.

ಓಂ ಪ್ರಕಾಶ್ ದಶಕಗಳಿಂದ (ಪಶ್ಚಿಮ ಬಂಗಾಲದ) ಅಸನ್ ಸೋಲ್‌ನಲ್ಲಿ ದಶಕಗಳಿಂದ ಕಾರ್ಮಿಕರಾಗಿ ದುಡಿಯುತ್ತಿದ್ದವರು.. ಅವರಿಗೆ ಕೆಂಬಾವುಟದ ಪರಿಚಯವಿದೆ. ಜ್ಯೋತಿ ಬಸು ಅವರ ಆಡಿಯ ಬಂಗಾಳದಲ್ಲಿ ಇಂತಹ ಅನ್ಯಾಯ ನಡೆಯುವುದು ಸಾಧ್ಯವಿರಲಿಲ್ಲ ಎಂದರು. ಇನ್ನು, ಸತೀಂದರ್ ಪತ್ನಿ ಸಂಧ್ಯಾ, ಅವರ ಮೂವರು ಮಕ್ಕಳು, 23 ವರ್ಷದ ಅವರ ತಮ್ಮ ಸಂದೀಪ್ ಇದ್ದಾರೆ. ಭದ್ರತೆಯ ಕಾರಣದಿಂದ ಅವರ ಮಕ್ಕಳು ಶಾಲೆಗೆ ಹೋಗುತ್ತಿಲ್ಲ. ಹಿರಿಯ ಮಗುವನ್ನು ಸಂಧ್ಯಾ ಅವರ ತಂದೆತಾಯಿ ಹತ್ತಿರ ಬಿಟ್ಟಿದ್ದಾರೆ. ಇಬ್ಬರು ಸಣ್ಣಮಕ್ಕಳಿಗೆ ಶಿಕ್ಷಣದ ಹಕ್ಕಿಗೆ ಈ ಪರಿಸ್ಥಿತಿಯಿಂದ ಅಡ್ಡಿಯಾಗಿದೆ.

ಪರಿಹಾರದ ಹಣ ಪ್ರಕರಣಕ್ಕೆ ಖರ್ಚು ;ಕುಟುಂಬ ಆರ್ಥಿಕ ಸಂಕಷ್ಟದಲ್ಲಿದೆ. ಈ ಮೂರು ವರ್ಷಗಳಲ್ಲಿ ಪರಿಹಾರವಾಗಿ ನೀಡಿದ ಹಣವನ್ನು ಪ್ರಕರಣಕ್ಕೆ ಖರ್ಚು ಮಾಡಲಾಗುತ್ತಿದೆ. ಸಹಾನುಭೂತಿ ಹೊಂದಿರುವ ವಕೀಲರು ಶುಲ್ಕ ತೆಗೆದುಕೊಳ್ಳದಿದ್ದರೂ ಪ್ರತಿ ಬಾರಿ ನ್ಯಾಯಾಲಯಕ್ಕೆ ಹೋದಾಗಲೂ 15 ಸಾವಿರದಿಂದ 20 ಸಾವಿರ ರೂ. ಬೇಕಾಗುತ್ತದೆ. ತಮ್ಮ ಕುಟುಂಬದ ಸದಸ್ಯರಿಗೆ ಮಾತ್ರವಲ್ಲದೆ ಭದ್ರತಾ ಸಿಬ್ಬಂದಿಗೂ ಅವರು ವಾಹನವನ್ನು ಬಾಡಿಗೆಗೆ ಪಡೆಯಬೇಕು. ಕೆಲವು ಸಂದರ್ಭಗಳಲ್ಲಿ, ವಿಶೇಷವಾಗಿ ಆರಂಭಿಕ ದಿನಗಳಲ್ಲಿ, ಅವರು ವಿವಿಧ ನ್ಯಾಯಾಲಯಗಳಿಗೆ ಹೋಗಬೇಕಾಗಿತ್ತು. ತಿಂಗಳಿಗೆ ಹಲವಾರು ಬಾರಿ ಲಕ್ನೌ ಮತ್ತು ಅಲಹಾಬಾದ್‌ಗೆ ಹೋಗಬೇಕಾಗಿತ್ತು. ಪ್ರತಿಯೊಂದು ಸಂದರ್ಭದಲ್ಲೂ ಕುಟುಂಬವು ಸಾರ್ವಜನಿಕ ಕಾರ್ಯಕ್ರಮಗಳಿಗೆ ಹೋಗಬೇಕು. ಆಗಲೂ ಇದೇ ರೀತಿ ಖರ್ಚು. ಪ್ರಯಾಣದ ವ್ಯವಸ್ಥೆಯನ್ನು ಕುಟುಂಬದವರೇ ನೋಡಿಕೊಳ್ಳಬೇಕು. ಪರಿಣಾಮವಾಗಿ, ಕುಟುಂಬವು ಹೊರಗೆ ಹೋಗುವುದನ್ನು ನಿಲ್ಲಿಸಿತು.


> ಒಂದು ವೇಳೆ ಜಾತಿ ಸಮೀಕರಣ ವ್ಯತಿರಿಕ್ತವಾಗಿದ್ದರೆ, ಅಪರಾಧಿಗಳು ದಲಿತರು ಅಥವ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರಾಗಿದ್ದರೆ, ಮತ್ತು ಬಾಧಿತರು ಮೇಲ್ಜಾತಿಗೆ ಸೇರಿದವರಾಗಿದ್ದರೆ ಒಂದು ವೇಳೆ ಆ ಹುಡುಗಿ ಹಾಥ್ರಸ್‌ನಲ್ಲಿ ಬಲಿಯಾದವಳಂತೆ ಸಾಯುವ ಮುನ್ನದ ಹೇಳಿಕೆಯನ್ನು ನೀಡಿದ್ದರೆ, ಅದನ್ನು ಯಾವುದೇ ತಕರಾರಿಲ್ಲದೆ ಒಪ್ಪಿಕೊಳ್ಳುತ್ತಿದ್ದರು. ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸುತ್ತಿದ್ದರು. ನ್ಯಾಯಾಲಯವು ಯಾವಾಗಲೂ ಸಾಯುವ ಮುನ್ನ ಬಾಧಿತರು ಕೊಡುವ ಹೇಳಿಕೆಗಳಿಗೆ ವಿಶೇಷ ಗಮನ ನೀಡುತ್ತದೆ. ಆದರೆ ಹಾಥ್ರಸ್‌ನಲ್ಲಿ ಬಲಿಯಾದವಳು ವಾಲ್ಮೀಕಿ ಸಮುದಾಯಕ್ಕೆ ಸೇರಿದ ಹುಡುಗಿ. ಮತ್ತು ಆಕೆ ಮೇಲ್ಜಾತಿಗೆ ಸೇರಿದವರ ಮೇಲೆ ಆರೋಪ ಮಾಡಿದ್ದಳು.

ಕಳೆದ ವರ್ಷ ಸಂಧ್ಯಾ ತೀವ್ರ ಅಸ್ವಸ್ಥರಾಗಿದ್ದರು. ಆಕೆಯನ್ನು ಆಗ್ರಾದ ಆಸ್ಪತ್ರೆಗೆ ಸೇರಿಸಬೇಕಾಯಿತು. ಆಕೆಯ ವೈದ್ಯಕೀಯ ವೆಚ್ಚದ ಹೊರತಾಗಿ, ಕುಟುಂಬವು ಭದ್ರತಾ ಸಿಬ್ಬಂದಿಯ ವೆಚ್ಚದೊಂದಿಗೆ ಪ್ರತ್ಯೇಕ ಕೊಠಡಿಯನ್ನು ಸಹ ವ್ಯವಸ್ಥೆ ಮಾಡಬೇಕಾಗಿತ್ತು. ನಮ್ಮೊಂದಿಗೆ ಮಾತನಾಡುತ್ತಿರುವಾಗ ರಮಾದೇವಿಯವರು ಹಲವು ಬಾರಿ ಕಣ್ಣೀರಿಟ್ಟರು. ಮಗಳಿಗೆ ಅಮಾನುಷವಾಗಿ ಚಿತ್ರಹಿಂಸೆ ನೀಡಿದವರನ್ನು ಬಿಡುಗಡೆಗೊಳಿಸಿ ನಮಗೆ ಆಗಿರುವ ಅನ್ಯಾಯವನ್ನು ಒಪ್ಪಿಕೊಳ್ಳುವುದು ಕಷ್ಟವಾಗಿದೆ ಎಂದರು. ಇದು ತನ್ನ ಮಗಳಲ್ಲದೇ ಇಡೀ ಕುಟುಂಬವನ್ನೇ ನಾಶ ಮಾಡಿದೆ ಎಂದು ಅಳಲು ತೋಡಿಕೊಂಡರು. ತನ್ನ ಪುತ್ರರತ್ತ ಬೊಟ್ಟು ಮಾಡಿ, ಈ ನನ್ನ ಮಕ್ಕಳು ಯಾವ ಅಪರಾಧ ಮಾಡಿ ಸಾಮಾನ್ಯ ಜೀವನದಿಂದ ದೂರ ಸರಿದಿದ್ದಾರೆ? ಅವರಿಗೆ ಯಾವುದೇ ಕೆಲಸವಿಲ್ಲದೆ ನಾವು ಹೇಗೆ ಬದುಕಬೇಕು ಎಂದು ಪ್ರಶ್ನಿಸುತ್ತಾಳೆ. ಪರಿಹಾರವಾಗಿ ನೀಡಿದ ಹಣ ಬಹುತೇಕ ಖಾಲಿಯಾಗಿದೆ ಎಂದು ಸತೀಂದರ್ ಹೇಳಿದರು. ಪ್ರಕರಣದ ಖರ್ಚಿಗೆ ಒಂದಿಷ್ಟು ಹಣ ಇಟ್ಟುಕೊಂಡು ಇತರೆ ಖರ್ಚು ಕಡಿಮೆ ಮಾಡಲು ಯತ್ನಿಸುತ್ತಿದ್ದೇವೆ ಎಂದರು. ಊಟ, ಕನಿಷ್ಠ ಖರ್ಚಿಗೆ ತಿಂಗಳಿಗೆ ಕನಿಷ್ಠ 15 ಸಾವಿರ ರೂಪಾಯಿ ಬೇಕು, ಆದರೆ ಆದಾಯ ಇಲ್ಲದೇ ಪರದಾಡುವಂತಾಗಿದೆ ಎಂದರು. ತೊಟ್ಟಿದ್ದ ಬಟ್ಟೆಯನ್ನು ತೋರಿಸಿ, ಇವುಗಳನ್ನು ಸಂಬಂಧಿಕರು ಕೊಟ್ಟಿದ್ದು, ತಮ್ಮ ಕಷ್ಟಗಳನ್ನು ಹೇಳಿಕೊಳ್ಳಲು ನಾಚಿಕೆಯಾಗುತ್ತಿದೆ ಎಂದರು.

ಇಲ್ಲಿನ ಸಂಸದ ಒಮ್ಮೆಯೂ ಭೇಟಿ ಮಾಡಿಲ್ಲ ;ಇಲ್ಲಿನ ಲೋಕಸಭೆ ಸ್ಥಾನ ಪರಿಶಿಷ್ಟ ಜಾತಿಯವರಿಗೆ ಮೀಸಲಾಗಿದೆ. ಹಾಲಿ ಸಂಸದ ಬಿಜೆಪಿಗೆ ಸೇರಿದ ರಾಜ್ವೀರ್ ದಿಲೇರ್. ಆತ ಸಂತ್ರಸ್ತೆಯ ಕುಟುಂಬವನ್ನು ಒಮ್ಮೆಯೂ ಭೇಟಿ ಮಾಡಿಲ್ಲ. ಅವರ ನೋವಿನ ಕುರಿತು ಕೇಳಿದಾಗ, ಸರ್ಕಾರ 25 ಲಕ್ಷ ರೂ. ಕೊಟ್ಟಿದೆ. ಇನ್ನೂ ಸರ್ಕಾರ ಏನುಮಾಡಬೇಕು ಎನ್ನುತ್ತಾರೆ. ತಮ್ಮ ಮನೆಯಲ್ಲಿ ಟೀ ಕುಡಿಯಲು ಬಳಸುವ ಲೋಟಗಳಲ್ಲಿ ದಲಿತರಿಗೆ ಟೀ ಕೊಡದ ಮೇಲ್ಜಾತಿಯವರ ಮನೆಗಳಿಗೆ ಆ ಸಂಸದ ಹೋದರೆ, ಅವರೇ ಸ್ವತಃ ಟೀ ಲೋಟ ತೆಗೆದುಕೊಂಡು, ಆ ಲೋಟದಿಂದ ಟೀ ಕುಡಿಯುತ್ತಾರೆ ಎಂಬ ಕಥೆಯನ್ನು ನಮಗೆ ಹೇಳಿದರು. ಇವು ಒಬ್ಬ ಬಿಜೆಪಿಯ ಪರಿಶಿಷ್ಟ ಜಾತಿ ಎಂಪಿ ನಾಚಿಕೆಯಿಲ್ಲದೆ ಪಾಲಿಸುವ ಜಾತಿ ನಿಯಮಗಳು. ಇಲ್ಲಿ ಎಲ್ಲಾ ದಲಿತರು ಅನುಸರಿಸ ಬೇಕಾದ ಜಾತಿನಿಯಮಗಳು.

ಈ ಭಯಾನಕ ಪರಿಸ್ಥಿತಿಯು ದಲಿತ ಕುಟುಂಬಗಳಿಗೆ ವಿಧಿಸಿರುವ ಶಿಕ್ಷೆ, ತಮ್ಮ ತಂಗಿಯ, ಅವರ ಮಗಳ ಮೇಲೆ ಅತ್ಯಾಚಾರ ಮತ್ತು ಕೊಲೆ ಮಾಡಿದವರೊಂದಿಗೆ ರಾಜಿ ಮಾಡಿಕೊಳ್ಳಲು ನಿರಾಕರಿಸಿದ ಕಾರಣ ಅವರಿಗೆ ಇಂತಹ ಶಿಕ್ಷೆ. ಹಾಥ್ರಸ್ ದಲಿತರು ಮತ್ತು ಮಹಿಳೆಯರ ವಿರುದ್ಧ ಬಿಜೆಪಿಯ ಡಬಲ್ ಇಂಜಿನ್ ಸರ್ಕಾರದ ಅನ್ಯಾಯ, ಕ್ರೌರ್ಯ ಮತ್ತು ಮನುಸ್ಮೃತಿಯ ಜಾರಿಗೆ ಒಂದು ರೂಪಕವಾಗಿದೆ.

ಸಿಪಿಐ(ಎಂ) ಹಿರಿಯ ಸದಸ್ಯ ರಾಜು ಪೂಜಾರಿ ನಿಧನ



ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿದ್ದು, ನಂತರ 1964 ರಿಂದ ಸಿಪಿಐ(ಎಂ) ಪಕ್ಷದ ಸದಸ್ಯರಾಗಿದ್ದ ರಾಜು ಪೂಜಾರಿಯವರು ಫೆಬ್ರವರಿ 9 ರಂದು ಉಡುಪಿ ನಗರದ ಕುಕ್ಕಿಕಟ್ಟೆಯಲ್ಲಿರುವ ತನ್ನ ಮಗಳ ಮನೆಯಲ್ಲಿ ನಿಧನರಾಗಿರುತ್ತಾರೆ. ಅವರಿಗೆ 98 ವರ್ಷ ವಯಸ್ಸಾಗಿತ್ತು. ಚಿಕ್ಕಂದಿನಿಂದಲೇ ಸ್ವತಃ ಬೀಡಿ ಕಾರ್ಮಿಕರಾಗಿದ್ದ ರಾಜು ಪೂಜಾರಿ ಯವರು ತಮ್ಮ ಸಂಘಟನಾ ಸಾಮರ್ಥ್ಯದಿಂದ ಉಡುಪಿ ಬೀಡಿ ಮತ್ತು ಲೇಬರ್ ಯೂನಿಯನ್‌ನ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. ಬೀಡಿ ಕಾರ್ಮಿಕರ ವೇತನ, ಬೋನಸ್ ಮತ್ತಿತರ ಸೌಲಭ್ಯಕ್ಕಾಗಿ ನಡೆದ ಹೋರಾಟಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ತನ್ನ ಇಳಿ ವಯಸ್ಸಿನಲ್ಲಿಯೂ ಬೀಡಿ ಕಾರ್ಮಿಕರು ಮತ್ತು ಇತರೆ ಜನ ವಿಭಾಗದ ನಡುವೆ ನಿಕಟ ಸಂಪರ್ಕ ಇಟ್ಟುಕೊಂಡು ಸರಕಾರದ ನೀತಿಗಳ ವಿರುದ್ಧ ಎಚ್ಚರ ಮೂಡಿಸುತ್ತಿದ್ದರು. ಅವರು ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಹಿತೈಷಿಗಳನ್ನು ಅಗಲಿದ್ದಾರೆ. ರಾಜು ಪೂಜಾರಿಯವರಿಗೆ ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಶ್ರದ್ಧಾಂಜಲಿ ಸಲ್ಲಿಸಿದೆ.

ದಲಿತರ ಹಕ್ಕುಗಳ ರಕ್ಷಣೆ, ಖಾಸಗೀ ಕ್ಷೇತ್ರದಲ್ಲಿಯೂ ಮೀಸಲಾತಿ ಮತ್ತು ಸಂವಿಧಾನ ಸಂರಕ್ಷಣೆಗಾಗಿ ರಾಜ್ಯ ವ್ಯಾಪಿ ಜನಾಂದೋಲನ ನಡೆಸಲು

'ದಲಿತ ಹಕ್ಕುಗಳ ಸಮಿತಿ'(DHS) ಕರ್ನಾಟಕ ರಾಜ್ಯದ 3ನೇ ಸಮಾವೇಶ ನಿರ್ಣಯ

"ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಕಾಯಿದೆಯಂತೆ, ದಲಿತ ಸಮುದಾಯದ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್ ನಲ್ಲಿ ಹಣ ಹಂಚಿಕೆ ಮಾಡಬೇಕು. ಹಂಚಿಕೆಯಾದ ಹಣವನ್ನು ದಲಿತರ ಅಭಿವೃದ್ಧಿಗಾಗಿ ಮಾತ್ರವೇ ಅಂದರೆ, ಶಿಕ್ಷಣ, ಉದ್ಯೋಗ ಮತ್ತು ಭೂರಹಿತ ದಲಿತರಿಗೆ ಭೂಮಿ ಹಂಚಿಕೆ, ವಸತಿ, ನಿವೇಶನರಹಿತ ದಲಿತರಿಗೆ ನಿವೇಶನ ಮತ್ತು ವಸತಿ ನೀಡಬೇಕು. ಅವರು ವಾಸ ಮಾಡುವ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ದಲಿತರ ಆರೋಗ್ಯ ಸಂರಕ್ಷಣೆಗೆ ಸೂಕ್ತ ಪರಿಹಾರ ಒದಗಿಸಲು ಈ ಹಣವನ್ನು ಸಮಗ್ರವಾಗಿ ಬಳಸಬೇಕು" ಇದು ಡಿ.ಎಚ್.ಎಸ್. ನ 3 ನೇ ರಾಜ್ಯ ಸಮಾವೇಶದಲ್ಲಿ ಅಂಗೀಕರಿಸಲಾದ ನಿರ್ಣಯಗಳಲ್ಲಿ ಒಂದು.





ಸಿ.ಬಸವಲಿಂಗಯ್ಯ ಮಾತನಾಡುತ್ತಿರುವುದು

ಮನುವಾದದ ಪ್ರೇರಣೆಯಿಂದ ಆಳವಾಗಿ ಬೇರೂರಿರುವ, ಚಾತುರ್ವರ್ಣ ಮತ್ತು ಅದರ ಪ್ರತಿಪಾದನೆಯಾದ ಜಾತಿ ತಾರತಮ್ಯ ಮತ್ತು ಜಾತಿ ಪದ್ದತಿಯನ್ನು ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ, ಸಂವಿಧಾನದ ಪರಿಚ್ಛೇದ 17 ರಂತೆ, ಅಸ್ಪೃಶ್ಯತಾ ಆಚರಣೆಗಳು ರದ್ದಾಗಿ ಸುಮಾರು 75 ವರ್ಷಗಳಾಗಿವೆ. ಈ ನಿಟ್ಟಿನಲ್ಲಿ ಸಂವಿಧಾನದ ಆಶಯಗಳಾದ ಸಾಮಾಜಿಕ, ಆರ್ಥಿಕ, ಸಮಾನತೆ ಮತ್ತು ರಾಜಕೀಯ ಮತ್ತು ಸಾಮಾಜಿಕ ನ್ಯಾಯ ಕುರಿತಂತೆ ಹಾಗೂ ಜಾತ್ಯಾತೀತ, ಸಮಾಜವಾದ, ಗಣತಂತ್ರ, ಪ್ರಜಾಪ್ರಭುತ್ವದ ಮೌಲ್ಯಗಳನ್ನು, ಒಟ್ಟಾರೆಯಾಗಿ ಸಂವಿಧಾನ ಸಂರಕ್ಷಣೆಗಾಗಿ ಎಲ್ಲಾ ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ, ಮುಂಬರುವ ಏಪ್ರಿಲ್ ತಿಂಗಳಲ್ಲಿ ರಾಜ್ಯ ವ್ಯಾಪಿ ಜನಾಂದೋಲನ ನಡೆಸಲು ದಲಿತ ಹಕ್ಕುಗಳ ಸಮಿತಿ (DHS)ನ ಕರ್ನಾಟಕ ರಾಜ್ಯದ 3ನೇ ಸಮಾವೇಶದಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

2024ರ ಪೆಬ್ರವರಿ 4 ಮತ್ತು 5 ರಂದು ಎರಡು ದಿನಗಳ ಕಾಲ ಹೊಸಪೇಟೆ ನಗರದ ಶ್ರೀ ಸಾಯಿ ಲೀಲಾ ರಂಗಮಂದಿರದಲ್ಲಿ ದಲಿತ ಹಕ್ಕುಗಳ ಸಮಿತಿಯ ಈ ಸಮಾವೇಶದಲ್ಲಿ ಇದೂ ಸೇರಿದಂತೆ ಪ್ರಮುಖ 4 ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

ತಾಲೂಕು, ಜಿಲ್ಲಾ ಮಟ್ಟದಲ್ಲಿ ವಿಶೇಷ ನ್ಯಾಯಾಲಯ ಸ್ಥಾಪಿಸಲು

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿಯ ಕಳೆದ 9 ವರ್ಷಗಳ ಅವಧಿಯಲ್ಲಿ, ದಲಿತರ ಮೇಲಿನ ಅಸ್ಪೃಶ್ಯತಾ ದೌರ್ಜನ್ಯಗಳು ಹೆಚ್ಚಾಗಿರುವುದನ್ನು ಎನ್ ಸಿ ಆರ್ ಬಿ ಅಧಿಕೃತ ಅಂಕಿಅಂಶಗಳು ಸಾಭೀತು ಪಡಿಸಿದೆ. ಅದರಲ್ಲೂ ಬಿಜೆಪಿ ಆಡಳಿತದ ರಾಜ್ಯ ಸರ್ಕಾರಗಳಾದ, ಉತ್ತರಪ್ರದೇಶ, ಗುಜರಾತ್, ಮಧ್ಯಪ್ರದೇಶ ರಾಜ್ಯಗಳಲ್ಲಿ ಅಸ್ಪೃಶ್ಯತಾ ದೌರ್ಜನ್ಯಗಳು ಶೇಕಡಾವಾರು ದಾಖಲೆ ಪ್ರಮಾಣದಲ್ಲಿ ಹೆಚ್ಚಾಗಿರುವುದು ಕಂಡು ಬಂದಿದೆ. ಹಾಗೆಯೇ, ರಾಜಸ್ಥಾನ, ಛತ್ತೀಸ್‌ಗಢ, ಬಿಹಾರ, ಮಹಾರಾಷ್ಟ್ರ, ಆಂದ್ರಪ್ರದೇಶ, ತೆಲಗಾಂಣ, ತಮಿಳುನಾಡು ಹಾಗೂ ಕರ್ನಾಟಕ ರಾಜ್ಯದಲ್ಲಿಯೂ ಪ್ರಕರಣಗಳು ಕಡಿಮೆಯೇನೆಲ್ಲ. ಈ ಹಿನ್ನೆಲೆಯಲ್ಲಿ, ದೌರ್ಜನ್ಯ ವೆಸಗಿದ ಅಪರಾಧಿಗಳಿಗೆ ಶಿಕ್ಷೆ ಮಾತ್ರ ತೀರ ಕಡಿಮೆ ಪ್ರಮಾಣದಲ್ಲಿ ಆಗಿರುವುದರಿಂದ, ಎಸ್.ಸಿ./ಎಸ್.ಟಿ. ದೌರ್ಜನ್ಯ ತಡೆ ಕಾಯಿದೆಯನ್ನು ಮತ್ತಷ್ಟು ಬಲಗೊಳಿಸುವಂತೆ, ಆ ಮೂಲಕ ಅಪರಾಧಿಗಳಿಗೆ ಕಠಿಣ ಶಿಕ್ಷೆ ವಿಧಿಸಲು ತಾಲೂಕು, ಜಿಲ್ಲಾ ಮಟ್ಟದಲ್ಲಿ ವಿಶೇಷ ನ್ಯಾಯಾಲಯಗಳನ್ನು ಕಡ್ಡಾಯವಾಗಿ ಸ್ಥಾಪಿಸಲು ರಾಜ್ಯ ಸಮಾವೇಶದಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಜನಸಂಖ್ಯೆಗೆ ಅನುಗುಣವಾಗಿ ಬಜೆಟ್ ನಲ್ಲಿ ಹಣ ಹಂಚಿಕೆ

ಎಸ್.ಸಿ.ಎಸ್.ಪಿ/ಟಿ.ಎಸ್.ಪಿ. ಕಾಯಿದೆಯಂತೆ ದಲಿತ ಸಮುದಾಯದ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್ ನಲ್ಲಿ ಹಣ ಹಂಚಿಕೆ ಮಾಡಬೇಕು. ಹಂಚಿಕೆಯಾದ ಹಣವನ್ನು ದಲಿತರ ಅಭಿವೃದ್ಧಿಗಾಗಿ ಮಾತ್ರವೇ ಅಂದರೆ, ಶಿಕ್ಷಣ, ಉದ್ಯೋಗ, ಮತ್ತು ಭೂರಹಿತ ದಲಿತರಿಗೆ ಭೂಮಿ ಹಂಚಿಕೆ, ವಸತಿ, ನಿವೇಶನರಹಿತ

ಪುಟ 6 ಕ್ಕೆ

ಪುರೋಹಿತಶಾಹಿ ಚಿಂತನೆ ಬಹುಸಂಖ್ಯಾತರನ್ನು ಆಳುತ್ತಿದೆ: ಕೆ. ರಾಧಾಕೃಷ್ಣನ್

ರಾಜ್ಯ ಸಮಾವೇಶವನ್ನು ಉದ್ಘಾಟನೆ ಮಾಡಿದ ಕೇರಳದ ಸಮಾಜ ಕಲ್ಯಾಣ ಮತ್ತು ಮುಜರಾಯಿ ಸಚಿವರು ಹಾಗೂ DSMM ನ ರಾಷ್ಟ್ರೀಯ ಅಧ್ಯಕ್ಷರೂ ಅಗಿರುವ ಕೆ. ರಾಧಾಕೃಷ್ಣನ್ ರವರು ಮಾತನಾಡಿ, 'ಸ್ವಾತಂತ್ರ್ಯ ಬಂದು 77 ವರ್ಷಗಳಾದರೂ ದಲಿತರ ಮೇಲೆ ಅಸ್ಪೃಶ್ಯತಾ ದಾಳಿಗಳು, ದೌರ್ಜನ್ಯಗಳು ನಿಂತಿಲ್ಲ, ಇದಕ್ಕೆ ಮೂಲ ಕಾರಣ ಬ್ರಾಹ್ಮಣ್ಯಶಾಹಿ ಪ್ರೇರಿತ, ಮನುವಾದ ಮತ್ತು ಚಾತುರ್ವಣದ ಜಾತಿ ವ್ಯವಸ್ಥೆ. ಪುರೋಹಿತಶಾಹಿ ಚಿಂತನೆ ಇಂದು ಬಹುಸಂಖ್ಯಾತರನ್ನು ಆಳುತ್ತಿದೆ. ಇದರ ವಿರುದ್ಧ ಪ್ರಬಲ ಹೋರಾಟ ರೂಪಗೊಳ್ಳಬೇಕು. ಇದನ್ನು ನಿರ್ಮೂಲನೆ ಮಾಡುವುದೇ ನಮ್ಮ ಮೂಲ ಗುರಿ' ಎಂದರು.

ಇದುವರೆಗೂ ಅಧಿಕಾರಕ್ಕೆ ಬಂದವರು ದಲಿತರ ಬದುಕನ್ನು ಉತ್ತಮಪಡಿಸಲು ಬೇಕಾದ ಯೋಜನೆಗಳನ್ನು ಜಾರಿಗೆ ತರಲಿಲ್ಲ. ಹಾಗಾಗಿ ದಲಿತರು ತಮ್ಮ ಹಕ್ಕುಗಳಿಗಾಗಿ ಸಂಘಟನೆ ಕಟ್ಟಿಕೊಳ್ಳಬೇಕಿದೆ. ಆ ಮೂಲಕ ಹೋರಾಡಬೇಕಾದ ಅನಿವಾರ್ಯತೆ ಇದೆ. ಕೇಂದ್ರದಲ್ಲಿ ಹಿಂದುತ್ವದ ಪರವಾದ ಸರ್ಕಾರ ಅಧಿಕಾರದಲ್ಲಿದೆ. ಅರ್.ಎಸ್.ಎಸ್. ನ ನೇತೃತ್ವದಲ್ಲಿ ನಡೆಯುತ್ತಿರುವ ಈ ಸರ್ಕಾರದ ಅವಧಿಯಲ್ಲಿ ಬಡತನ ಹೆಚ್ಚಾಗಿದೆ. ಇದರಲ್ಲಿ ದಲಿತರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಸಂಘಪರಿವಾರ ಜನರನ್ನು ಜಾತಿ ಧರ್ಮಗಳ ಆಧಾರದಲ್ಲಿ ವಿಭಜನೆ ಮಾಡುತ್ತಿದೆ ಎಂದು ಅವರು ಖೇಧ ವ್ಯಕ್ತಪಡಿಸಿದರು.

ಅಂಬೇಡ್ಕರ್ ರಚಿಸಿದ ಸಂವಿಧಾನವನ್ನು ಬದಲಾಯಿಸಿ, ವರ್ಣಾಶ್ರಮ ಪದ್ದತಿಯನ್ನು ಸಮರ್ಥಿಸುವ ಮನುಸ್ಮೃತಿಯನ್ನು ತರಲು ಕೇಂದ್ರ ಸರ್ಕಾರ ಹೊರಟಿದೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ ದಲಿತರು ನೆಮ್ಮದಿಯಿಂದ ಬದುಕಲು ಸಾಧ್ಯವಿಲ್ಲ. ಅದಕ್ಕಾಗಿ ದಲಿತ ಸಂಘಟನೆಗಳು ಶಕ್ತಿ ಮೀರಿ ಚಳುವಳಿಯನ್ನು ಸಂಘಟಿಸಬೇಕಿದೆ ಎಂದು ರಾಧಾಕೃಷ್ಣನ್ ಹೇಳಿದರು.

ದಲಿತ ಚಳುವಳಿಗಳು ರಾಜಕೀಯ ಶಕ್ತಿಯಾಗಿ ಬೆಳೆಯಬೇಕು

ಕರ್ನಾಟಕದಲ್ಲಿ ದಲಿತ ದೌರ್ಜನ್ಯದ ವಿರುದ್ಧ ಹೋರಾಟಗಳು ನಡೆಯುತ್ತಿವೆ. ಈ ಚಳುವಳಿಗಳು ದಲಿತರ ಪರವಾದ ರಾಜಕೀಯ ಶಕ್ತಿಯಾಗಿ ಬೆಳೆದರೆ ಮಾತ್ರ ದಲಿತರಿಗೆ ಸಾಮಾಜಿಕ ನ್ಯಾಯ ಸಿಗಲು ಸಾಧ್ಯ. ಅದಕ್ಕೆ ಉತ್ತಮ ಉದಾಹರಣೆ ಕೇರಳದ ಎಡರಂಗ ಸರ್ಕಾರ. ಕೇರಳದಲ್ಲಿ ಕಮ್ಯೂನಿಸ್ಟರ ನೇತೃತ್ವದಲ್ಲಿ ಎಡರಂಗದ ಸರ್ಕಾರ ದಲಿತ, ಆದಿವಾಸಿಗಳ ಸರ್ಕಾರವಾಗಿ ಕೆಲಸ ಮಾಡುತ್ತಿದೆ ಎಂದರು.

ಕೇರಳದ ಗುರುವಾಯೂರು ದೇವಸ್ಥಾನಕ್ಕೆ ದಲಿತರ ಪ್ರವೇಶಕ್ಕಾಗಿ ಕಮ್ಯೂನಿಸ್ಟ್ ನಾಯಕರಾದ ಕೃಷ್ಣಪಿಳ್ಳೆ ಪ್ರಭಲ ಹೋರಾಟವನ್ನು ನಡೆಸಿದರು. ಜಾತಿ ಕಾರಣಕ್ಕಾಗಿ ಸಾರ್ವಜನಿಕ ಸ್ಥಳಗಳಿಗೆ ನಿರ್ಭಂದ ವಿಧಿಸಬಾರದು. ನಾನು ದೇವಸ್ಥಾನ ಪ್ರವೇಶಕ್ಕಾಗಿ ಹೋರಾಟ ಮಾಡಿ ಪೊಲೀಸರಿಂದ ಲಾಠಿ ಏಟು ತಿಂದವನು ಈಗ ನಾನೇ ಎಡರಂಗ ಸರ್ಕಾರದ ದೇವಸ್ಥಾನಗಳ ಮುಜರಾಯಿ ಮಂತ್ರಿಯಾಗಿದ್ದೇನೆ. ಆ ಎಲ್ಲಾ ದೇವಸ್ಥಾನಗಳಿಗೂ ನಾನು ಹೋಗುತ್ತೇನೆ ಎಂದರು.

ಭೂಹೀನ ದಲಿತರಿಗೆ ಭೂಮಿ

ಎಡರಂಗ ಸರ್ಕಾರ ಅಧಿಕಾರಕ್ಕೆ ಬಂದಾಗ 1958 ರಲ್ಲಿ ಇಎಂಎಸ್ ನಂಬೂದರಿ ಪಾಡ್ ನೇತೃತ್ವದಲ್ಲಿ ಭೂಮಿಯನ್ನು ಹಂಚಲಾಗಿದೆ. ಅದರಲ್ಲಿ ಭೂಹೀನ ದಲಿತರಿಗೆ ದೊಡ್ಡ ಸಂಖ್ಯೆಯಲ್ಲಿ ಭೂಮಿ ಸಿಕ್ಕಿದೆ. ಎಲ್ಲಾ ಮನುಷ್ಯರೂ ಸಮಾನವಾಗಿ ಬದುಕುವುದು ನಮ್ಮೆಲ್ಲರ ಕನಸು. ಆ ಕನಸನ್ನು ನನಸು ಮಾಡುವುದಕ್ಕಾಗಿ ನಮ್ಮ ಹೋರಾಟ ನಡೆಯುತ್ತಿದೆ ಎಂದರು.

ಕೇರಳದಲ್ಲಿ ಯಾರು ಹಸಿವಿನಿಂದ ಇರಬಾರದೆಂದು ಎಡರಂಗ ಸರ್ಕಾರ ನಿರ್ಧರಿಸಿದೆ. ಭಾರತದಲ್ಲಿ ಹಸಿವಿನಿಂದ ಸಾಯುವವರ ಸಂಖ್ಯೆ ಹೆಚ್ಚಾಗಿದೆ. 2024 ರ ಒಳಗೆ ರಾಜ್ಯದಲ್ಲಿ ವಸತಿ ರಹಿತರು ಇಲ್ಲದಂತೆ ಮಾಡುವುದೆ ಎಡರಂಗ ಸರ್ಕಾರದ ಗುರಿ. ಮಾವೆಳ್ಳಿ ಸ್ಟೋರ್ ಮೂಲಕ ಎಲ್ಲಾ ಅಗತ್ಯವಿರುವ ವಸ್ತುಗಳನ್ನು ಕಡಿಮೆ ದರದಲ್ಲಿ ಜನಸಾಮಾನ್ಯರಿಗೆ ಕೊಡಲಾಗುತ್ತಿದೆ ಎಂದರು.

ಎಲ್ಲರಿಗೂ ಶಿಕ್ಷಣ ಪಡೆಯುವ ಹಕ್ಕು

ಎಲ್ಲರಿಗೂ ಶಿಕ್ಷಣ ಪಡೆಯುವ ಹಕ್ಕನ್ನು ಎಡರಂಗ ಸರ್ಕಾರ ಖಾತ್ರಿಪಡಿಸಿದೆ. ಇದಕ್ಕಾಗಿಯೇ ದೇಶದಲ್ಲಿ ಕೇರಳದ ಸಾಕ್ಷರತೆ ಮೊದಲ ಸ್ಥಾನದಲ್ಲಿದೆ. ಇಲ್ಲಿ ಎಲ್ಲರೂ ಸಾಕ್ಷರರಾಗಿರಲು ಕಮ್ಯೂನಿಸ್ಟರ ಕೊಡುಗೆ ಅಪಾರ. ಕೇರಳದ ಎಡರಂಗ ಸರ್ಕಾರದ ಸಾಧನೆಗಳು ಜನಪರವಾದ ಸಾಧನೆಗಳು ಮಾನವ ಅಭಿವೃದ್ಧಿಗಾಗಿ ಬೇಕಾದ ಎಲ್ಲಾ ನೀತಿಗಳನ್ನು ಎಡರಂಗ ಸರ್ಕಾರ ಜಾರಿಗೆ ತಂದಿದೆ. ಮೊದಲ ಬಾರಿಗೆ ವೃದ್ಧಾಪ್ಯ ವೇತನವನ್ನು ಜಾರಿಗೆ ತಂದ ಕೀರ್ತಿ ಕೇರಳದ್ದು. ಮನೆ ಇಲ್ಲದವರಿಗೆ ಮನೆ, ಭೂಮಿ ಇಲ್ಲದವರಿಗೆ ಭೂಮಿ, ಯುವಜನರಿಗೆ ಕೆಲಸ. ಮನೆ ಎಂದರೆ ಎಲ್ಲಾ ಮೂಲಭೂತ ಸೌಲಭ್ಯಗಳೊಂದಿಗೆ ಸುಸಜ್ಜಿತ ಮನೆಗಳನ್ನು ಬಡವರಿಗೆ ಕಟ್ಟಿಕೊಡಲಾಗಿದೆ ಎಂದು ರಾಧಾಕೃಷ್ಣನ್ ಹೇಳಿದರು.

ಇವರ ಮಲೆಯಾಳಂ ಭಾಷಣವನ್ನು ಕನ್ನಡಕ್ಕೆ 'ಕೈರಳಿ' ಸಂಘಟನೆಯ ಮುಖಂಡರಾದ ಸುಂದರಂ ಅನುವಾದಿಸಿದರು.

"ಜಾತಿ ಕಾರಣಕ್ಕಾಗಿ ಸಾರ್ವಜನಿಕ ಸ್ಥಳಗಳಿಗೆ ನಿರ್ಭಂದ ವಿಧಿಸಬಾರದು. ನಾನು ದೇವಸ್ಥಾನ ಪ್ರವೇಶಕ್ಕಾಗಿ ಹೋರಾಟ ಮಾಡಿ ಪೋಲೀಸರಿಂದ ಲಾಠಿ ಏಟು ತಿಂದವನು. ಈಗ ನಾನೇ ಎಡರಂಗ ಸರ್ಕಾರದ ದೇವಸ್ಥಾನಗಳ ಮುಜರಾಯಿ ಮಂತ್ರಿಯಾಗಿದ್ದೇನೆ. ಆ ಎಲ್ಲಾ ದೇವಸ್ಥಾನಗಳಿಗೂ ನಾನು ಹೋಗುತ್ತೇನೆ"

–ಕೆ. ರಾಧಾಕೃಷ್ಣನ್



ಈ ಹೋರಾಟ ಬಲಗೊಂಡು ವಿಸ್ತರಿಸಲಿ........ ಪುಟ 3 ರಿಂದ

ಅತೃಪ್ತಿಯನ್ನು ಹುಟ್ಟು ಹಾಕುವುದಲ್ಲದೆ ಕೇಂದ್ರದ ತಾರತಮ್ಯ ನೀತಿಗಳ ವಿರುದ್ಧ ಮನೋಭಾವವನ್ನು ಬೆಳೆಸುತ್ತದೆ. ಇತ್ತೀಚೆಗೆ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ ನಿರಂತರವಾಗಿ ರಾಜ್ಯಗಳನ್ನು ದೂರ ಇಡುವ ಅಭಿವೃದ್ಧಿಯ ಒಟ್ಟು ಜಾಡಿನಿಂದ ಮೂಲೆಗುಂಪು ಮಾಡುವ, ಪ್ರತ್ಯೇಕಿಸುವ ನೀತಿಗಳು ಮತ್ತು ತಂತ್ರಗಳನ್ನು ಅನುಸರಿಸುತ್ತಿದೆ. ಇದು ಆರ್ಥಿಕ ವಿಷಯಗಳಿಗೆ ಸಂಬಂಧಿಸಿದಂತೆ ಅಲ್ಲದೆ ಭಾಷೆ, ಸಂಸ್ಕೃತಿ ಮತ್ತು ರಾಜ್ಯಗಳನ್ನು ಸಮಾನವಾಗಿ ಕಾಣುವ ದಿಕ್ಕಿನಲ್ಲಿಯೂ ತಾರತಮ್ಯಗಳಿವೆ. ಸಾಮಂತರಂತೆ ನೋಡಲಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಕೆಲವರು ಪ್ರತ್ಯೇಕತೆಯ ಮಾತುಗಳನ್ನ ಆಡುವುದನ್ನೂ ಕಾಣಬಹುದು. ಆದರೆ ಅದು ಖಂಡಿತಕ್ಕೂ ಪರಿಹಾರ ಅಲ್ಲ ಎನ್ನುವುದನ್ನು ತಿಳಿಯಬೇಕು. ಮೇಲಾಗಿ ಅಂತಹ ಮಾತುಗಳು ಕೇಂದ್ರದಲ್ಲಿರುವ ಸರ್ಕಾರಕ್ಕೆ ಮತ್ತು ಅದರ ರಾಜಕೀಯಕ್ಕೆ ದುರ್ಬಳಕೆ ಮಾಡಿಕೊಳ್ಳಲು ಅನುವು ಮಾಡಿಕೊಡುತ್ತದೆ ಮತ್ತು ನಿಜದ ಪ್ರಶ್ನೆಗಳನ್ನು ಮರೆಮಾಚಿ ಹಾದಿ ತಪ್ಪಿಸಲು ಅವಕಾಶ ಕಲ್ಪಿಸುತ್ತದೆ. ಇತ್ತೀಚೆಗೆ ಕರ್ನಾಟಕದ ಸಂಸದ ಡಿ.ಕೆ. ಸುರೇಶ್ ರವರು ಇಂತಹ ಸನ್ನಿವೇಶವು ಸೃಷ್ಟಿಸಬಹುದಾದ ಪ್ರತ್ಯೇಕತೆಯ ಬೇಡಿಕೆಯ ಸಾಧ್ಯತೆಗಳ ಬಗ್ಗೆ ಆಡಿದ ಅಂತಹ ಒಂದು ಮಾತು ಅದನ್ನು ಪ್ರಸಕ್ತ ಸರ್ಕಾರದ ವಿರುದ್ಧ ಮತ್ತು ತನ್ನ ವಂಚನೆಗಳನ್ನು ಮುಚ್ಚಿಕೊಳ್ಳಲು ರಾಜಕೀಯ ದಾಳವಾಗಿ ಪ್ರಧಾನಮಂತ್ರಿ ಆದಿಯಾಗಿ ಬಿಜೆಪಿ ನಾಯಕರು ಪ್ರಯತ್ನಿಸುತ್ತಿರುವುದನ್ನು ಕಾಣಬಹುದು. ಆದ್ದರಿಂದ ರಾಜ್ಯಗಳ ಹಕ್ಕುಗಳ ಅವಕಾಶಗಳ ಕುರಿತಂತೆ ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಬಂಧಗಳಲ್ಲಿ ಪ್ರಯತ್ನಗಳು ಒಕ್ಕೂಟ ವ್ಯವಸ್ಥೆಗೆ ಅನುಗುಣವಾಗಿ ನಡೆಯುವಂತೆ ಒತ್ತಾಯಿಸಲು ಇಡೀ ದೇಶದಲ್ಲಿ ಎಲ್ಲಾ ರಾಜ್ಯಗಳು ತನ್ನ ಹಕ್ಕು ಪ್ರತಿಪಾದನೆಯನ್ನು ಮಾಡಬೇಕು. ಮತ್ತು ಅದೊಂದು ಅತೀ ಪ್ರಮುಖ ರಾಜಕೀಯ ಪ್ರಶ್ನೆಯಾಗಿದೆ ಎನ್ನುವುದನ್ನು ಗಣಿಸಬೇಕು, ಜನತೆಗೆ ಮನಗಾಣಿಸಬೇಕು. ಈ ದೃಷ್ಟಿಯಲ್ಲಿ ಕೇರಳ ಸರ್ಕಾರ ಹಾಗೂ ಎಲ್.ಡಿ.ಎಫ್ ನ ಮುತುವರ್ಜಿ ಅತ್ಯಂತ ಸಕಾಲಿಕ ಮತ್ತು ಸೂಕ್ತವಾಗಿದೆ. ಹಾಗೆಯೇ ಮೂಲ ಪ್ರಶ್ನೆಗಳಿಗೆ ಸೂಕ್ತವಾಗಿ ಉತ್ತರ ನೀಡದೆ ಅಡ್ಡ ಹಾದಿಯಲ್ಲಿ ಪ್ರತಿಕ್ರಿಯಿಸುವ ಭಾರತ ಒಕ್ಕೂಟದ ಪ್ರಧಾನಮಂತ್ರಿಗಳು ಮತ್ತು ಹಣಕಾಸು ಮಂತ್ರಿಗಳನ್ನು ಕಿವಿಹಿಂಡಿ ಸರಿದಾರಿಗೆ ತರುವ ಕೆಲಸವನ್ನು ದೇಶದ ಎಲ್ಲ ರಾಜ್ಯಗಳ ಜನತೆ ಮಾಡುವುದು ಅವಶ್ಯಕತೆ ಇದೆ. ಈ ಹೋರಾಟ ಭಾರತವನ್ನು ಬಲಗೊಳಿಸುವ ಜನತೆಯ ಹಕ್ಕುಗಳನ್ನು ಸಾಂವಿಧಾನಿಕವಾಗಿಯೂ ಸಂರಕ್ಷಿಸುವ ಬಹುಮುಖ್ಯವಾದ ಹೋರಾಟ. ಇದು ಪಕ್ಷ ಬೇಧವಿಲ್ಲದೇ ಮತ್ತಷ್ಟು ವಿಸ್ತರಿಸಿ ಹೊಸ ಸ್ವರೂಪದಲ್ಲಿ ನಡೆಯಲಿ, ಮುನ್ನಡೆಯಲಿ ಎಂದು ಆಶಿಸೋಣ.

ಬೀಸಲಾರಂಭಿಸಿದೆ ಚುನಾವಣಾ ಹವಾ......... ಪುಟ 3 ರಿಂದ

ಇಲ್ಲಿ ರಾಜ್ಯದಲ್ಲಿಯೂ ಬಿಜೆಪಿ ನಾಯಕರು ಸಂಸದ ಡಿ.ಕೆ. ಸುರೇಶ್ ಅವರನ್ನು ಹಿಗ್ಗಾಮುಗ್ಗಾ ಟೀಕಿಸುತ್ತಲೇ ಓಡಾಡಿಕೊಂಡಿದ್ದಾರೆ. ಅದರಲ್ಲೂ ಸಚಿವ ಸ್ಥಾನದಿಂದ ಪದಚ್ಯುತರಾದ ಕೆ.ಎಸ್. ಈಶ್ವರಪ್ಪನವರು ಡಿ.ಕೆ. ಸುರೇಶಂತವರನ್ನು ಗುಂಡಿಟ್ಟು ಕೊಲ್ಲುವ ಕಾನೂನು ತರಲು ಮೋದಿ ಯವರಿಗೆ ಆಗ್ರಹಿಸಿದ್ದನ್ನು ನೋಡಿದರೆ ಉಳಿದ ನಾಯಕರಿಗಿಂತಲೂ ತಾನು ಇನ್ನೂ ಮುಂದೆ ಎನ್ನುವ ಸ್ಪರ್ದೆಗೆ ಧುಮುಕಿದಂತೆ ಕಾಣುತ್ತದೆ! ಅವರ ಮಾತಿನ ದಾಟಿಯನ್ನು ನೋಡಿದರೆ ಈಗಲೇ ಸುರೇಶ್ ಅವರನ್ನು ಗುಂಡಿಟ್ಟು ಕೊಲ್ಲಬೇಕು ಎನ್ನುವ ರೀತಿಯ ಧಾವಂತ ಇತ್ತು! ಹಿರಿಯ ರಾಜಕಾರಣಿಯಾಗಿ ಅಭಿಪ್ರಾಯ ಭೇದಗಳನ್ನು, ಭಿನ್ನ ಅಭಿಪ್ರಾಯಗಳನ್ನು ಸಮಚಿತ್ತದಿಂದ ಸ್ವೀಕರಿಸಬೇಕೆ ಹೊರತು ಉಗ್ರವಾದಿಗಳಂತೆ ಅರಚುವುದು ವಿವೇಕಹೀನವಾಗಿದೆ. ಹಾಗೆ ನೋಡಿದರೆ ಭಾರತವನ್ನು ಮತಾಂಧತೆಯ ಆಧಾರದ ದೇಶವನ್ನಾಗಿಸುವ ಬಿಜೆಪಿಯ ಪ್ರಯತ್ನ ಹಿಂದುತ್ವರಾಷ್ಟ್ರವನ್ನಾಗಿಸುವುದು, ದೇಶ ವಿಭಜನೆಗೆ ಕಾರಣವಾಗುವುದಿಲ್ಲವೇ? ಅಂತಹ ಹೇಳಿಕೆ ಅಂದರೆ ನಮ್ಮ ಸಂವಿಧಾನ, ಪ್ರಜಾಪ್ರಭುತ್ವದ ವ್ಯವಸ್ಥೆಗೆ, ಮತ ನಿರಪೇಕ್ಷತೆಯ ಮೂಲ ಮೌಲ್ಯಗಳಿಗೆ ತದ್ವಿರುದ್ಧವಾಗಿದೆ. ಆ ಮೂಲಕ ಅದು ಸಂವಿಧಾನ ವಿರೋಧಿಯೂ ದೇಶ ವಿರೋಧಿಯೂ ಆಗಿದೆ. ಅಂತಹ ಮಾತುಗಳನ್ನು ರಾಜಾರೋಷವಾಗಿ ಹೇಳುವುದು ಮಾತ್ರವಲ್ಲ, ಕ್ರಿಯಾರಂಗದಲ್ಲಿ ಮಾಡುತ್ತಿರುವ ಸಂಘಪರಿವಾರ ರಾಜ್ಯಗಳಿಗೆ ಸರಿಯಾದ ಪಾಲು ಸಿಗದೇ ಹೋದರೆ ಅಂತಹದೊಂದು ಪ್ರತ್ಯೇಕತೆಯ ಕೂಗು ಕೇಳ ಬೇಕಾಗಬಹುದು ಎನ್ನುವುದನ್ನೇ ಎಡೆದಾಡುತ್ತಿರುವುದು ವಿಚಿತ್ರವೇ ಸರಿ.

ಇಲ್ಲಿ ಈಶ್ವರಪ್ಪನವರಿಗೆ ಒಂದು ಸ್ವಹಿತಾಸಕ್ತಿ ಇರುವುದನ್ನು ಅಲ್ಲಗಳೆಯಲಾಗುವುದಿಲ್ಲ. ಈಶ್ವರಪ್ಪ ಈಗಾಗಲೇ ಬಿಜೆಪಿ ನಾಯಕರಿಂದ ಮೂಲೆಗೆ ಎಸೆಯಲ್ಪಟ್ಟಿದ್ದು ತಮ್ಮ ಮಗನನ್ನು ಹೇಗಾದರೂ ಮಾಡಿ ಲೋಕಸಭಾ ಚುನಾವಣೆಯಲ್ಲಿ ಅಭ್ಯರ್ಥಿಯನ್ನಾಗಿಸುವ ಆಶೆ ಇರಿಸಿಕೊಂಡು ಸಂಘಪರಿವಾರದ ನಾಯಕರನ್ನು, ಬಿಜೆಪಿ ನಾಯಕರನ್ನು ಮೆಚ್ಚಿಸಲು ಇಂತಹ ಅತ್ಯುಗ್ರ ಮಾತುಗಳನ್ನು ಆಡುತ್ತಿದ್ದಾರೆ ಎನ್ನುವುದು ಕೂಡ ಸಾರ್ವಜನಿಕವಾಗಿ ಚರ್ಚೆಯಾಗುತ್ತಿದೆ. ಬಿಜೆಪಿಯ ಇಂತಹ ಹಿರಿಯ ನಾಯಕರು ಕೂಡ ತಮ್ಮ ಸ್ವಾರ್ಥಕ್ಕಾಗಿ ಯಾವ ಮಟ್ಟದ ಮಾತುಗಳಿಗೂ, ಕೃತಿಗಳಿಗೂ ಹೋಗಬಲ್ಲರು ಎನ್ನುವುದು ಈ ಪ್ರಸಂಗದಲ್ಲೂ ಕಾಣಬಹುದು. ಈಶ್ವರಪ್ಪನಂತವರ ಬಾಯಿಗೆ ಬೀಗ ಹಾಕದೇ ಯಡಿಯೂರಪ್ಪನಂತವರು ಸಹ ಈಶ್ವರಪ್ಪನವರನ್ನು ಮೆಲು ಧಾಟಿಯಲ್ಲಿ ಬೆಂಬಲಿಸುತ್ತಿರುವುದು ಅತ್ಯಂತ ನಾಚಿಕೆಗೇಡು.

ದಲಿತ ಹಕ್ಕುಗಳ ಸಮಿತಿಯ 3ನೇ ಸಮಾವೇಶ..... ಪುಟ 5 ರಿಂದ

ದಲಿತರಿಗೆ ನಿವೇಶನ ಮತ್ತು ವಸತಿ ನೀಡಬೇಕು. ಅವರು ವಾಸ ಮಾಡುವ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ದಲಿತರ ಆರೋಗ್ಯ ಸಂರಕ್ಷಣೆಗೆ ಸೂಕ್ತ ಪರಿಹಾರ ಒದಗಿಸಲು ಈ ಹಣವನ್ನು ಸಮಗ್ರವಾಗಿ ಬಳಸಬೇಕು ಎಂಬ ಮತ್ತೊಂದು ನಿರ್ಣಯವನ್ನು ಅಂಗೀಕರಿಸಲಾಯಿತು.

ಖಾಸಗೀ ಕ್ಷೇತ್ರದಲ್ಲಿಯೂ ಮೀಸಲಾತಿ ಒದಗಿಸಬೇಕು

ನವ ಉದಾರವಾದಿ ನೀತಿಗಳ ಅನುಷ್ಠಾನದಿಂದಾಗಿ, ಸರ್ಕಾರಿ ಸ್ವಾಮ್ಯದ, ಸಾರ್ವಜನಿಕ ವಲಯದಲ್ಲಿ ಉದ್ಯೋಗ ರಹಿತ ಮತ್ತು ಉದ್ಯೋಗ ನಷ್ಟ ಉಂಟಾಗಿದ್ದು, ನೇಮಕಾತಿ ಇಲ್ಲದ ವಾತವರಣ ಸೃಷ್ಟಿಯಾಗಿದೆ. ಉದ್ಯೋಗಗಳ ನಷ್ಟದ ಪರಿಣಾಮದಿಂದಾಗಿ ಮೀಸಲಾತಿಯೂ ಮರೀಚಿಕೆಯಾಗಿದೆ, ಮೀಸಲಾತಿ ಕೇವಲ ಪುಸ್ತಕದಲ್ಲಿ ಮಾತ್ರ ಸೀಮಿತವಾಗಿ ಉಳಿದುಕೊಂಡಿದೆ. ನೇಮಕಾತಿ ಮಾಡುವಾಗ ಬ್ಯಾಕ್ ಲಾಗ್ ಹುದ್ದೆಗಳನ್ನು ಕಡ್ಡಾಯವಾಗಿ ತುಂಬಬೇಕು. ಖಾಸಗೀಕರಣ ಬೇತಾಳದ ಹಿಂದೆ ಬಿದ್ದಿರುವ ಸರ್ಕಾರದ ಆರ್ಥಿಕ ನೀತಿಗಳಿಂದಾಗಿ ಖಾಸಗಿ ವಲಯಗಳು ನಾಯಿಕೊಡೆಗಳಂತೆ ಹೇರಳಗೊಂಡಿವೆ. ಹಾಗಾಗಿ ಖಾಸಗೀ ಕ್ಷೇತ್ರದಲ್ಲಿಯೂ ಕಡ್ಡಾಯವಾಗಿ ಮೀಸಲಾತಿ ಒದಗಿಸಬೇಕು. ಇದಕ್ಕಾಗಿ ಕಾನೂನು ರೂಪಿಸಲು ಸಂವಿಧಾನಾತ್ಮಕವಾಗಿ ಸೂಕ್ತ ತಿದ್ದುಪಡಿ ತರಬೇಕು ಎಂಬ ನಿರ್ಣಯವನ್ನು ಅನುಮೋದಿಸಲಾಯಿತು.

ಕರ್ನಾಟಕ ದಲ್ಲಿ ಜಾತಿ ಗಣತಿ ಮಾಡಿರುವ ಕಾಂತರಾಜ್ ವರದಿ ಶಿಫಾರಸ್ಸು ಗಳನ್ನು ಸ್ವೀಕರಿಸಬೇಕು ಎಂಬ ಮತ್ತೊಂದು ನಿರ್ಣಯವನ್ನು ಸಮಾವೇಶದಲ್ಲಿ ಅಂಗೀಕರಿಸಲಾಯ್ತು.


ಅಧ್ಯಕ್ಷರು: ಗೋಪಾಲಕೃಷ್ಣ ಹರಳಹಳ್ಳಿ


ಪ್ರಧಾನ ಕಾರ್ಯದರ್ಶಿ: ಎನ್. ರಾಜಣ್ಣ

ಪ್ರಜಾಪ್ರಭುತ್ವ ಮೌಲ್ಯಗಳು ಅಪಾಯದಲ್ಲಿ: ಸಿ.ಬಸವಲಿಂಗಯ್ಯ

ಪ್ರಸ್ತುತ ಕೇಂದ್ರದ ಬಿಜೆಪಿ ಆಡಳಿತದಲ್ಲಿ ಸಂವಿಧಾನದ ಆಶಯಗಳು ಮತ್ತು ಅದರ ಜೀವಾಳವಾದ ಪ್ರಜಾಪ್ರಭುತ್ವ ಮೌಲ್ಯಗಳು, ಸಾಮಾಜಿಕ ನ್ಯಾಯದ ಪರಿಕಲ್ಪನೆಗಳು ಅಪಾಯದಲ್ಲಿ ಸಿಲುಕಿವೆ ಎಂದು ರಾಷ್ಟ್ರೀಯ ನಾಟಕ ಅಕಾಡೆಮಿಯ ಮಾಜಿ ನಿರ್ದೇಶಕರಾದ ಸಿ.ಬಸವಲಿಂಗಯ್ಯ ನವರು ಆತಂಕ ವ್ಯಕ್ತಪಡಿಸಿದರು. ಅವರು ಸಮಾವೇಶದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಮೋದಿ ಸರ್ಕಾರವು ಅದಾನಿ, ಅಂಬಾನಿಗಳ ಕೈಗೊಂಬೆಯಾಗಿದೆ. ಬಡತನ, ನಿರುದ್ಯೋಗ ಮಿತಿ ಮೀರಿದೆ. ಯುವಕರನ್ನು ಧರ್ಮ, ಜಾತಿಯ ಹೆಸರಿನಲ್ಲಿ ದಾರಿ ತಪ್ಪಿಸುತ್ತಿದ್ದಾರೆ. ಕೋಮುವಾದ ಹೆಚ್ಚಾಗಿದೆ. ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಹೆಚ್ಚು ಅಪಾಯ ಬಂದೊದಗಿದೆ. ಸರ್ಕಾರದ ವೈಪರೀತ್ಯ ಬಗ್ಗೆ ಮಾತನಾಡುವವರನ್ನು ದೇಶದ್ರೋಹಿಗಳು ಎಂಬ ಬಿರುದು ಕೊಟ್ಟು, ಇಡಿ, ಸಿಬಿಐ ಮೂಲಕ ದಾಳಿ ಮಾಡಿ ಸೆರೆಮನೆಗೆ ಕಳುಹಿಸಲಾಗುತ್ತಿದೆ. ಹಾಗಾಗಿ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮೋದಿ ನೇತೃತ್ವದ ಸರ್ಕಾರವನ್ನು ಸೋಲಿಸಬೇಕೆಂದು ಅವರು ಕರೆಕೊಟ್ಟರು.

ಮೆರವಣಿಗೆಯ ಮೂಲಕ

ಫೆಬ್ರವರಿ 4 ರಂದು, ವಿದ್ಯುಕ್ತವಾಗಿ ಆರಂಭಗೊಂಡ ರಾಜ್ಯ ಸಮಾವೇಶವು ಟಿಬಿ ರಸ್ತೆಯಲ್ಲಿರುವ ಅಂಬೇಡ್ಕರ್ ಪ್ರತಿಮೆಯ ಬಳಿ, ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿ ಜಂಬಯ್ಯ ನಾಯಕ ರವರು ಜ್ಯೋತಿಯನ್ನು ಬೆಳಗಿಸಿದರು. ನಂತರ ಮೆರವಣಿಗೆಯ ಮೂಲಕ ನೂರಾರು ಜನರು ಸಮಾವೇಶ ನಡೆಯುವ ಸಭಾಂಗಣದ ಆವರಣದವರೆಗೂ ಜ್ಯೋತಿಯೊಂದಿಗೆ ಬಂದರು. ಕೇರಳದ ಸಚಿವರಾದ ಕೆ. ರಾಧಾಕೃಷ್ಣನ್ ರವರು ಮೆರವಣಿಗೆಯ ಮುಂಚೂಣಿಯಲ್ಲಿದ್ದರು.

20 ಜಿಲ್ಲೆಗಳಿಂದ ಸುಮಾರು 200 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ಅದರಲ್ಲಿ, 36 ಮಹಿಳಾ ಪ್ರತಿನಿಧಿಗಳಿದ್ದು, ವಿದ್ಯಾರ್ಥಿಗಳು, ವಕೀಲರು, ಸರ್ಕಾರಿ ನೌಕರರು, ಪ್ರತಿನಿಧಿಗಳ ಭಾಗವಾಗಿದ್ದುದು ವಿಶೇಷವಾಗಿತ್ತು.

ಪ್ರತಿನಿಧಿ ಅಧಿವೇಶನದಲ್ಲಿ, ಹಿಂದಿನ ಸಮಾವೇಶದಿಂದ ಡಿಹೆಚ್ಎಸ್ ನಡೆಸಿದ ಹೋರಾಟಗಳ ವರದಿಯನ್ನು ಮಂಡಿಸಲಾಯಿತು. ಜಿಲ್ಲಾವಾರು, ಗುಂಪು ಚರ್ಚೆ ಮತ್ತು ವಿಮರ್ಶೆ ನಡೆಸಲಾಯಿತು. ಸುಮಾರು 27 ಪ್ರತಿನಿಧಿಗಳು ವರದಿಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದರು. ರಾಜ್ಯ ಸಂಚಾಲಕರು ಚರ್ಚೆಗೆ ಉತ್ತರಿಸಿದ ನಂತರ ವರದಿ ಒಮ್ಮತದಿಂದ ಅನುಮೋದನೆಗೊಂಡಿತು.

ಹೊಸ ಪದಾಧಿಕಾರಿಗಳನ್ನು ಆಯ್ಕೆ

ಸಮಾವೇಶದ ಕೊನೆಯಲ್ಲಿ, ಹೊಸ ಪದಾಧಿಕಾರಿಗಳನ್ನು ಆಯ್ಕೆಮಾಡಲಾಯಿತು. 36 ರಾಜ್ಯ ಸಮಿತಿ ಸದಸ್ಯರು ಮತ್ತು ಅವರಲ್ಲಿ 16 ಪದಾಧಿಕಾರಿಗಳನ್ನು ಒಮ್ಮತದಿಂದ ಆಯ್ಕೆಮಾಡಲಾಯಿತು.

ಅಧ್ಯಕ್ಷರು: ಗೋಪಾಲಕೃಷ್ಣ ಹರಳಹಳ್ಳಿ

ಪ್ರಧಾನ ಕಾರ್ಯದರ್ಶಿ: ಎನ್. ರಾಜಣ್ಣ

ಖಜಾಂಚಿ: ಅನಿಕೇತನ್

ರಾಜ್ಯ ಉಪಾಧ್ಯಕ್ಷರುಗಳು: ಬಿ. ರಾಜಶೇಖರ್ ಮೂರ್ತಿ, ಬಿ. ಮಾಳಮ್ಮ, ಎನ್. ನಾಗರಾಜ್, ತಂಗರಾಜ್, ಜಂಬಯ್ಯ ನಾಯಕ್, ಕೆ. ನಾಗರಾಜ್, ಮಾದೇಶ್

ರಾಜ್ಯ ಕಾರ್ಯದರ್ಶಿಗಳು: ಆರ್. ಕೃಷ್ಣ, ನಾಗಣ್ಣ, ಎಂ.ಜಿ. ಪೃಥ್ವಿ, ಸುಧಾಮ ದನ್ನಿ, ರಾಜು ವೆಂಕಟಪ್ಪ, ಕೃಷ್ಣಪ್ಪ.

ರಾಜ್ಯ ಸಮಾವೇಶದಲ್ಲಿ ಮಂಡಿಸಿದ ವರದಿ, ಅದರ ಮೇಲಿನ ಪ್ರತಿನಿಧಿಗಳ ಚರ್ಚೆ, ಸೌಹಾರ್ದ ಸಂಘಟನೆಗಳ ನಾಯಕರ ಅನುಭವದ ಮಾತುಗಳು ಹಾಗೂ ವಿಶ್ವಾಸಪೂರ್ಣ ಸಹಕಾರ ನೀಡುವ ಭರವಸೆ, ಕೈಗೊಂಡ ನಿರ್ಣಯಗಳು ಒಟ್ಟಾರೆಯಾಗಿ, ಸಮಾವೇಶವು ಹೊಸ ಉತ್ಸಾಹ ಮತ್ತು ಹುರುಪು ತುಂಬಿತು. ತಮ್ಮ ಜಿಲ್ಲೆಗಳಿಗೆ ವಾಪಸ್ಸು ಹೋಗುವ ಸಂದರ್ಭದಲ್ಲಿ ಅವರಲ್ಲಿ ಆಶಾದಾಯಕ ಮತ್ತು ಕ್ರಿಯಾತ್ಮಕ ಮನೋಸ್ಥೈರ್ಯ ತುಂಬುವಲ್ಲಿ, ದಲಿತ ಸಮುದಾಯದ ಚಳುವಳಿಯನ್ನು ಕಟ್ಟುವಲ್ಲಿ ದೃಢ ವಿಶ್ವಾಸವನ್ನು ಈ ಸಮಾವೇಶ ಇಮ್ಮಡಿ ಗೊಳಿಸಿತು ಹಾಗೂ ನಮ್ಮ ಪ್ರತಿನಿಧಿಗಳಿಗೆ ಚಳುವಳಿಯಲ್ಲಿ ವಿಶ್ವಾಸಾರ್ಹತೆ ಮೂಡಿಸಿದ, ಯಶಸ್ವಿಯಾದ ಸಮಾವೇಶವೆಂದು ಪರಿಗಣಿಸಬಹುದು.

ವರದಿ: ಜಂಬಯ್ಯ ನಾಯಕ





ಒಕ್ಕೂಟ ತತ್ವದ ಮೇಲಿನ ಪ್ರಹಾರಕ್ಕೆ ಸೆಡ್ಡು
ರಾಜ್ಯಗಳ ಹಕ್ಕುಗಳ ರಕ್ಷಣೆಗೆ ಕೇರಳ ಹೋರಾಟ

ಪ್ರಕಾಶ್ ಕಾರತ್

ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಅವರ ಸಂಪುಟದ ಎಲ್ಲಾ ಸಚಿವರು, ಎಡ–ಪ್ರಜಾಸತ್ತಾತ್ಮಕ ರಂಗದ (ಎಲ್‌ಡಿಎಫ್) ಎಲ್ಲಾ ಶಾಸಕರು ಮತ್ತು ಸಂಸದರು ಫೆಬ್ರವರಿ 8ರಂದು ನವ ದೆಹಲಿಯ ಜಂತರ್ ಮಂತರ್‌ನಲ್ಲಿ ಧರಣಿ ಸತ್ಯಾಗ್ರಹ ನಡೆಸಿದರು. ಕೇರಳದ ಬಗ್ಗೆ ಕೇಂದ್ರ ಸರಕಾರದ ತಾರತಮ್ಯ ಮತ್ತು ಆರ್ಥಿಕವಾಗಿ ರಾಜ್ಯ ಸರಕಾರದ ಕತ್ತು ಹಿಸುಕುವ ಕೇಂದ್ರದ ಕ್ರಮಗಳನ್ನು ಜಗಜ್ಜಾಹೀರು ಗೊಳಿಸುವುದು ಧರಣಿಯ ಉದ್ದೇಶವಾಗಿತ್ತು. ಧರಣಿಗೆ ಬೆಂಬಲ ಸೂಚಿಸಿ ಅದೇ ದಿನ ಕೇರಳದಾದ್ಯಂತ ಬೃಹತ್ ಪ್ರದರ್ಶನಗಳು ನಡೆದವು. ಕೇರಳಕ್ಕೆ ಸೌಹಾರ್ದ ಸೂಚಿಸಿ ದೇಶದಾದ್ಯಂತ ಹಲವು ರಾಜ್ಯಗಳ ರಾಜಧಾನಿಗಳಲ್ಲಿ ಸಭೆಗಳು ಕೂಡ ನಡೆದವು.

ಒಂದು ಚುನಾಯಿತ ರಾಜ್ಯ ಸರಕಾರದ ಇಡೀ ಸಚಿವ ಸಂಪುಟವೇ ದೇಶದ ರಾಜಧಾನಿಯಲ್ಲಿ ಇಂಥದ್ದೊಂದು ಪ್ರತಿಭಟನೆ ನಡೆಸಿದ್ದು ಮೋದಿ ಸರಕಾರ ಒಕ್ಕೂಟತತ್ವದ ಮೇಲೆ ನಿರಂತರವಾಗಿ ನಡೆಸುತ್ತಿರುವ ಆಕ್ರಮಣದಿಂದ ಉಂಟಾಗಿರುವ ಬಿಕ್ಕಟ್ಟಿನ ಗಹನತೆಯನ್ನು ಸೂಚಿಸುತ್ತದೆ.

ಕೇರಳದ ಪ್ರಕರಣಕ್ಕೆ ಬರುವುದಾದರೆ, ಕೇಂದ್ರ ಸರಕಾರವು ರಾಜ್ಯಕ್ಕೆ ಹಣಕಾಸಿನ ಬೆಂಬಲವನ್ನು ಗಣನೀಯವಾಗಿ ಕಡಿತ ಮಾಡಿದೆ. ತೆರಿಗೆ ಹಂಚಿಕೆಯಲ್ಲಿ ರಾಜ್ಯದ ಪಾಲು

10ನೇ ಹಣಕಾಸು ಆಯೋಗದ ಅವಧಿಯಲ್ಲಿದ್ದ ಶೇಕಡ 3.875ರಿಂದ ಶೇ. 1.9ಕ್ಕೆ ಇಳಿದಿದೆ. ಅಷ್ಟು ಮಾತ್ರವಲ್ಲದೆ, ಸೆಸ್ ಮತ್ತು ಸರ್ಚಾರ್ಜ್ ಹೇರಿಕೆ ಮಾಡುವ ಮೂಲಕ ರಾಜ್ಯಕ್ಕೆ ಬರಬೇಕಾದ ಪಾಲನ್ನು ಕೇಂದ್ರ ಸರಕಾರ ಉದ್ದೇಶಪೂರ್ವಕವಾಗಿಯೇ ಕಡಿತ ಮಾಡುತ್ತಿದೆ. 2011–12ರ ಒಟ್ಟು ತೆರಿಗೆ ಆದಾಯದ ಶೇಕಡ 6.4ರಿಂದ 2021–22ರಲ್ಲಿ ಶೇ. 17.7ಕ್ಕೆ ಸೆಸ್ ಏರಿಸಲಾಗಿದ್ದು ಅದರಿಂದ ಕೇಂದ್ರ ಸರಕಾರ ಸಂಗ್ರಹಿಸಿದ ಆದಾಯ 4,78,980 ಕೋಟಿ ರೂಪಾಯಿ ಆಗಿದೆ. ಆ ಪೈಕಿ ತೆರಿಗೆಯೆಂದು ಹೇರಿದ್ದರೂ ರಾಜ್ಯ ಸರಕಾರಗಳಿಗೆ ಈ ಮೊತ್ತದ ಇನ್ನೂ ಸ್ವಲ್ಪ ಪಾಲು ಬರುತ್ತಿತ್ತು.

ಸಂವಿಧಾನ ಏನೆನ್ನುತ್ತದೆ?

ರಾಜ್ಯಗಳ ಸಾಲದ ಮಿತಿಯನ್ನು ನಿಗದಿಪಡಿಸುವ ಅಧಿಕಾರ ಆಯಾ ರಾಜ್ಯದ ಶಾಸಕಾಂಗಕ್ಕೆ ಇರುತ್ತದೆ ಎಂದು ಸಂವಿಧಾನದ 293ನೇ ಆರ್ಟಿಕಲ್ ಹೇಳುತ್ತದೆ. ರಾಜ್ಯಗಳ ಪಟ್ಟಿಯ 43ನೇ ಅಂಶದ ಅನ್ವಯ ಸಾರ್ವಜನಿಕ ಸಾಲವು ಸಂಪೂರ್ಣವಾಗಿ ರಾಜ್ಯಗಳ ಹಕ್ಕಾಗಿದೆ. ಇವೆಲ್ಲದರ ಹೊರತಾಗಿಯೂ ರಾಜ್ಯಗಳ ನಿವ್ವಳ ಸಾಲ ತರುವ ಹಕ್ಕಿನ ಮೇಲೆ ಮಿತಿ ಹೇರಲು ಕೇಂದ್ರ ಸರಕಾರ ಮಧ್ಯಪ್ರವೇಶ ಮಾಡುತ್ತಿದೆ ಹಾಗೂ ಮುಕ್ತ ಮಾರುಕಟ್ಟೆಯ ಸಾಲ ಸಹಿತ ಎಲ್ಲಾ ಮೂಲಗಳಿಂದ ಸಾಲ ತರುವುದರ ಮೇಲೆ ಮಿತಿಯನ್ನು ಹೇರುತ್ತಿದೆ.

ಆರ್ಥಿಕ ಒಕ್ಕೂಟತತ್ವದ ಮೇಲಿನ ಈ ಆಕ್ರಮಣದ ಪರಿಣಾಮವಾಗಿ ರಾಜ್ಯಕ್ಕೆ ಸಂಪನ್ಮೂಲದ ಕೊರತೆ ಉಂಟಾಗಿದೆ. ತೆರಿಗೆಗಳ ಪಾಲನ್ನು ಶೇಕಡ 3.89ರಿಂದ ಶೇ. 1.92ಕ್ಕೆ ಇಳಿಸಿದ್ದು, ಜಿಎಸ್‌ಟಿ ಪರಿಹಾರ ನೀಡಿಕೆಯನ್ನು ಸ್ಥಗಿತಗೊಳಿಸಿದ್ದು ಮತ್ತು ಸಾಲಗಳನ್ನು ಪಡೆಯಲು ನಿರಾಕರಿಸಿದ್ದು ಇವೇ ಮೊದಲಾದ ಕ್ರಮಗಳಿಂದಾಗಿ ರಾಜ್ಯಕ್ಕೆ ಹಣಕಾಸಿನ ಅಭಾವ ಸೃಷ್ಟಿಯಾಗಿದೆ. ಈ ಮೂರು ಕ್ರಮಗಳ ಒಟ್ಟು ಪರಿಣಾಮವಾಗಿ ಈ ವರ್ಷ 57,000 ಕೋಟಿ ರೂಪಾಯಿ ನಷ್ಟವಾಗಿದೆ.

ರಾಜ್ಯಗಳ ಹಕ್ಕುಗಳ ಮೇಲೆ ಸವಾರಿ ಮಾಡಲು ಕೇಂದ್ರ–ಪ್ರಾಯೋಜಿತ ಯೋಜನೆಗಳನ್ನು ಬಳಸಿಕೊಳ್ಳುವುದು ಹಾಗೂ ರಾಜ್ಯಗಳ ಪಟ್ಟಿಯಲ್ಲಿ ನಮೂದಾಗಿರುವ ವಿಷಯಗಳಲ್ಲಿ ಮಧ್ಯಪ್ರವೇಶ ಮಾಡುವ ಕೇಂದ್ರದ ಧೋರಣೆಯಿಂದಲೂ ಕೇರಳದ ಮೇಲೆ ಪರಿಣಾಮ ಉಂಟಾಗಿದೆ. 2015–16ರಲ್ಲಿ ಕೇಂದ್ರ ಪ್ರಾಯೋಜಿತ ಯೋಜನೆಗಳ ಬಜೆಟ್ ಬಾಬ್ತು ಕೇರಳ ಶೇಕಡ 85ರಷ್ಟು ನಿಧಿಯನ್ನು ಪಡೆದಿತ್ತು. ಆದರೆ, 2021–22ರಲ್ಲಿ ಅದು ಕೇವಲ ಶೇಕಡ 40ಕ್ಕೆ ಕುಸಿದಿದೆ.

ರಾಜ್ಯಪಾಲರ ಅಸಾಂವಿಧಾನಿಕ ಪಾತ್ರ

ಇದರೊಂದಿಗೆ, ರಾಜ್ಯಪಾಲರ ಅಸಾಂವಿಧಾನಿಕ ನಡೆಯಿಂದಾಗಿ ವಿಧಾನಸಭೆ ಅಂಗೀಕರಿಸಿದ್ದ ಅನೇಕ ಮಸೂದೆಗಳು ಕಾನೂನಾಗದೆ ಹಾಗೇ ಉಳಿದುಕೊಂಡಿವೆ. ರಾಜ್ಯಪಾಲರು ರಾಜ್ಯ ಸರಕಾರಕ್ಕೆ ಇನ್ನೂ ಇತರ ಅಡೆತಡೆಗಳನ್ನು ಒಡ್ಡುತ್ತಿದ್ದಾರೆ.

2016–21ರ ನಡುವಿನ ಎಲ್‌ಡಿಎಫ್ ಸರಕಾರದ ಮೊದಲ ಅವಧಿಯಲ್ಲಿ ಮಾಡಲಾದ ಅಭೂತಪೂರ್ವ ಪ್ರಗತಿಯ ಕತ್ತು ಹಿಸುಕುವುದು ಕೇಂದ್ರ ಸರಕಾರದ ಬಹುಮುಖಿ ಆಕ್ರಮಣದ ಉದ್ದೇಶವಾಗಿದೆ. ಎಲ್‌ಡಿಎಫ್ ಸರಕಾರದ ನೀತಿಗಳು ಕೇರಳವನ್ನು ಇನ್ನಷ್ಟು ಮುಂದಕ್ಕೆ ಒಯ್ಯಲಿದ್ದು ಹೆಚ್ಚು ಜನಬೆಂಬಲ ಗಳಿಸುವುದನ್ನು ಮನವರಿಕೆ ಮಾಡಿಕೊಂಡೇ ಮೋದಿ ಸರಕಾರವು ಕೇರಳದ ಅಭಿವೃದ್ಧಿ ಪಥವನ್ನು ತಡೆಯಲು ಈ ಪ್ರಜಾಪ್ರಭುತ್ವ–ವಿರೋಧಿ ಹಾಗೂ ಒಕ್ಕೂಟತತ್ವ–ವಿರೋಧಿ ಕ್ರಮಗಳಿಗೆ ಮುಂದಾಗಿದೆ.

ಫೆಡರಲ್ ತತ್ವಕ್ಕೆ ತಿಲಾಂಜಲಿ

ಒಕ್ಕೂಟತತ್ವವನ್ನು ಸಂಪೂರ್ಣವಾಗಿ ನಾಶ ಮಾಡುವ ಮೋದಿ ಸರಕಾರ ಹಾಗೂ ಬಿಜೆಪಿಯ ಸಂಕಲ್ಪ ಈ ಧೋರಣೆಯ ಹಿಂದೆ ಇದೆ. ಪ್ರತಿಪಕ್ಷ ಆಡಳಿತದ ರಾಜ್ಯಗಳ ವಿರುದ್ಧ ನಗ್ನ ತಾರತಮ್ಯ ಕೂಡ ಕೇಂದ್ರ ಮತ್ತು ರಾಜ್ಯ ಎರಡರಲ್ಲೂ ಬಿಜೆಪಿಯ 'ಡಬಲ್ ಎಂಜಿನ್' ಸರಕಾರವಿದ್ದರೆ ಮಾತ್ರವೇ ಅಭಿವೃದ್ಧಿ ಮತ್ತು ಜನರ ಕಲ್ಯಾಣ ಸಾಧಿಸಲು ಸಾಧ್ಯ ಎನ್ನುವುದನ್ನು ಬಿಂಬಿಸುವ ಪ್ರಯತ್ನವಾಗಿದೆ. ತನ್ನ ಈ ಲಜ್ಜೆಗೇಡಿ ರಾಜಕೀಯ ಉದ್ದೇಶ ಸಾಧನೆಗಾಗಿ ಒಕ್ಕೂಟತತ್ವದ ಸಾರವನ್ನೇ ನಾಶ ಪಡಿಸಲು ಬಿಜೆಪಿ ಆಡಳಿತಗಾರರು ಸಿದ್ಧರಿದ್ದಾರೆ.

ಫೆಬ್ರವರಿ 8ರಂದು ದೆಹಲಿಯಲ್ಲಿ ನಡೆದ ಪ್ರತಿಭಟನೆ ಕೇರಳದ ಪ್ರಶ್ನೆ ಮಾತ್ರವೇ ಅಲ್ಲ. ಅಲ್ಲಿ ಎತ್ತಲಾದ ವಿಷಯಗಳು ಎಲ್ಲಾ ರಾಜ್ಯಗಳಿಗೆ ಸಂಬಂಧಿಸಿದ್ದಾಗಿದೆ. ರಾಜ್ಯಗಳನ್ನು ಅಡಿಯಾಳನ್ನಾಗಿ ಮಾಡಿಕೊಂಡು ಆರ್ಥಿಕ ಸಂಬಂಧಗಳನ್ನು ಪ್ರತಿಪಕ್ಷ ಆಡಳಿತದ ರಾಜ್ಯಗಳ ವಿರುದ್ಧ ಒಂದು ಸಾಧನವನ್ನಾಗಿ ಮಾಡಿಕೊಳ್ಳಲು ಕೇಂದ್ರ ಸರಕಾರ ಯಾವುದಕ್ಕೂ ಹೇಸದಿರುವುದರಿಂದ ಇದು ಎಲ್ಲಾ ರಾಜ್ಯಗಳಿಗೆ ಮಹತ್ವದ್ದಾಗಿದೆ. ಆರ್ಥಿಕ ಕೇಂದ್ರೀಕರಣವು ಏಕಪಕ್ಷೀಯ ವ್ಯವಸ್ಥೆಯನ್ನು ಸೃಷ್ಟಿಸುವ ಪ್ರಯತ್ನದ ಒಂದು ಭಾಗವಾಗಿದೆ. ಒಂದು ದೇಶ–ಒಂದು ಚುನಾವಣೆ ಘೋಷಣೆ ಕೂಡ ಭಾರತವನ್ನು ಒಂದು ಕೇಂದ್ರೀಕೃತ, ಏಕಪಕ್ಷ ರಾಜಕೀಯದತ್ತ ಹೊರಳಿಸುವ ಹುನ್ನಾರವಾಗಿದೆ.

ದೆಹಲಿ ಮತ್ತು ಪಂಜಾಬ್ ಮುಖ್ಯಮಂತ್ರಿಗಳಾದ ಅರವಿಂದ್ ಕೇಜ್ರಿವಾಲ್ ಮತ್ತು ಭಗವಂತ್ ಸಿಂಗ್ ಮಾನ್, ಜಮ್ಮು ಮತ್ತು ಕಾಶ್ಮೀರದ ಮಾಜಿ ಸಿಎಂ ಫರೂಕ್ ಅಬ್ದುಲ್ಲಾ, ಮತ್ತು ಇಂಡಿಯಾ ಕೂಟದ ಭಾಗವಾಗಿರುವ ಪ್ರತಿಪಕ್ಷಗಳ ಅನೇಕ ಮುಖಂಡರು ಕೂಡ ಬೆಂಬಲಿಸಿ ಧರಣಿಯಲ್ಲಿ ಪಾಲ್ಗೊಂಡಿದ್ದು ಉತ್ತಮ ಹಾಗೂ ಮಹತ್ವದ ಬೆಳವಣಿಗೆಯಾಗಿದೆ. ತಮಿಳುನಾಡು ಸಿಎಂ ಬೆಂಬಲ ಸಾರುವ ವಿಡಿಯೋ ಸಂದೇಶ ಕಳಿಸಿದ್ದರು. ಇದಕ್ಕೆ ವ್ಯತಿರಿಕ್ತವಾಗಿ, ಕೇರಳದ ಕಾಂಗ್ರೆಸ್ ನಾಯಕತ್ವ ಋಣಾತ್ಮಕ ಧೋರಣೆ ತಳೆಯಿತು. ದೆಹಲಿ ಧರಣಿಯಲ್ಲಿ ಭಾಗವಹಿಸುವಂತೆ ಅವರನ್ನು ಸಂಪರ್ಕಿಸಿದಾಗ ಅವರ ಪ್ರತಿಕ್ರಿಯೆ ಋಣಾತ್ಮಕವಾಗಿತ್ತು.

ಮುಂಬರುವ ದಿನಗಳಲ್ಲಿ, ರಾಜ್ಯಗಳ ಹಕ್ಕುಗಳು ಮತ್ತು ಫೆಡರಲ್ ತತ್ವದ ರಕ್ಷಣೆಯ ಹೋರಾಟವು ಪ್ರತಿಪಕ್ಷಗಳನ್ನು ಒಗ್ಗೂಡಿಸುವ ಕೂಗಾಗಿ ಹೊರಹೊಮ್ಮಬೇಕು.

ಅನು: ವಿಶ್ವ

'ಒಂದು ರಾಷ್ಟ್ರ–ಒಂದು ಚುನಾವಣೆ'–ಉನ್ನತ ಮಟ್ಟದ ಸಮಿತಿಯನ್ನು ಭೇಟಿ ಮಾಡಿದ ಸಿಪಿಐ(ಎಂ) ನಿಯೋಗ

ಪ್ರಜಾಪ್ರಭುತ್ವ ವಿರೋಧಿ ಪ್ರಸ್ತಾಪಕ್ಕೆ ತೀವ್ರ ವಿರೋಧ

'ಒಂದು ರಾಷ್ಟ್ರ –ಒಂದು ಚುನಾವಣೆ' ಕುರಿತ ಉನ್ನತ ಮಟ್ಟದ ಸಮಿತಿಯ ಆಹ್ವಾನದ ಮೇರೆಗೆ ಸಿಪಿಐ(ಎಂ)ನ ನಿಯೋಗವೊಂದು ಫೆಬ್ರುವರಿ 6ರಂದು ಅದನ್ನು ಭೇಟಿಯಾಗಿ ಇದು ಪ್ರಜಾಪ್ರಭುತ್ವ–ವಿರೋಧಿ ಪ್ರಸ್ತಾವವಾಗಿದೆ, ಇದನ್ನು ಪರಿಶೀಲಿಸುವುದೇ ನಮ್ಮ ಸಂವಿಧಾನಕ್ಕೆ ವಿರುದ್ಧವಾಗಿರುವ ಕ್ರಮ ಎಂಬ ತನ್ನ ನಿಲುವನ್ನು ಪುನರುಚ್ಚರಿಸಿತು.

ಇದಕ್ಕೆ ಮೊದಲು ಡಿಸೆಂಬರ್ 7ರಂದು, ಈ ಸಮಿತಿಯ ಪತ್ರಕ್ಕೆ ಸ್ಪಂದಿಸುತ್ತ ಇಂತಹ ಒಂದು ಪ್ರಸ್ತಾವವೇ ಪ್ರಜಾಪ್ರಭುತ್ವ–ವಿರೋಧಿಯಾಗಿದೆ ಮತ್ತು ಸಂವಿಧಾನದ ಒಂದು ಮೂಲಭೂತ ಲಕ್ಷಣವಾದ ಒಕ್ಕೂಟ ತತ್ವದ ನೀತಿಗಳನ್ನು ನಿರಾಕರಿಸುತ್ತದೆ ಎಂದು ಹೇಳುತ್ತ ಜುಲೈ 4, 2018ರಂದು ಭಾರತದ ಕಾನೂನು ಆಯೋಗಕ್ಕೆ ಸಲ್ಲಿಸಿದ ವಿವರವಾದ ಟಿಪ್ಪಣಿಯನ್ನು ಕಳಿಸಲಾಗಿತ್ತು.

ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ಅಧ್ಯಕ್ಷತೆಯ ಸಮಿತಿ ನಿಯೋಗದ ಅಭಿಪ್ರಾಯವನ್ನು ಆಲಿಸಿತು ಮತ್ತು ಕೆಲವು ಪ್ರಶ್ನೆಗಳನ್ನೂ ಎತ್ತಿತು, ನಿಯೋಗ ಅದಕ್ಕೆ ಉತ್ತರ ನೀಡಿತು.

ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ, ಪೊಲಿಟ್‌ಬ್ಯುರೊ ಸದಸ್ಯರಾದ ನೀಲೋತ್ಪಲ ಬಸು ಮತ್ತು ಕೇಂದ್ರ ಕಾರ್ಯದರ್ಶಿ ಮಂಡಳಿ ಸದಸ್ಯ ಮರಳೀಧರನ್ ಸಿಪಿಐ(ಎಂ) ನಿಯೋಗದಲ್ಲಿದ್ದರು.

ಫೆಬ್ರುವರಿ 8–ಒಕ್ಕೂಟ ತತ್ವವನ್ನು ರಕ್ಷಿಸಲು ನವೀಕೃತ ಹೋರಾಟದ ಆರಂಭ: ಪಿಣರಾಯಿ ವಿಜಯನ್





ದೇಶದ ರಾಜಧಾನಿ ದಿಲ್ಲಿಯಲ್ಲಿ ಪ್ರಜಾಸತ್ತಾತ್ಮಕ ಪ್ರತಿಭಟನೆಗಳ ಕೇಂದ್ರ ಎನಿಸಿಕೊಂಡಿರುವ ಜಂತರ್ ಮಂತರ್ ಫೆಬ್ರುವರಿ 8 ರಂದು ಒಂದು ಐತಿಹಾಸಿಕ ಪ್ರತಿಭಟನೆಗೆ ಸಾಕ್ಷಿಯಾಯಿತು. ಸಾಮಾನ್ಯವಾಗಿ ಶಾಂತಿಯುತ ಪ್ರಜಾಪ್ರಭುತ್ವವಾದಿ ಪ್ರತಿಭಟನೆಗಳನ್ನು ಗಮನಕ್ಕೇ ತಗೊಳ್ಳದ ಮುಖ್ಯಧಾರೆಯ ಮಾಧ್ಯಮಗಳು ಕೂಡ ಗಮನಿಸಬೇಕಾಗಿ ಬಂದ ಪ್ರತಿಭಟನೆ. ಮುಂಬರುವ ಲೋಕಸಭಾ ಚುನಾವಣೆಗಳ ಮೊದಲು ಬಹುಶಃ ಇದೊಂದು ಅತ್ಯಂತ ಪ್ರಬಲ ಪ್ರತಿಭಟನೆ ಎಂದು ಒಬ್ಬ ಪತ್ರಕರ್ತರು ಇದನ್ನು ವರ್ಣಿಸಿದ್ದಾರೆ. ಮೂವರು ಪ್ರತಿಪಕ್ಷಗಳ ಮುಖ್ಯಮಂತ್ರಿಗಳು ಕೇಂದ್ರದ ಬಿಜೆಪಿ ಸರಕಾರ ಕೇಂದ್ರೀಯ ಏಜೆನ್ಸಿಗಳು ಮತ್ತು ನಿಧಿ ನಿರಾಕರಣೆ ಮೂಲಕ ರಾಜ್ಯ ಸರಕಾರಗಳನ್ನು ಹೇಗೆ ಬೆದರಿಸುತ್ತಿದೆ ಎಂಬುದನ್ನು ದೇಶದ ಜನತೆಯ ಗಮನಕ್ಕೆ ತಂದರು.

ಕೇರಳದ ಎಲ್‌ಡಿಎಫ್ ಸರಕಾರದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೇತೃತ್ವದಲ್ಲಿ ನಡೆದ ಈ 'ಒಕ್ಕೂಟ ತತ್ವವನ್ನು ರಕ್ಷಿಸುವ ಹೋರಾಟ'ದಲ್ಲಿ ಎಲ್‌ಡಿಎಫ್ ಸರಕಾರದ ಇತರ ಮಂತ್ರಿಗಳು, ಶಾಸಕರು ಮತ್ತು ಎಡಪಕ್ಷಗಳ ಸಂಸತ್ ಸದಸ್ಯರಲ್ಲದೆ, ದಿಲ್ಲಿಯ ಮುಖ್ಯಮಂತ್ರಿ ಕೇಜ್ರಿವಾಲ್, ಪಂಜಾಬಿನ ಮುಖ್ಯಮಂತ್ರಿ ಭಗವಂತ್ ಮಾನ್, ಜಮ್ಮು ಮತ್ತು ಕಾಶ್ಮೀರ ಮಾಜಿ ಮುಖ್ಯಮಂತ್ರಿ ಫಾರುಕ್ ಅಬ್ದುಲ್ಲ, ತಮಿಳುನಾಡು ಮುಖ್ಯಮಂತ್ರಿಗಳ ಪರವಾಗಿ ಅಲಲಿನ ಮಾಜಿ ಹಣಕಾಸು ಮಂತ್ರಿ ಪಳನಿವೇಲ್ ತ್ಯಾಗರಾಜನ್, ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ, ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜ, ಮಾಜಿ ಕೇಂದ್ರ ಶಿಕ್ಷಣ ಮಂತ್ರಿ ಮತ್ತು ಪ್ರಸಿದ್ಧ ಸುಪ್ರಿಂ ಕೋರ್ಟ್ ವಕೀಲ ಕಪಿಲ್ ಸಿಬಲ್ ಮತ್ತಿತರರು ಭಾಗವಹಿಸಿದರು. ಅಲ್ಲದೆ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು, ಬುದ್ಧಿಜೀವಿಗಳು, ವಕೀಲರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಆರಂಭದಲ್ಲಿ ಮಾತನಾಡಿದ ಕೇರಳದಿಂದ ಚುನಾಯಿತರಾದ ರಾಜ್ಯಸಭಾ ಸದಸ್ಯ ಜಾನ್ ಬ್ರಿಟ್ಟಾಸ್, ದಕ್ಷಿಣ ಮತ್ತು ಉತ್ತರ ಭಾರತಗಳ ನಡುವೆ ಒಡಕು ಉಂಟು ಮಾಡಲಾಗುತ್ತಿದೆ ಎಂದು ಬಿಜೆಪಿ ಐಟಿ ಸೆಲ್ ಮತ್ತು ಮುಖ್ಯವಾಹಿನಿಯ ಮಾಧ್ಯಮಗಳ ನಕಲಿ ಕಥನಗಳನ್ನು ಹರಡುತ್ತಿವೆ ಎಂದು ಹೇಳಿದರು. ವಾಸ್ತವದಲ್ಲಿ, ದಕ್ಷಿಣ ಭಾರತದಲ್ಲಿ ಕರ್ನಾಟಕವು ತನ್ನ ತೆರಿಗೆಯ ಪಾಲನ್ನು ಕೇಳುತ್ತಿದ್ದರೆ, ಪೂರ್ವ ಭಾರತದಲ್ಲಿ ಪಶ್ಚಿಮ ಬಂಗಾಳ ಮತ್ತು ಉತ್ತರ ಭಾರತದಲ್ಲಿ ಪಂಜಾಬ್ ಕೂಡ ಹಾಗೆಯೇ ಹೇಳುತ್ತಿದೆ ಎಂದು ಅವರು ನೆನಪಿಸಿದರು.

"ಹೊಸದೊಂದು ಮುಂಜಾವಿನ ಸೂಚನೆ"

ಸಭೆಯನ್ನುದ್ದೇಶಿಸಿ ಮಾತನಾಡುತ್ತ "ಇಂದು ನಾವು ಭಾರತೀಯ ಗಣರಾಜ್ಯದ ಒಂದು ಐತಿಹಾಸಿಕ ಘಟ್ಟದಲ್ಲಿದ್ದೇವೆ. 'ರಾಜ್ಯಗಳ ಸಂಘ' ಎಂದು ಕಂಡರಿಸಿದ್ದ ಪ್ರಜಾಪ್ರಭುತ್ವ ಇಂದು ನಿಧಾನವಾಗಿ ಮತ್ತು ಸತತವಾಗಿ ಪ್ರಜಾಸತ್ತಾತ್ಮಕವಲ್ಲದ 'ರಾಜ್ಯಗಳ ಮೇಲಿನ ಸಂಘ'ವಾಗಿ ವಿಕಲಗೊಳ್ಳುತ್ತಿದೆ. ದೇಶಾದ್ಯಂತ ಅದರಲ್ಲೂ ವಿರೋಧ ಪಕ್ಷಗಳ ಆಡಳಿತವಿರುವ ರಾಜ್ಯಗಳಲ್ಲಿ ಅದರ ಅಭಿವ್ಯಕ್ತಿಗಳನ್ನು ನೋಡುತ್ತಿದ್ದೇವೆ" ಎಂದು ಆರಂಭಿಸಿದ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್, "ನಾವೆಲ್ಲ ಇದರ ವಿರುದ್ಧ ನಮ್ಮ ಪ್ರಬಲ ಪ್ರತಿಭಟನೆಯನ್ನು ದಾಖಲಿಸಲು ಮತ್ತು ಭಾರತದ ಒಕ್ಕೂಟ ರಚನೆಯನ್ನು ಕಾಪಾಡಲು ಒಗ್ಗೂಡಿದ್ದೇವೆ. ಇಂದು ನಾವು ಒಂದು ನವೀಕೃತ ಹೋರಾಟದ ಆರಂಭವನ್ನು ಸೂಚಿಸುತ್ತಿದ್ದೇವೆ, ಈ ಹೋರಾಟ ರಾಜ್ಯಗಳನ್ನು ಸಮತ್ವದಿಂದ ಕಾಣುವುದನ್ನು ಖಾತ್ರಿಪಡಿಸುವ ಹೊಸದೊಂದು ಮುಂಜಾವನ್ನು ಸೂಚಿಸುತ್ತದೆ. ಈ ಹೋರಾಟವು ಕೇಂದ್ರ–ರಾಜ್ಯ ಸಂಬಂಧಗಳಲ್ಲಿ ಸಮತೋಲನವನ್ನು ಕಾಯ್ದುಕೊಳ್ಳಲು ಶ್ರಮಿಸುತ್ತದೆ. ಹೀಗಾಗಿ, ಫೆಬ್ರವರಿ 8, 2024, ಭಾರತ ಗಣರಾಜ್ಯದ ಇತಿಹಾಸದಲ್ಲಿ ಕೆಂಪಕ್ಷರದ ದಿನವಾಗಲಿದೆ" ಎಂದು ಹೇಳಿದರು.

ಒಕ್ಕೂಟ ಸರ್ಕಾರವು ಹಲವಾರು ಕ್ಷೇತ್ರಗಳಲ್ಲಿ, ರಾಜ್ಯಪಟ್ಟಿಯಲ್ಲಿರುವ ಕಾನೂನು ಮತ್ತು ಸುವ್ಯವಸ್ಥೆಯ ವಿಷಯದಲ್ಲೂ ರಾಜ್ಯಗಳ ಅಧಿಕಾರ ಮತ್ತು ಕರ್ತವ್ಯಗಳನ್ನು ಅತಿಕ್ರಮಣ ಮಾಡುವ ಕಾನೂನುಗಳನ್ನು ರಚಿಸುತ್ತಿದೆ ಎನ್ನುತ್ತ "ಕೃಷಿ, ಶಿಕ್ಷಣ, ವಿದ್ಯುತ್, ಸಹಕಾರ ಹೀಗೆ ರಾಜ್ಯಗಳ ಹಕ್ಕುಗಳನ್ನು ಕುಗ್ಗಿಸುವ ಕಾನೂನುಗಳನ್ನು ಮಾಡಲಾಗಿದೆ. ಸಹಕಾರ ಸಚಿವಾಲಯವನ್ನೂ ರಚಿಸಲಾಗಿದೆ. ರಾಜ್ಯಗಳ ಮೇಲೆ ಪರಿಣಾಮ ಬೀರುವ ವಿಷಯಗಳ ಬಗ್ಗೆ ಅವರ ಅಭಿಪ್ರಾಯವನ್ನು ಪಡೆಯದೆ, ಅವರ ಒಪ್ಪಿಗೆಯನ್ನು ಪಡೆಯದೆ ಬಹುರಾಷ್ಟ್ರೀಯ ಒಪ್ಪಂದಗಳನ್ನು ಮಾಡಿಕೊಳ್ಳಲಾಗುತ್ತಿದೆ.ಇವೆಲ್ಲವೂ ರಾಜ್ಯಗಳ ಹಕ್ಕುಗಳನ್ನು ಹೇಗೆ ತುಳಿಯಲಾಗುತ್ತಿದೆ ಮತ್ತು ಭಾರತವನ್ನು ಹೇಗೆ ಪ್ರಜಾಸತ್ತಾತ್ಮಕವಲ್ಲದ 'ರಾಜ್ಯಗಳ ಮೇಲಿನ ಸಂಘ' 'ಆಗಿ ಬದಲಾಯಿಸಲಾಗುತ್ತಿದೆ ಎಂಬುದಕ್ಕೆ ಉದಾಹರಣೆಗಳಾಗಿವೆ," ಎಂದು ಅವರು ಹೇಳಿದರು.

65% ಆದಾಯದಲ್ಲಿ 35% ಖರ್ಚು

"ಭಾರತದ ಒಕ್ಕೂಟ ಸಂರಚನೆಗೆ ಮರ್ಮಾಘಾತ ಒಕ್ಕೂಟ ಸರಕಾರ ರಾಜ್ಯಗಳ ಆರ್ಥಿಕ ಸಂಪನ್ಮೂಲಗಳನ್ನು ತಿಂದು ಹಾಕುತ್ತಿರುವುದರಲ್ಲಿ ಬರುತ್ತಿದೆ" ಎಂದ ಕೇರಳದ ಮುಖ್ಯಮಂತ್ರಿಗಳು "ಸಹಕಾರಿ ಒಕ್ಕೂಟದ ಬಗ್ಗೆ ದೊಡ್ಡ–ದೊಡ್ಡ ಮಾತುಗಳನ್ನಾಡುವವರೇ ಹಣಕಾಸು ಆಯೋಗದಿಂದ ರಾಜ್ಯಗಳಿಗೆ ಹಂಚಿಕೆ ಮಾಡಬೇಕಾದ ಸಂಪನ್ಮೂಲಗಳನ್ನು ಕಡಿತ ಮಾಡಲು ಪ್ರಯತ್ನಿಸಿದ್ದಾರೆ ಎಂದು ಆರೋಪಿಸಲಾಗಿದೆ" ತಮ್ಮ ಸ್ವಂತ ಯೋಜನೆಗಳಿಗೇ ಕೇಂದ್ರದ ಹಂಚಿಕೆಯು ವರ್ಷದಿಂದ ವರ್ಷಕ್ಕೆ ಇಳಿಯುವುದನ್ನು ಮತ್ತು ರಾಜ್ಯ ಸರಕಾರಗಳೇ ಹೆಚ್ಚೆಚ್ಚು ಹಣ ಹೊಂದಿಸಬೇಕಾಗಿ ಬರುವುದನ್ನು ನೋಡುತ್ತಿದ್ದೇವೆ ಎಂದು ಸೇರಿಸಿದರು.

ರಿಝರ್ವ್ ಬ್ಯಾಂಕಿನ ಅಂಕಿ–ಅಂಶಗಳನ್ನು ಉಲ್ಲೇಖಿಸುತ್ತ ವಿಜಯನ್ ಅವರು ದೇಶದ ಒಟ್ಟು ವೆಚ್ಚದಲ್ಲಿ ಗಣನೀಯ 65% ದಷ್ಟು ಭಾಗವನ್ನು ರಾಜ್ಯಗಳು ಭರಿಸಬೇಕಾಗಿದೆ, ಒಕ್ಕೂಟದ ಕೊಡುಗೆ ಕೇವಲ 35% ಆಗಿದೆ. ಆದರೆ ಆದಾಯ ಹಂಚಿಕೆಗೆ ಬಂದಾಗ, ಅದು ತದ್ವಿರುದ್ಧವಾಗಿದೆ. ಕೇಂದ್ರ ಸರ್ಕಾರವು ಸುಮಾರು 65% ವನ್ನು ತನ್ನ ಜೇಬಿಗೆ ಸೇರಿಸಿಕೊಳ್ಳುತ್ತಿದೆ ಮತ್ತು ರಾಜ್ಯಗಳಿಗೆ ಕೇವಲ 35% ಉಳಿಸಲಾಗುತ್ತಿದೆ. ರಾಜ್ಯಗಳು ಕೇವಲ 35% ಆದಾಯದೊಂದಿಗೆ 65% ವೆಚ್ಚಗಳನ್ನು ಪೂರೈಸಬೇಕು. ಕೆಲವು ದಿನಗಳ ಹಿಂದೆ ಮಂಡಿಸಿದ ಮಧ್ಯಂತರ ಬಜೆಟ್‌ನಲ್ಲಿಯೂ ಸಹ ಬಂಡವಾಳ ವೆಚ್ಚಗಳಿಗಾಗಿ ನೀಡಲಾಗುವ ಸಾಲವನ್ನು ಕಡಿಮೆ ಮಾಡಿರುವುದರಿಂದ ರಾಜ್ಯಗಳನ್ನು ಮತ್ತಷ್ಟು ಹಿಂಡಲಾಗುತ್ತಿದೆ ಎಂದು ಅವರು ಹೇಳಿದರು.

ಅಭಿವೃದ್ಧಿ ಮತ್ತು ಕಲ್ಯಾಣ ಭಿಕ್ಷೆಯಲ್ಲ–ಜನರ ಹಕ್ಕು

"ಅನೇಕ ಕೇಂದ್ರ ಯೋಜನೆಗಳಲ್ಲಿ ಒಕ್ಕೂಟ ಸರಕಾರ ರಾಜ್ಯಗಳಿಗಿಂತ ಕಡಿಮೆ ಪಾಲನ್ನು ಹೊಂದಿದ್ದರು ಕೂಡ, ಅವರು ಅವುಗಳನ್ನು ಬ್ರ್ಯಾಂಡ್ ಮಾಡಲು ಉತ್ಸುಕರಾಗಿರುತ್ತಾರೆ. .ಬ್ರಾಂಡಿಂಗ್ ಇಲ್ಲದಿದ್ದರೆ ಹಣ ನೀಡುವುದಿಲ್ಲ ಎಂದು ಹೇಳುವ ಮಟ್ಟಕ್ಕೂ ಹೋಗುತ್ತಾರೆ. ಬ್ರ್ಯಾಂಡಿಂಗ್ ಅಂದರೆ ಪಟ್ಟಿ ಅಂಟಿಸುವ ಕೆಲಸವೇ ಆಗಿದೆ. ಹೀಗೆ ಮಾಡುವ ಮೂಲಕ ಇಂತಹ ಯೋಜನೆಗಳ ಫಲಾನುಭವಿಗಳ ಸ್ವಾಭಿಮಾನವನ್ನು ಪ್ರಶ್ನಿಸಲಾಗುತ್ತಿದೆ. ಅಭಿವೃದ್ಧಿ ಮತ್ತು ಕಲ್ಯಾಣವನ್ನು ಜನರ ನೈಜ ಹಕ್ಕುಗಳೆಂದು ನೋಡುವ ಯಾವುದೇ ಜವಾಬ್ದಾರಿಯುತ ಸರ್ಕಾರವು ತಮ್ಮ ಸ್ವಂತ ನಾಗರಿಕರನ್ನು ಹೆಸರಿಸಿ ನಾಚಿಕೆಪಡುವಂತೆ ಮಾಡಲು ಸಾಧ್ಯವಿಲ್ಲ" ಎಂದು ಒಕ್ಕೂಟ ಸರಕಾರದ ವರ್ತನೆಯ ಬಗ್ಗೆ ಟಿಪ್ಪಣಿ ಮಾಡಿದ ಕೇರಳ ಮುಖ್ಯಮಂತ್ರಿಗಳು ಕೇರಳದ ಲೈಫ್ ಮಿಷನ್‌ನ ಉದಾಹರಣೆಯನ್ನು ಉಲ್ಲೇಖಿಸಿದರು.

ಇದುವರೆಗೆ 3,74,508 ಮನೆಗಳನ್ನು ಅದರ ಅಡಿಯಲ್ಲಿ ನಿರ್ಮಿಸಲಾಗಿದೆ. ಇದಕ್ಕಾಗಿ ಒಟ್ಟು ರೂ. 17,104.87 ಕೋಟಿ ಖರ್ಚು ಮಾಡಲಾಗಿದೆ. ಅದರಲ್ಲಿ ಒಕ್ಕೂಟದ ಪಾಲು ಕೇವಲ ರೂ. 2,081.69 ಕೋಟಿ, 12.17%ವಷ್ಟೇ, 87.83% ವೆಚ್ಚವನ್ನು

ಪುಟ 10 ಕ್ಕೆ







ಸಂಚುಕೋರ ಸಂಘ ಪರಿವಾರ: ಮಂಡ್ಯ ಜನತೆಯ ದಿವ್ಯ ತಿರಸ್ಕಾರ

ಟಿ.ಎಲ್.ಕೃಷ್ಣೇಗೌಡ

ಸಂಘ ಪರಿವಾರದ ಹೀನ ಸಂಚುಗಳನ್ನು ಮಂಡ್ಯ ಜಿಲ್ಲೆಯ ಜನ ಮತ್ತೊಮ್ಮೆ ತಿರಸ್ಕರಿಸಿದ್ದಾರೆ. ಸಂಘ ಪರವಾರದ ಬಜರಂಗದಳ ಮತ್ತು ವಿಶ್ವ ಹಿಂದೂ ಪರಿಷತ್ ಫೆಬ್ರುವರಿ 9 ರಂದು ನೀಡಿದ್ದ ಮಂಡ್ಯ ಬಂದ್ ಕರೆಗೂ ತಮಗೂ ಯಾವುದೇ ಸಂಬಂಧ ಇಲ್ಲ ಎಂಬಂತೆ ನಿರ್ಲಕ್ಷಿಸಿ ತಮ್ಮ ವ್ಯಾಪಾರ, ವಹಿವಾಟಿನಲ್ಲಿ ತೊಡಗುವ ಮೂಲಕ ಸಂಘ ಪರಿವಾರದ ಪ್ರಚೋದನೆಗೆ ಸೆಗಣಿ ಸುರಿದಿದ್ದಾರೆ.

ಮಂಡ್ಯ ನಗರದಿಂದ ಕೇವಲ ಹತ್ತು ಕಿಲೋಮೀಟರ್ ದೂರದಲ್ಲಿರುವ ಹೋಬಳಿ ಕೇಂದ್ರ ಕೆರಗೋಡು ಎಂಬ ದೊಡ್ಡ ಗ್ರಾಮ. ಇಲ್ಲಿ ಮಾಧವ ಶಾಲೆ ಹೆಸರಿನ ಶಾಖೆ ನಡೆಸುತ್ತಿರುವ ಆರೆಸ್ಸೆಸ್ ಕಳೆದ ಇಪ್ಪತ್ತೈದು ಮೂವತ್ತು ವರ್ಷಗಳಿಂದ ಚಟುವಟಿಕೆಗಳನ್ನು ನಡೆಸುತ್ತಿದೆ. ಈಗ್ಗೆ ಕೆಲವು ದಿನಗಳ ಹಿಂದೆ ಗೌರಿಶಂಕರ ಟ್ರಸ್ಟ್ ಒಂದರ ಹೆಸರನ್ನು ದುರುಪಯೋಗ ಮಾಡಿಕೊಂಡು ಊರಿನ ದೇವಸ್ಥಾನವೊಂದರ ಎದುರು ಧ್ವಜ ಸ್ಥಂಭವೊಂದನ್ನು ನಿರ್ಮಿಸಿದೆ. ಧ್ವಜ ಸ್ಥಂಭಕ್ಕೆ ಅನುಮತಿ ಪಡೆಯುವಾಗ ಅಲ್ಲಿ ರಾಷ್ಟ್ರ ಧ್ವಜ ಮತ್ತು ನಾಡ ಧ್ವಜವನ್ನು ಮಾತ್ರ ಹಾರಿಸುತ್ತೇವೆಂದು ಮುಚ್ಚಳಿಕೆ ಬರೆದುಕೊಟ್ಟು ಧ್ವಜ ಸ್ಥಂಭ ನಿರ್ಮಿಸಿದ ಮೇಲೆ ಜನವರಿ 19 ರಂದು ಆಂಜನೇಯನ ಚಿತ್ರವಿರುವ ಕೇಸರಿ ಧ್ವಜ ಹಾರಿಸಲಾಗಿದೆ. ಜನವರಿ 22 ರಂದು ಅಯೋಧ್ಯೆಯಲ್ಲಿ ರಾಮ ಮಂದಿರ ಉದ್ಘಾಟನೆ ಇದ್ದ ಕಾರಣ ಇದಕ್ಕೆ ಯಾರೂ ಆಕ್ಷೇಪಣೆ ಮಾಡಲಿಲ್ಲ. ನಂತರ ಬಂದ ಜನವರಿ 26 ರ ಗಣರಾಜ್ಯೋತ್ಸವ ದಿನದಂದು ರಾಷ್ಟ್ರ ಧ್ವಜ ಹಾರಿಸಿ ಸಂಜೆಯಾಗುತ್ತಿದ್ದಂತೆ ಅದನ್ನು ಇಳಿಸಿ ಮತ್ತೆ ಕೇಸರಿ ಧ್ವಜ ಹಾರಿಸಲಾಯಿತು.

> **ಇದುವರೆಗೆ ಸಂಘ ಪರಿವಾರಕ್ಕೆ ವೈದಿಕ ಮೆದುಳಿತ್ತೆ ಹೊರತು ಅದನ್ನ ಜಾರಿಗೆ ತರುವ ಶೂದ್ರ ಕೈ ಕಾಲುಗಳು ಇರಲಿಲ್ಲ ಈಗ ಸಂಘದ ಮೆದುಳು ಮತ್ತು ಜೆಡಿಎಸ್ ದೇಹ ಅವರಲ್ಲಿ ಹೊಸ ಹುರುಪು ಮತ್ತು ಭರವಸೆಯನ್ನು ತುಂಬಿದೆ.**

ಮತ್ತೆ ಕೇಸರಿ ಧ್ವಜ ಹಾರಿಸಿದ್ದನ್ನು ಕಂಡ ಸ್ಥಳೀಯ ದಲಿತ ಯುವಕರು ಅದನ್ನು ಪ್ರಶ್ನಿಸಿದಾಗ ಸಂಘ ಪರಿವಾರದ ಅಮಲು ಏರಿದ ಕೆಲವರು ಅವರಿಗೆ ಸವಾಲನ್ನು ಎಸೆದಿದ್ದಾರೆ. ಸವಾಲನ್ನು ಸ್ವೀಕರಿಸಿದ ಅವರು ಅದನ್ನು ಜಿಲ್ಲಾಧಿಕಾರಿಯೂ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗೆ ದೂರಿನ ರೂಪದಲ್ಲಿ ಆಕ್ಷೇಪಣೆ ಸಲ್ಲಿಸಿದ್ದಾರೆ. ದೂರು ಸ್ವೀಕರಿಸಿದ ಅಧಿಕಾರಿಗಳು ಸಂಧಾನದ ಮೂಲಕ ಧ್ವಜ ಇಳಿಸಲು ಮುಂದಾಗಿದ್ದಾರೆ. ಅಷ್ಟರಲ್ಲಾಗಲೇ ಜಾಗೃತಗೊಂಡ ಸಂಘ ಪರಿವಾರ ಜಾತಿ ಸ್ವರೂಪ ಪಡೆಯಬಹುದಾಗಿದ್ದ ವಿಷಯಕ್ಕೆ ಧಾರ್ಮಿಕ ಸ್ವರೂಪ ಕೊಡಲು, ಧ್ವಜ ಇಳಿಸಲು ಬಂದವರನ್ನು ಹಿಂದೂ ವಿರೋಧಿಗಳು ಧ್ವಜ ಹಾರಿಸಿದವರು ಹಿಂದೂ ರಕ್ಷಕರ, ಕೇಸರಿ ಧ್ವಜ ರಕ್ಷಿಸಿಕೊಂಡವರೇ ನಿಜವಾದ ಹುತಾತ್ಮರು ಎನ್ನಲು ಹಗಲೂ ರಾತ್ರಿ ಕೆಲಸ ಮಾಡಿದ್ದಾರೆ. ಈ ಹಂತದಲ್ಲಿ ಜನರನ್ನು ಮನವೊಲಿಸಲು ಜಿಲ್ಲಾಡಳಿತ ಪ್ರಯತ್ನಿಸಿದರೂ ಯಾವುದೇ ಪ್ರಯೋಜನ ಆಗದ ಕಾರಣ ಬಲಪ್ರಯೋಗ ನಡೆಸಿ ಕೇಸರಿ ಧ್ವಜವನ್ನು ಇಳಿಸಿ ರಾಷ್ಟ್ರ ಧ್ವಜ ಹಾರಿಸಿದೆ.

ಕೆರಗೋಡನ್ನು ರಾಷ್ಟ್ರ ಮಟ್ಟದಲ್ಲಿ ಸುದ್ದಿ ಮಾಡಲು ಸಂಘ ಪರಿವಾರಕ್ಕೆ ಮತ್ತು ಅವರ ಕೃಪಾ ಘೋಷಿತ ಮಾಧ್ಯಮಗಳಿಗೆ ಅಷ್ಟೇ ಸಾಕಾಯಿತು. ಇಡೀ ರಾಜ್ಯ ಸರ್ಕಾರವೇ ಹಿಂದೂ ವಿರೋಧಿ, ಮುಸ್ಲಿಮರ ಪರ. ಕೇಸರಿ ಧ್ವಜ ಹಾರಿಸಲು ಬಿಡದ ಇವರು ಹಸಿರು ಬಾವುಟ ಹಾರಿಸಲು ಮುಂದಾಗಿದ್ದಾರೆ ಎಂದು ಹುಯಿಲೆಬ್ಬಿಸಿದರು. ಮಾರನೆಗೆ ಇಡೀ ಬಿಜೆಪಿ ನಾಯಕತ್ವ, ಸಂಘ ಪರಿವಾರದ ಮುಂದಾಳುಗಳು ಕೆರಗೋಡಿನಲ್ಲಿ ಜಮಾಯಿಸಿದರು. ಸಧ್ಯ ನಿರುದ್ಯೋಗಿಯಾಗಿರುವ ಮತ್ತು ಸಂಘ ಪರಿವಾರದ ಸಖ್ಯದಲ್ಲಿ ಸುಖ ಹುಡುಕುತ್ತಿರುವ ಜೆಡಿಎಸ್ ನಾಯಕ ಕುಮಾರಸ್ವಾಮಿ ಕೂಡ ಸ್ಥಳೀಯ ಮುಖಂಡರೊಡನೆ ಸಂಘ ಪರಿವಾರದ ಸಂಚಿನ ಭಾಗವಾದರು.



ಶಕ್ತಿಯೇ ಇಲ್ಲದೆ ಕೇವಲ ಸಂಚುಗಳನ್ನು ನಂಬಿಕೊಂಡಿದ್ದ ಸಂಘ ಪರಿವಾರಕ್ಕೆ ಜೆಡಿಎಸ್ ಪಕ್ಷದ ಬೆಂಬಲ ಸಿಕ್ಕಿದ್ದರಿಂದ ಆನೆ ಬಲ ಬಂದಂತಾಯಿತು. ಪರಿಣಾಮವಾಗಿ ಕೆರಗೋಡಿನಿಂದ ಮಂಡ್ಯದ ವರೆಗೆ ಸುಮಾರು ಒಂದು ಸಾವಿರದಷ್ಟು ಜನರು ಪಾದಯಾತ್ರೆ ನಡೆಸಿದರು. ಪಾದಯಾತ್ರೆಯ ಉದ್ದಕ್ಕೂ ತಮ್ಮ 'ಸಂಸ್ಕೃತಿ'ಯನ್ನು ಮರೆದ ಸಂಘ ಪರಿವಾರ ಬೀದಿಯಲ್ಲಿ ಸಿಕ್ಕ ಸ್ಥಳೀಯ ಶಾಸಕ ರವಿಕುಮಾರ್, ಸಚಿವ ಚಲುವರಾಯಸ್ವಾಮಿ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕಟೌಟ್ ಮತ್ತು ಫ್ಲೆಕ್ಸ್‌ಗಳನ್ನು ಹರಿದು, ಅಶ್ಲೀಲವಾಗಿ ನಿಂದಿಸುತ್ತಾ ಮಂಡ್ಯ ತಲುಪಿದರು. ಜಿಲ್ಲಾಧಿಕಾರಿ ಕಛೇರಿಗೆ ತೆರಳುವ ಮಾರ್ಗದ ಹೆದ್ದಾರಿಯಲ್ಲಿರುವ ಕುರುಬರ ಸಂಘದ ಕಟ್ಟಡ ಮತ್ತು ಸಂಘ ನಡೆಸುವ ಹಾಸ್ಟೆಲ್‌ಗೆ ಕಲ್ಲು ತೂರಿ ಕಿಟಕಿ ಗಾಜುಗಳನ್ನು ಪುಡಿ ಮಾಡಿದರು ಮತ್ತು ಅಲ್ಲಿದ್ದ ಶಾಸಕರು ಮತ್ತು ಮುಖ್ಯಮಂತ್ರಿಗಳ ಕಟೌಟ್ಗಳನ್ನು ಹರಿದು ಹಾಕಿದರು. ಕೊನೆಗೆ ಜಿಲ್ಲಾಧಿಕಾರಿಗಳ ಕಛೇರಿ ತಲುಪಿ ಬಾಯಿಗೆ ಬಂದಂತೆ ಮಾತನಾಡಿದರು. ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರು ತಾವೇನೂ ಸಂಘ ಪರಿವಾರದ ನಾಯಕರಿಗಿಂತ ಕಡಿಮೆ ಇಲ್ಲ ಎನ್ನುವಂತೆ ಪ್ರಚೋದನಕಾರಿ ಭಾಷಣ ಮಾಡಿ 'ಬಹು ಸಂಖ್ಯಾತರ ಭಾವನೆಗಳಿಗೆ ದಕ್ಕೆಯಾದರೆ ಸಹಿಸುವುದಿಲ್ಲ, ಅದೇ ಸ್ಥಂಭದಲ್ಲಿ ಹನುಮ ಧ್ವಜ ಹಾರಿಸುವವರೆಗೂ ಹೋರಾಟ ನಿಲ್ಲುವುದಿಲ್ಲ' ಎಂದು ಕಿರುಚಾಡಿದರು. ಸಂಘ ಪರಿವಾರದ ಧ್ವನಿಗೆ ಬಹುಪಾರಾಕ್ ಹೇಳಿ ಫೆಬ್ರವರಿ ಒಂಬತ್ತನೇ ತಾರೀಖು ಮಂಡ್ಯ ಬಂದ್ ನಡೆಸುವುದಾಗಿ ಘೋಷಣೆಯನ್ನೂ ಮಾಡಿಬಿಟ್ಟರು.

ಒಂದೆರಡು ದಿನದಲ್ಲೇ ಇಷ್ಟೆಲ್ಲಾ ನಡೆದ ಘಟನೆಗಳನ್ನು ಇಡೀ ಜಿಲ್ಲೆಯ ಜನರು ಕುತೂಹಲ ಮತ್ತು ಗಾಬರಿಯಿಂದ ಗಮನಿಸಿದರು. ಮಂಡ್ಯ ಜಿಲ್ಲೆಯ ಪ್ರಗತಿಪರ ಮನಸ್ಸುಗಳು ಕ್ರಿಯಾಶೀಲಗೊಂಡು ಸಂಘಿ ಸಂಚುಗಳನ್ನು ವಿಫಲಗೊಳಿಸಲು ತೀರ್ಮಾನಿಸಿದರು. ಇದರ ಪರಿಣಾಮ ಎಂಬಂತೆ ಜನವರಿ ಮೂವತ್ತರಂದು ಹಮ್ಮಿಕೊಂಡಿದ್ದ ಸೌಹಾರ್ದ ಮಾನವ ಸರಪಳಿಯಲ್ಲಿ ಸಾವಿರಕ್ಕೂ ಹೆಚ್ಚು ಜನ ಪಾಲ್ಗೊಂಡರು. ಮಂಡ್ಯದ ಪ್ರವಾಸಿ ಮಂದಿರದಲ್ಲಿ ಸರಣಿ ಸಭೆಗಳನ್ನು ನಡೆಸಿ ಜಿಲ್ಲೆಯ ಸೌಹಾರ್ದತೆಯನ್ನು ಉಳಿಸಿಕೊಳ್ಳಲು ಹಲವು ಯೋಜನೆಗಳನ್ನು ರೂಪಿಸಿದರು.

ಸಂಘ ಪರಿವಾರದ ಬಂದ್‌ಗೂ ಮೊದಲು ಮಂಡ್ಯ ಬಂದ್ ನಡೆಸಲು ಕರೆ:

ಫೆಬ್ರವರಿ ಒಂಬತ್ತರಂದು ಬಂದ್ ನಡೆಸಲು ಸಂಘ ಪರಿವಾರ ಕರೆ ನೀಡಿದ ತಕ್ಷಣವೇ ಸಭೆ ಸೇರಿದ ಪ್ರಗತಿಪರರು 'ಜಿಲ್ಲೆಯ ಸೌಹಾರ್ದತೆ ಉಳಿಸಿಕೊಳ್ಳಲು' ಫೆಬ್ರವರಿ ಏಳರಂದೆ ಬಂದ್ ನಡೆಸಲು ಕರೆ ನೀಡಿದರು ಮತ್ತು ಕೋಮು ಪ್ರಚೋದನೆಗೆ ಕರೆ ನೀಡುವವರ ಮೇಲೆ ಕಠಿಣ ಕಾನೂನು ಕ್ರಮ ಕೈಗೊಳ್ಳಲು ಮತ್ತು ಅಂತಹ ವ್ಯಕ್ತಿಗಳು ಮಂಡ್ಯ ಜಿಲ್ಲೆಗೆ ಪ್ರವೇಶಿಸದಂತೆ ನಿರ್ಬಂಧಿಸಬೇಕೆಂದು ಜಿಲ್ಲಾಡಳಿತವನ್ನು ಒತ್ತಾಯಿಸಿ ಮನವಿ ನೀಡಲಾಯಿತು. ಇದಲ್ಲೆವೂ ಮಾಧ್ಯಮಗಳಲ್ಲಿ ಸುದ್ದಿಯಾಗುತ್ತಲೇ ಪರಿಸ್ಥಿತಿ ತಮ್ಮ ನಿಯಂತ್ರಣ ಮೀರುತ್ತಿರುವುದರ ಅರಿವು ಸಂಘ ಪರಿವಾರ ಮತ್ತು ಜೆಡಿಎಸ್ ಮುಖಂಡರಿಗೆ ಮನವರಿಕೆಯಾಯಿತು.

ಎರಡು ದಿನದ ಅಂತರದಲ್ಲಿ ಎರಡು ಬಂದ್ ನಡೆದರೆ ಆಗಬಹುದಾದ ಸಮಸ್ಯೆಗಳನ್ನು ಗಮನಿಸಿ ಜಿಲ್ಲಾಡಳಿತ ಪ್ರಗತಿಪರ ಸಂಘಟನೆಗಳು ಮತ್ತು ಸಂಘ ಪರಿವಾರ ಎರಡರ ಜೊತೆಯೂ ಪ್ರತ್ಯೇಕ ಸಭೆ ನಡೆಸಿ ಬಂದ್ ಕೈಬಿಡುವಂತೆ ಮನವಿ ಮಾಡಿತು. ಜಿಲ್ಲಾಡಳಿತದ ಮನವಿಗೆ ಓಗೊಟ್ಟ ಪ್ರಗತಿಪರರು ಕಾನೂನು ಸುವ್ಯವಸ್ಥೆ ಕಾಪಾಡಲು ಜಿಲ್ಲಾಡಳಿತ ಕಠಿಣ ಕ್ರಮಗಳನ್ನು ಕೈಗೊಂಡರೆ ನಾವು ಬಂದ್ ನಡೆಸದೆ ಆಡಳಿತದ ಜೊತೆ ಸಹಕರಿಸುವುದಾಗಿ ಭರವಸೆ ನೀಡಿದೆವು. ಇದರಿಂದಾಗಿ ಸಂಘ ಪರಿವಾರ ಇಕ್ಕಟ್ಟಿಗೆ ಸಿಲುಕಿತು. ಬಂದ್ ಕರೆ ವಾಪಸ್ಸು ಪಡೆದರೆ ಅವಮಾನ ಎಂದು ಭಾವಿಸಿ ಬಂದ್ ನಡೆಸುವುದಾಗಿ ಹೇಳಿ ಸಭೆಯಿಂದ ಹೊರಬಂದರು. ಇಷ್ಟೆಲ್ಲಾ ಬೆಳವಣಿಗೆಗಳು ಮಾಧ್ಯಮಗಳಲ್ಲಿ ವರದಿಯಾಗಿ ಜಿಲ್ಲಾಡಳಿತದ ಮನವಿಯನ್ನು ತಿರಸ್ಕರಿಸಿ ಬಂದ್ ನಡೆಸುವವರನ್ನು ಜನತೆ ನಕಾರಾತ್ಮಕವಾಗಿ ನೋಡುವಂತಾಯಿತು. ಇದನ್ನು ಗಮನಿಸಿದ ಜೆಡಿಎಸ್ ಮತ್ತು ಬಿಜೆಪಿ ಬಂದ್ ಕರೆಗೆ ನಮ್ಮ ಬೆಂಬಲ ಇಲ್ಲ ಎಂದು ಬಹಿರಂಗವಾಗಿ ಸುದ್ದಿಗೋಷ್ಠಿ ನಡೆಸಿ ಹೇಳಬೇಕಾಯಿತು. ಕೊನೆಗೆ ಸಂಘ ಪರಿವಾರ ನೀಡಿದ್ದ ಬಂದ್ ನೂರಾರು ಜನರ ಮೆರವಣಿಗೆ ಮತ್ತು ಕಿರುಚಾಟದಲ್ಲಿ ಅವಸಾನವಾಯಿತು.

ಸತತ ಸಂಚು, ಸತತ ವಿಫಲ:

ಸಂಘ ಪರಿವಾರ ಮಂಡ್ಯ ಜಿಲ್ಲೆಯನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಕಳೆದ ಮೂರು ದಶಕಗಳಿಂದ ನಿರಂತರವಾಗಿ ಪ್ರಯತ್ನ ಪಟ್ಟಿದೆ. ಮಂಡ್ಯದ ಮೂಲಕ ಹಳೇ ಮೈಸೂರನ್ನು ಹಿಡಿಯದೆ ಪೂರ್ಣ ಪ್ರಮಾಣದಲ್ಲಿ ರಾಜ್ಯದಲ್ಲಿ ಅಧಿಕಾರ ಹಿಡಿಯಲು ಸಾಧ್ಯವಿಲ್ಲ ಎಂಬುದು ಸಂಘ ಪರಿವಾರಕ್ಕೆ ಚೆನ್ನಾಗಿ ಗೊತ್ತು. ಆದ್ದರಿಂದಲೇ ಶ್ರೀರಂಗಪಟ್ಟಣ ಮಸೀದಿ, ಉರೀಗೌಡ ನಂಜೇಗೌಡ ಈಗ ಬಾವುಟ ಅವರ ಆಟದ ಸಾಮಾನುಗಳಾಗಿವೆ. ಜಿಲ್ಲೆಯ ಪ್ರಜ್ಞಾವಂತ ಜನ ಇವರ ಎಲ್ಲಾ ಆಟಗಳನ್ನು ತಿರಸ್ಕರಿಸಿದ್ದಾರೆ. ಆದರೆ ಈಗ ಜೆಡಿಎಸ್ ಅವರ ಜೊತೆ ಕೈಜೋಡಿಸಿರುವುದು ಖಂಡಿತವಾಗಿಯೂ ಅಪಾಯಕಾರಿಯಾಗಿದೆ. ಇದುವರೆಗೆ ಸಂಘ ಪರಿವಾರಕ್ಕೆ ವೈದಿಕ ಮೆದುಳಿತ್ತೇ ಹೊರತು ಅದನ್ನು ಜಾರಿಗೆ ತರುವ ಶೂದ್ರ ಕೈಕಾಲುಗಳು ಇರಲಿಲ್ಲ. ಈಗ ಸಂಘದ ಮೆದುಳು ಮತ್ತು ಜೆಡಿಎಸ್ ದೇಹ ಅವರಲ್ಲಿ ಹೊಸ ಹುರುಪು ಮತ್ತು ಭರವಸೆಯನ್ನು ತುಂಬಿದೆ. ಜನತೆಯ ಸಂಕಟಗಳಿಗೆ ನೈಜ ಪರಿಹಾರವನ್ನು ಒದಗಿಸಲಾರದ ಕಾಂಗ್ರೆಸ್ ಪಕ್ಷದ ಮಿತಿ ಆ ಶಕ್ತಿಗಳ ಯಶಸ್ಸಿಗೆ ಕಾರಣವಾಗಬಹುದು. ಪ್ರಗತಿಪರ ಶಕ್ತಿಗಳು ಕಾಂಗ್ರೆಸ್ ಮತ್ತು ಕೋಮುವಾದಿಗಳ ರಾಜಕೀಯಕ್ಕೆ ಪರ್ಯಾಯ ಹೊಂದದ ಹೊರತು ಭವಿಷ್ಯ ಕಷ್ಟ.



ಫೆಬ್ರುವರಿ 16 ರಂದು ದೇಶಾದ್ಯಂತ ಗ್ರಾಮೀಣ ಬಂದ್ ಮತ್ತು ಕೈಗಾರಿಕಾ ಮುಷ್ಕರ ಮತ್ತು

ಕಾರ್ಮಿಕ–ರೈತ ಸಖ್ಯತೆಯ ಮತ್ತೊಂದು ಐತಿಹಾಸಿಕ ಹೋರಾಟಕ್ಕೆ ವ್ಯಾಪಕ ಸಿದ್ದತೆ


ಫೆಬ್ರವರಿ 16 ರಂದು ದೇಶಾದ್ಯಂತ ಕೈಗಾರಿಕಾ ಮುಷ್ಕರ ಮತ್ತು ಗ್ರಾಮೀಣ ಬಂದ್ ಗೆ ಎಲ್ಲೆಡೆ ವ್ಯಾಪಕ ಸಿದ್ದತೆಗಳು ನಡೆಯುತ್ತಿವೆ. ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಮತ್ತು ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಸ್ವತಂತ್ರ ಸಂಘಟನೆಗಳ ಜಂಟಿ ವೇದಿಕೆ ನೀಡಿರುವ ಫೆಬ್ರವರಿ 16 ರ ಕೈಗಾರಿಕಾ ಮುಷ್ಕರ ಮತ್ತು ಗ್ರಾಮೀಣ ಬಂದ್ ಗೆ ಒಕ್ಕೂಟಗಳ ಜಂಟಿ ಕರೆಯ ಈ ಹೋರಾಟವನ್ನು ಬೆಂಬಲಿಸುವಂತೆ ಈ ಸಂಘಟನೆಗಳು ದೇಶದ ಜನರಿಗೆ ಮನವಿ ಮಾಡಿವೆ. ಎಲ್ಲಾ ವಿಭಾಗಗಳ ಜನರ ಬೆಂಬಲವನ್ನು ಗಳಿಸಲು ಕಾರ್ಮಿಕ ಸಂಘಟನೆಗಳು ಮತ್ತು ಕಿಸಾನ್ ಸಂಘಟನೆಗಳ ರಾಜ್ಯ ಮತ್ತು ಜಿಲ್ಲಾ ಮಟ್ಟದ ಸಮನ್ವಯ ಸಭೆಗಳು ನಡೆಯುತ್ತಿವೆ. ವಿದ್ಯಾರ್ಥಿಗಳು, ಯುವಕರು, ಮಹಿಳೆಯರು, ಸಾಂಸ್ಕೃತಿಕ ಕಾರ್ಯಕರ್ತರು, ಕಲಾವಿದರು, ಸಣ್ಣ ವ್ಯಾಪಾರಿಗಳು, ವೃತ್ತಿಪರರು, ವಕೀಲರು, ಪಿಂಚಣಿದಾರರ ಸಂಘಟನೆಗಳು ಈ ಸಭೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಕೇಂದ್ರ ಸರ್ಕಾರ ಹೊಸದಾಗಿ ತಂದಿರುವ ಹಿಟ್–ಅಂಡ್–ರನ್ ಕಾನೂನಿನ ವಿರುದ್ಧ ಟ್ರಕ್ ಚಾಲಕರು ಇತ್ತೀಚೆಗೆ ನಡೆಸಿದ ಪ್ರತಿಭಟನೆಗೆ ಈ ಎರಡೂ ಒಕ್ಕೂಟಗಳು ಬೆಂಬಲವನ್ನು ನೀಡಿವೆ.

"ನಾವು ಫೆಬ್ರವರಿ 16 ರಂದು ಬೆಳಿಗ್ಗೆಯಿಂದ ಸಂಜೆ 4 ರವರೆಗೆ 'ಚಕ್ಕಾ ಜಾಮ್' ನಡೆಸುತ್ತೇವೆ. ಹಳ್ಳಿಗಳ ರೈತರು ಭಾರತದ ಎಲ್ಲಾ ರಾಜ್ಯಗಳ ಪ್ರಮುಖ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಪ್ರತಿಭಟನೆಗಳನ್ನು ನಡೆಸುತ್ತಾರೆ. ಆ ದಿನ ಹಾಲು ಮತ್ತು ತರಕಾರಿ ವಿತರಣೆ ಮಾಡದಂತೆ ರೈತರಿಗೆ ಮನವಿ ಮಾಡಿದ್ದೇವೆ. ರಾಜ್ಯ ಸಾರಿಗೆ ಬಸ್ಸುಗಳು ಮತ್ತು ಟ್ರಕ್ಕುಗಳು ಸಹ ರಸ್ತೆಯಿಂದ ಹೊರಗುಳಿಯುತ್ತವೆ. ಇದು ಒಂದು ರೀತಿಯ 'ಭಾರತ್ ಬಂದ್' ಆಗಿರುತ್ತದೆ" ಎಂದು ಎಸ್‌ಕೆಎಂನ ರಾಷ್ಟ್ರೀಯ ಸಮನ್ವಯ ಸಮಿತಿಯ ಸದಸ್ಯ ರಮೀಂದರ್ ಸಿಂಗ್ ಪಟಿಯಾಲ ಹೇಳಿದ್ದಾರೆ.

ಕಾರ್ಪೊರೇಟ್ ಶೋಷಣೆಯನ್ನು ಕೊನೆಗಾಣಿಸಿ, ಪ್ರಜಾಪ್ರಭುತ್ವ, ಜಾತ್ಯತೀತ, ಒಕ್ಕೂಟ ವ್ಯವಸ್ಥೆ ಮತ್ತು ಸಮಾಜವಾದ ಇಂತಹ ಸಾಂವಿಧಾನಿಕ ತತ್ವಗಳನ್ನು ರಕ್ಷಿಸುವ ಪಣದೊಂದಿಗೆ ನಡೆಯುವ ಫೆಬ್ರವರಿ 16ರ ಈ ಹೋರಾಟದಲ್ಲಿ, ರೈತ ಸಂಘಟನೆಗಳು, ಕಾರ್ಮಿಕ ಸಂಘಟನೆಗಳು, ಸಾರಿಗೆ ಸಂಘಟನೆಗಳು, ಲಾರಿ ಮಾಲೀಕರ ಮತ್ತು ಚಾಲಕರ ಸಂಘಟನೆಗಳು, ಕೈಗಾರಿಕಾ ಕಾರ್ಮಿಕರು ಮತ್ತು ಸರ್ಕಾರಿ ನೌಕರರ ಸಂಘಗಳು ಸಹ ಭಾಗವಹಿಸಲಿವೆ.

ಕಾರ್ಪೊರೇಟ್ ಪರ, ರೈತ ವಿರೋಧಿ ಕೇಂದ್ರದ ಬಿಜೆಪಿ ಸರ್ಕಾರ, ರೈತರ ಜಮೀನುಗಳನ್ನು ಕಿತ್ತುಕೊಂಡು ರೈತರ ಆರ್ಥಿಕ ಸ್ಥಿತಿಯನ್ನು ಹದಗೆಡಿಸಲು ಉದ್ದೇಶಪೂರ್ವಕವಾಗಿ ನೀತಿಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ. ಬೆಳೆ ಉತ್ಪಾದನೆ ಮತ್ತು ಆಹಾರ ಪೂರೈಕೆ ಸರಪಳಿಯನ್ನು ನಿಯಂತ್ರಿಸಲು ಮತ್ತು ಲಾಭಕ್ಕಾಗಿ ಸಾಮಾನ್ಯ ಜನರನ್ನು ಮತ್ತಷ್ಟು ಶೋಷಣೆ ಮಾಡಲು ಕಾರ್ಪೊರೇಟ್‌ಗಳು ಏಕಸ್ವಾಮ್ಯದೊಂದಿಗೆ ಕೃಷಿಯನ್ನು ನುಸುಳಲು ಸಂಚು ಮಾಡುತ್ತಿವೆ ಎಂದು ಈ ಸಂಘಟನೆಗಳು ಆರೋಪಿಸಿವೆ. ಕೃಷಿ ಆಧಾರಿತ ಕೈಗಾರಿಕಾ ಅಭಿವೃದ್ಧಿಗೆ ಪರ್ಯಾಯ ಮಾರ್ಗ, ಕಾರ್ಪೊರೇಟ್ ಏಕಸ್ವಾಮ್ಯಕ್ಕೆ ತಡೆ, ಸರ್ಕಾರಿ ಹೂಡಿಕೆ, ಉತ್ಪಾದನಾ ಸಹಕಾರ ಸಂಘಗಳು ಮತ್ತು ರೈತರಿಗೆ ಲಾಭದಾಯಕ ಬೆಲೆಗಳು, ಗೌರವಾನ್ವಿತ ಜೀವನ ಮತ್ತು ಕಾರ್ಮಿಕರ ವೇತನವನ್ನು ಆಧರಿಸಿದ ಇತರ ಕೇಂದ್ರೀಕೃತ ಮಾದರಿಗಳು. ಎಲ್ಲ ವರ್ಗದ ಜನರಿಗೂ ಪಿಂಚಣಿ ಸೇರಿದಂತೆ ಭದ್ರತೆ ಸಿಗಬೇಕು ಎಂದು ಈ ಸಂಘಟನೆಗಳು ಆಗ್ರಹಿಸುತ್ತಿವೆ.

ರೈತರ ಪ್ರಮುಖ ಬೇಡಿಕೆಗಳು



* ಸ್ವಾಮಿನಾಥನ್ ಆಯೋಗದ ಸೂತ್ರದಂತೆ C2 ಜೊತೆಗೆ 50 ಪ್ರತಿಶತ ಕನಿಷ್ಠ ಬೆಂಬಲ ಬೆಲೆ,
* ಲಖೀಂಪುರ ಖೇರಿ ಹಿಂಸಾಚಾರದ ಅಪರಾಧಿಗಳಿಗೆ ಶಿಕ್ಷೆ,
* ಸಣ್ಣ ಮತ್ತು ಮಧ್ಯಮ ವರ್ಗದ ಕುಟುಂಬಗಳು ಸಾಲದಿಂದ ಮುಕ್ತರಾಗಲು ಸಮಗ್ರ ಸಾಲ ಮನ್ನಾ,
* ಸಾರ್ವಜನಿಕ ವಲಯದಲ್ಲಿ ಸಮಗ್ರ ಬೆಳೆ ವಿಮೆ ಅನುಷ್ಠಾನ,
* 58 ವರ್ಷಕ್ಕಿಂತ ಮೇಲ್ಪಟ್ಟ ರೈತರಿಗೆ ಪಿಂಚಣಿ,
* ವಿದ್ಯುತ್ ಬಿಲ್ ತಿದ್ದುಪಡಿ ಕಾಯಿದೆ ಹಿಂಪಡೆಯಬೇಕು ಮತ್ತು
* LARR ಕಾಯಿದೆ–2013 (ಭೂಸ್ವಾಧೀನ, ಪರಿಹಾರ ಮತ್ತು ಪುನರ್ವಸತಿ ಕಾಯಿದೆ–2013 ನ್ಯಾಯಯುತ ಪರಿಹಾರದ ಹಕ್ಕು, ಪಾರದರ್ಶಕತೆ–2013) ಜಾರಿಗೆ ತರಬೇಕು

ಎಂಬಿತ್ಯಾದಿ ಬೇಡಿಕೆಗಳನ್ನು ಸರ್ಕಾರದ ಮುಂದಿಡಲಾಗಿದೆ.

ಕಾರ್ಮಿಕರ ಬೇಡಿಕೆಗಳು

* ಕಾರ್ಮಿಕರಿಗೆ ತಿಂಗಳಿಗೆ ಕನಿಷ್ಠ ರೂ 26,000 ವೇತನ ನಿಗದಿ ಪಡಿಸಬೇಕು.
* ನಾಲ್ಕು ಕಾರ್ಮಿಕ ಸಂಹಿತೆಗಳನ್ನು ರದ್ದುಗೊಳಿಸಬೇಕು.
* ಖಾತರಿ ಉದ್ಯೋಗ ಮೂಲಭೂತ ಹಕ್ಕು.
* ರೈಲ್ವೆ, ರಕ್ಷಣೆ ಮತ್ತು ವಿದ್ಯುತ್ ಸೇರಿದಂತೆ ಸಾರ್ವಜನಿಕ ವಲಯದ ಉದ್ದಿಮೆಗಳ ಖಾಸಗೀಕರಣವನ್ನು ನಿಲ್ಲಿಸಬೇಕು.
* ಕಾರ್ಮಿಕರ ಗುತ್ತಿಗೆ ಪದ್ದತಿಯನ್ನು ರದ್ದು ಗೊಳಿಸಬೇಕು.
* ನಿಶ್ಚಿತ್–ಅವ್ಧಿ ೦ು್ು ಉದ್ಯೋಗವನ್ನು ರದ್ದು ಗೊಳಿಸಬೇಕು.
* ಪ್ರತಿ ವ್ಯಕ್ತಿಗೆ ವರ್ಷಕ್ಕೆ 200 ದಿನಗಳ ಕೆಲಸ ಮತ್ತು ರೂ 600 ದೈನಂದಿನ ವೇತನದೊಂದಿಗೆ MGNREGS ಅನ್ನು ಬಲಪಡಿಸಬೇಕು.
* ಹಳೆಯ ಪಿಂಚಣಿ ಯೋಜನೆಯನ್ನು ಮತ್ತೆ ಜಾರಿಗೆ ತರಬೇಕು.
* ಸಂಘಟಿತ ಮತ್ತು ಅಸಂಘಟಿತ ವಲಯಗಳಲ್ಲಿ ಪಿಂಚಣಿ ಮತ್ತು ಸಾಮಾಜಿಕ ಭದ್ರತೆಯನ್ನು ಮರುಸ್ಥಾಪಿಸಬೇಕು ಎಂಬಿತ್ಯಾದಿ ಬೇಡಿಕೆಗಳು ಈ ಪಟ್ಟಿಯಲ್ಲಿ ಸೇರಿವೆ.

ಫೆಬ್ರುವರಿ 8–ಒಕ್ಕೂಟ ತತ್ವವನ್ನು ರಕ್ಷಿಸಲು......... ಪುಟ 8 ರಿಂದ



ಕೇರಳ ಸರ್ಕಾರ ಮತ್ತು ಕೇರಳದ ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳು ಭರಿಸಿವೆ. "ಆದರೂ ಈ ಯೋಜನೆಯಲ್ಲಿ ಅವರ ಹೆಸರಿಡಬೇಕು ಎಂದು ಹಠ ಹಿಡಿದಿದ್ದಾರೆ. ಇಲ್ಲದಿದ್ದರೆ, ಅವರು ತಮ್ಮ ಈ ಅಲ್ಪ ಪಾಲನ್ನು ಸಹ ತಡೆಹಿಡಿಯುತ್ತಾರಂತೆ" ಎಂದು ಅವರು ತಿಳಿಸಿದರು.

"ಒಬ್ಬ ಬಡವನ ಮನೆಯ ಎದುರು ಅದು ಬೇರೆಯವರ ಉಡುಗೊರೆ ಎಂದು ಬರೆದು ಹಾಕುವ ದಯನೀಯ ದೃಶ್ಯವನ್ನು ಊಹಿಸಿ. ಅಂತಹ ಗುರುತು ಹಾಕುವುದು, ಸಂಬಂಧಪಟ್ಟ ಕುಟುಂಬದ ಸ್ವಾಭಿಮಾನದ ಅವಮಾನ ಮಾಡಿದಂತೆ. ಇದು ಸಂಭವಿಸಲು ಕೇರಳ ರಾಜ್ಯ ಯಾವುದೇ ರೀತಿಯಲ್ಲಿ ಅವಕಾಶ ನೀಡುವುದಿಲ್ಲ ಎಂದು ನಾವು ಸ್ಪಷ್ಟವಾಗಿ ಹೇಳಲು ಬಯಸುತ್ತೇವೆ"ಎಂದು ಕೇರಳ ಮುಖ್ಯಮಂತ್ರಿಗಳು ಸಾರಿ ಹೇಳಿದರು.

"ಜಿಎಸ್‌ಟಿಯನ್ನು ಪರಿಚಯಿಸಿದಾಗ, ಆದಾಯ ತಟಸ್ಥವಾಗಿರಲು, ಸರಾಸರಿ ಜಿಎಸ್‌ಟಿ ದರವು ಕನಿಷ್ಠ 17% ದಷ್ಟು ಇರಬೇಕು ಎಂದು ಹಣಕಾಸು ಸಚಿವಾಲಯ ಲೆಕ್ಕಹಾಕಿತ್ತು. ನಾವು ನಿರ್ದಿಷ್ಟ ಮಾನದಂಡವನ್ನು ಸಾಧಿಸುವವರೆಗೆ ಒಕ್ಕೂಟ ಸರ್ಕಾರವು ಜಿಎಸ್‌ಟಿ ಪರಿಹಾರವನ್ನು ಮುಂದುವರಿಸಲು ಬದ್ಧವಾಗಿದೆ. ಪ್ರಸ್ತುತ ಸರಾಸರಿ ದರ ಕೇವಲ 11.4%. ಜಿಎಸ್‌ಟಿಯನ್ನು ಪರಿಚಯಿಸಲು ರಾಜ್ಯಗಳು ಗಣನೀಯ ಹಣಕಾಸಿನ ಹಕ್ಕುಗಳನ್ನು ಬಿಟ್ಟುಕೊಡಬೇಕಾಯಿತು. ಈಗ, ನ್ಯಾಯವಾಗಿ ನಮಗೆ ದಕ್ಕಬೇಕಾದ್ದನ್ನು ನಿರಾಕರಿಸದಂತೆ ಖಾತ್ರಿಪಡಿಸಲು ನಾವು ಒಟ್ಟಾಗಿ ನಿಲ್ಲಬೇಕು" ಎಂದು ಪಿಣರಾಯಿ ವಿಜಯನ್ ಕರೆ ನೀಡಿದರು.

ರಾಜ್ಯಗಳ ವಿರುದ್ಧ ಬಿಜೆಪಿ ಸಮರ: ಕೇಜ್ರಿವಾಲ್

ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್, ದೇಶದ ಅರ್ಧದಷ್ಟು ಜನಸಂಖ್ಯೆಯನ್ನು ಪ್ರತಿನಿಧಿಸುವ 70 ಕೋಟಿ ಜನರನ್ನು ಪ್ರತಿನಿಧಿಸುವ ವಿರೋಧ ಪಕ್ಷಗಳ ವಿರುದ್ಧ ಬಿಜೆಪಿಯು ಯುದ್ಧವನ್ನು ನಡೆಸಿರುವಂತೆ ತೋರುತ್ತದೆ ಎಂದು ಹೇಳಿದರು.

ದೆಹಲಿ, ಬಂಗಾಳ ಮತ್ತು ಪಂಜಾಬ್‌ನ ಜನರನ್ನು ಈ ದೇಶದ ಪ್ರಜೆಗಳೆಂದು ಬಿಜೆಪಿ ಪರಿಗಣಿಸುವುದಿಲ್ಲವೇ? ನಾವು ಸಾಂವಿಧಾನಿಕವಾಗಿ ಚುನಾಯಿತರಾಗಿದ್ದೇವೆ ಮತ್ತು ಸಂವಿಧಾನ ರಾಜ್ಯ ಸರ್ಕಾರಗಳ ಅಧಿಕಾರವನ್ನು ಸ್ಪಷ್ಟವಾಗಿ ಗುರುತಿಸುತ್ತದೆ. ಇಂದು, ನಾವು ಮೂರು ರಂಗಗಳಲ್ಲಿ ಕಿರುಕುಳವನ್ನು ಎದುರಿಸುತ್ತಿದ್ದೇವೆ; ನಮ್ಮ ಹಣವನ್ನು ನಿರಾಕರಿಸಲಾಗಿದೆ, ನಮ್ಮ ತೋಳು ತಿರುಚಲಾಗುತ್ತಿದೆ ಮತ್ತು ಅಧಿಕಾರಿಗಳು ಮತ್ತು ಕೇಂದ್ರೀಯ ಏಜೆನ್ಸಿಗಳು ಕೇಂದ್ರ ಸರ್ಕಾರದ ಮರ್ಜಿಯಂತೆ ಕುಣಿಯುತ್ತ ನಾಯಕರನ್ನು ಬಂಧಿಸುತ್ತಿವೆ ಎಂದು ಮುಂದುವರೆದು ಅವರು ಹೇಳಿದರು.

ಪಂಜಾಬ್‌ನ ಮುಖ್ಯಮಂತ್ರಿ ಭಗವಂತ್ ಮಾನ್, ಚಂಡೀಗಢದ ಮೇಯರ್ ಚುನಾವಣೆಯ ಉದಾಹರಣೆಯು ಬಿಜೆಪಿ ಅಧಿಕಾರವನ್ನು ಪಡೆಯಲು ಎಷ್ಟು ಕೆಳಮಟ್ಟಕ್ಕೆ ಇಳಿಯಬಹುದು ಎಂಬುದನ್ನು ಸ್ಪಷ್ಟವಾಗಿ ಪ್ರದರ್ಶಿಸಿದೆ ಎಂದು ಹೇಳಿದರು.

"ನಾವು ಪಡೆಯಬೇಕಾಗಿದ್ದ ಗ್ರಾಮೀಣಾಭಿವೃದ್ಧಿ ನಿಧಿಯ ರೂ 8,000 ಕೋಟಿ ಇನ್ನೂ ಸಿಕ್ಕಿಲ್ಲ, ಪ್ರತಿಯೊಂದರ ಮೇಲೂ ಪ್ರಧಾನಿ ನರೇಂದ್ರ ಮೋದಿಯವರ ಫೋಟೊ ಇರಬೇಕು ಎಂದು ಒತ್ತಾಯಿಸುವುದೇಕೆ ಎಂದು ನನಗೆ ಅರ್ಥವಾಗುತ್ತಿಲ್ಲ, ಇದನ್ನು ನಿರಾಕರಿಸಿದರೆ ನಮ್ಮ ಹಣ ಸ್ಥಗಿತಗೊಳ್ಳುತ್ತದೆ" ಎಂದರು.

ಚುನಾವಣಾ ಬಾಂಡ್‌ಗಳ ಮೂಲಕ ಬಿಜೆಪಿ ಅಧಿಕಾರವನ್ನು ಪಡೆಯುತ್ತಿದೆ ಮತ್ತು ಅದನ್ನು ಲಂಚದ ಮೂಲಕ ರಾಜ್ಯ ಸರ್ಕಾರಗಳನ್ನು ಉರುಳಿಸಲು ಬಳಸಲಾಗುತ್ತಿದೆ ಎಂದು ಮಾಜಿ ಶಿಕ್ಷಣ ಸಚಿವ ಮತ್ತು ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಕಪಿಲ್ ಸಿಬಲ್ ಹೇಳಿದರು.

ಪ್ರತಿಭಟನಾ ಸಭೆಗೂ ಮುನ್ನ ಕೇರಳ ಮುಖ್ಯಮಂತ್ರಿಗಳು, ಎಲ್‌ಡಿಎಫ್ ಸಂಸದರು, ಶಾಸಕರು ಮತ್ತು ಎಡರಂಗದ ಹಿರಿಯ ನಾಯಕರು ನವದೆಹಲಿಯ ಹೃದಯಭಾಗದಲ್ಲಿರುವ ಕೇರಳ ಹೌಸ್‌ನಿಂದ ಜಂತರ್ ಮಂತರ್‌ಗೆ ಮೆರವಣಿಗೆ ನಡೆಸಿದರು. ದೆಹಲಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಕರ್ನಾಟಕ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಎಸ್.ವೈ. ಗುರುಶಾಂತ್ ಭಾಗವಹಿಸಿದ್ದರು.

ದಿಲ್ಲಿಯ ಪ್ರತಿಭಟನೆಯನ್ನು ಬೆಂಬಲಿಸಿ ದೇಶದ ಇತರ ಹಲವೆಡೆಗಳಲ್ಲೂ ಪ್ರತಿಭಟನೆಗಳು ನಡೆದವು.

ಕರ್ನಾಟಕದಲ್ಲೂ ಪ್ರತಿಭಟನೆ:

ಕೇರಳ ಸರ್ಕಾರದ ಹೋರಾಟವನ್ನು ಬೆಂಬಲಿಸಿ ಕರ್ನಾಟಕದಲ್ಲಿ ಬೆಂಗಳೂರು, ಹಾಸನ, ಕೊಪ್ಪಳ, ವಿಜಯನಗರ, ಬಳ್ಳಾರಿ, ಕಲಬುರ್ಗಿ, ಮಂಡ್ಯ, ತುಮಕೂರು, ಮೈಸೂರು ಸೇರಿದಂತೆ ಬಹುತೇಕ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆದಿದೆ.

ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಕೆ.ಎನ್ ಉಮೇಶ್ ಬೆಂಗಳೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದರು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್ ವರಲಕ್ಷ್ಮಿ, ಬೆಂಗಳೂರು ಉತ್ತರ ಕಾರ್ಯದರ್ಶಿ ಎನ್ ಪ್ರತಾಪ ಸಿಂಹ, ದಕ್ಷಿಣ ಕಾರ್ಯದರ್ಶಿ ಬಿ.ಎನ್. ಮಂಜುನಾಥ್ ಸೇರಿದಂತೆ ಅನೇಕರು ಇದರಲ್ಲಿ ಭಾಗವಹಿಸಿದರು. ಕಲಬುರ್ಗಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ರಾಜ್ಯ ಕಾರ್ಯದರ್ಶಿ ಯು. ಬಸವರಾಜ, ಜಿಲ್ಲಾ ಕಾರ್ಯದರ್ಶಿ ಕೆ. ನೀಲಾ ಸೇರಿದಂತೆ ಅನೇಕರಿದ್ದರು. ತುಮಕೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಡಾ. ಕೆ.ಪ್ರಕಾಶ್, ಜಿಲ್ಲಾ ಕಾರ್ಯದರ್ಶಿ ಸುಬ್ಬಣ್ಣ ಸೇರಿದಂತೆ ಅನೇಕ ಮುಖಂಡರು ಹಾಜರಿದ್ದರು.

ಕೊಪ್ಪಳದಲ್ಲಿ ನಡೆದ ಪ್ರತಿಭಟನೆಯಲ್ಲಿ ರಾಜ್ಯ ಸಮಿತಿ ಸದಸ್ಯ ಚಂದ್ರಪ್ಪ ಹೊಸ್ಕೇರಾ, ಜಿಲ್ಲಾ ಕಾರ್ಯದರ್ಶಿ ನಿರುಪಾದಿ ಬೆಣಕಲ್, ಮಂಡ್ಯದಲ್ಲಿ ಜಿಲ್ಲಾ ಕಾರ್ಯದರ್ಶಿ ಪುಟ್ಟಮಾದು, ಸಿ. ಕುಮಾರ್, ಹನುಮೇಶ್, ಮೈಸೂರಿನಲ್ಲಿ ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಹಾಸನದಲ್ಲಿ ಜಿಲ್ಲಾ ಕಾರ್ಯದರ್ಶಿ ಧರ್ಮೇಶ್, ಹಗರಿ ಬೊಮ್ಮನಹಳ್ಳಿಯಲ್ಲಿ ರಾಜ್ಯಸಮಿತಿ ಸದಸ್ಯೆ ಬಿ. ಮಾಳಮ್ಮ, ಬಳ್ಳಾರಿಯಲ್ಲಿ ಜಿಲ್ಲಾ ಕಾರ್ಯದರ್ಶಿ ಸತ್ಯಬಾಬು ಸೇರಿದಂತೆ ಜಿಲ್ಲಾ ಮತ್ತು ತಾಲ್ಲೂಕ ಮುಖಂಡರು ಹಾಜರಿದ್ದರು.



ನರೇಂದ್ರ ಮೋದಿ ಆಡಳಿತದ ಅವಧಿಯಲ್ಲಿ ಭಾರತದಲ್ಲಿ ನಡೆದ ಮಹಾ ದುರಂತವೆಂದರೆ ಅದು ಎಂದೆಂದಿಗೂ ಮರೆಯಲಾಗದ ಕೊವಿಡ್–19 ಹೆಸರಿನ ಸಾಂಕ್ರಮಿಕ ರೋಗ. ಭಾರತ ಸರ್ಕಾರದ ಅಧಿಕೃತ ಅಂಕಿಅಂಶಗಳ ಪ್ರಕಾರ ಕೊರೋನಾ ಕ್ಕೆ ಪ್ರಾಣ ಕಳೆದುಕೊಂಡವರ ಸಂಖ್ಯೆ ಏಪ್ರಿಲ್ 2022 ರ ವೇಳೆಗೆ 5,24,000. ಸೋಂಕಿತರಾಗಿದ್ದವರ ಸಂಖ್ಯೆ 4.30 ಕೋಟಿ. ಜಗತ್ತಿನ ಈ ಪಟ್ಟಿಯಲ್ಲಿ ಅಮೆರಿಕ ಮತ್ತು ಬ್ರೆಜಿಲ್ ನಂತರದ ಮೂರನೇ ಸ್ಥಾನದಲ್ಲಿ ಭಾರತ ಇತ್ತು. ಆದರೆ, ಕೊವಿಡ್–19 ನಿಂದ ಭಾರತದಲ್ಲಿನ ಸಾವಿನ ಸಂಖ್ಯೆ ಸರ್ಕಾರದ ಅಧಿಕೃತ ಲೆಕ್ಕಕ್ಕಿಂತ ಸುಮಾರು 10 ಪಟ್ಟು ಹೆಚ್ಚಾಗಿದೆ ಮತ್ತು ವಿಶ್ವದಲ್ಲೇ ಅತಿ ಹೆಚ್ಚು ಎಂದು ವಿಶ್ವ ಆರೋಗ್ಯ ಸಂಸ್ಥೆ(WTO)ಯ ವರದಿ ಹೇಳುತ್ತದೆ. ಇದರ ಪ್ರಕಾರ ಭಾರತದಲ್ಲಿ ಕೊರೋನಾಗೆ ಬಲಿಯಾದವರ ಸಂಖ್ಯೆ 50 ಲಕ್ಷಕ್ಕಿಂತ ಹೆಚ್ಚು. ಎಂದಿನಂತೆ ಭಾರತ ಸರ್ಕಾರ WTO ನ ಈ ವರದಿಯನ್ನು ತಿರಸ್ಕರಿಸುತ್ತದೆ.

ಮೋದಿ–9 ವರ್ಷಗಳು–ಭಾಗ–38

ಗುಜರಾತ್ ರಾಜ್ಯದ ಆರೋಗ್ಯ ಬುಲೆಟಿನ್ ಪ್ರಕಾರ, 2021ರ ಡಿಸೆಂಬರ್ ತಿಂಗಳ ಒಂದು ನಿರ್ದಿಷ್ಟ ದಿನದಂದು, ಅದುವರೆಗಿನ ಸಾವಿನ ಸಂಖ್ಯೆ 10,099 ಆಗಿತ್ತು. ಆದರೆ, ಮೃತರ ಕುಟುಂಬಗಳಿಂದ ಪರಿಹಾರ ಕೋರಿ 22,557 ಅರ್ಜಿಗಳನ್ನು ಸ್ವೀಕರಿಸಲಾಗಿದೆ ಮತ್ತು 16,175 ಅರ್ಜಿಗಳನ್ನು ಅನುಮೋದಿಸಿ ಪರಿಹಾರ ನೀಡಲಾಗಿದೆ ಎಂದು ಗುಜರಾತ್ ಸರ್ಕಾರ ಅಫಿಡವಿಟ್ ಮೂಲಕ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ. ಸರ್ಕಾರ ಇಷ್ಟೆಲ್ಲಾ ಒಪ್ಪಿಕೊಂಡರೂ ಕೂಡಾ, 2024ರ ಫೆಬ್ರವರಿಯ ಸರ್ಕಾರದ ಅಂಕಿಅಂಶಗಳ ಪ್ರಕಾರ ಗುಜರಾತಿನಲ್ಲಿ ಕೊರೊನಾ ಸಾವಿನ ಸಂಖ್ಯೆ 11,084 ಮಾತ್ರ! ಈ ವಿಷಯದ ನೇರ ಜ್ಞಾನ ಹೊಂದಿರುವ ಗುಜರಾತ್ ಅಧಿಕಾರಿಯೊಬ್ಬರು, ಅರ್ಜಿಗಳು ಈಗ 40,000 ಕ್ಕಿಂತ ಹೆಚ್ಚಿವೆ ಮತ್ತು ಸುಮಾರು ಅರ್ಧದಷ್ಟು ಅರ್ಜಿಗಳನ್ನು ಅನುಮೋದಿಸಲಾಗಿದೆ ಎಂದಿದ್ದರು.

ಭಾರತದಲ್ಲಿ ಕೊರೋನಾಕ್ಕೆ ಪ್ರಾಣ ಕಳೆದುಕೊಂಡವರ ಸಂಖ್ಯೆ 5 ಲಕ್ಷವೋ? 50 ಲಕ್ಷವೋ?

ಸಿ. ಸಿದ್ದಯ್ಯ

ನರೇಂದ್ರ ಮೋದಿ ಆಡಳಿತದ ಅವಧಿಯಲ್ಲಿ ಭಾರತದಲ್ಲಿ ನಡೆದ ಮಹಾ ದುರಂತವೆಂದರೆ ಅದು ಎಂದೆಂದಿಗೂ ಮರೆಯಲಾಗದ ಕೊವಿಡ್–19 ಹೆಸರಿನ ಸಾಂಕ್ರಮಿಕ ರೋಗ. ಇದು ಭಾರತದ ಲಕ್ಷಾಂತರ ಜನರನ್ನು ಬಲಿತೆಗೆದುಕೊಂಡಿತು. ಬದುಕುಳಿದ ಕೋಟ್ಯಾಂತರ ಜನರ ಬದುಕನ್ನು ಕಸಿದುಕೊಂಡಿತು. ಲಕ್ಷಾಂತರ ಸಣ್ಣ ಕೈಗಾರಿಕೆಗಳು, ಮುಚ್ಚಿಹೋದವು. ಕೋಟ್ಯಾಂತರ ಜನರ ಉದ್ಯೋಗ ಕಸಿದುಕೊಂಡಿತು. ಹೋಟೆಲ್ ಗಳು, ಕಿರಾಣಿ ಅಂಗಡಿಗಳು ಮುಚ್ಚಿದ್ದರಿಂದ ಅವುಗಳ ಮಾಲೀಕರು ಆ ಸಮಯದಲ್ಲಿ ಆದ ನಷ್ಟವನ್ನು ಇನ್ನೂ ತುಂಬಿಕೊಳ್ಳಲಾಗಿಲ್ಲ.

ಮುಕ್ತ ಆರ್ಥಿಕ ನೀತಿಗಳ ಜಾರಿಗೆ ಜನರ ಪ್ರತಿರೋಧ ಇಲ್ಲದೆ, ಯಾರ ಅಡೆತಡೆಯೂ ಇಲ್ಲದೆ ಜಾರಿಗೆ ತರಲು ಇದೇ ಸುಸಮಯ ಎಂಬಂತೆ, ಮೋದಿ ಸರ್ಕಾರ ಹಲವು ಜನಪರ ಯೋಜನೆಗಳನ್ನು ರದ್ದುಮಾಡಿದರು ಅಥವಾ ಅವುಗಳಿಗೆ ಅನುದಾನ ಕಡಿತ ಮಾಡಿದರು. ಅಡುಗೆ ಅನಿಲದ ಮೇಲೆ ಸರ್ಕಾರ ಕೊಡುತ್ತಿದ್ದ ಸಬ್ಸಿಡಿ ರದ್ದುಗೊಳಿಸಿದರು. ಕಾರ್ಪೊರೇಟ್ ಕಂಪನಿಗಳಿಗೆ ಅನುಕೂಲ ಮಾಡಿಕೊಡುವ ಮೂರು ಕೃಷಿ ಕಾಯ್ದೆ ಜಾರಿಗೆ ತರಲು ಪ್ರಯತ್ನಿಸಿ, ರೈತರ ಛಲಬಿಡದ ಹೋರಾಟಕ್ಕೆ ಮಣಿದು ಆ ಕಾಯ್ದೆಗಳನ್ನು ಹಿಂಪಡೆದರು. ಕಾರ್ಮಿಕರನ್ನು ಶೋಷಿಸಲು ಉದ್ಯಮಿಗಳಿಗೆ ಮುಕ್ತ ಅವಕಾಶ ಕೊಡುವ ಉದ್ದೇಶದಿಂದ ಕಾರ್ಮಿಕ ಕಾಯ್ದೆಗಳಿಗೆ ತಿದ್ದುಪಡಿ ಮಾಡಿದರು. ಭಾರತವನ್ನು ಸ್ವಾವಲಂಬಿಯನ್ನಾಗಿ ಮಾಡಲು ವಿಶೇಷ ಆರ್ಥಿಕ ಪ್ಯಾಕೇಜ್ ಎಂಬ ಹೆಸರಿನಲ್ಲಿ, ಮೇ 2020ರಲ್ಲಿ 20 ಲಕ್ಷ ಕೋಟಿ ರೂ. ಗಳ ಮೊತ್ತದ ಕೋವಿಡ್ ಪರಿಹಾರ ಪ್ಯಾಕೇಜ್ ಘೋಷಿಸಿ, ಇದರ ಬಹುತೇಕ ಹಣವನ್ನು ಉದ್ಯಮಿಗಳಿಗೆ ಕೊಟ್ಟರು. ಈ ಪ್ಯಾಕೇಜ್‌ನಲ್ಲಿ ಬಡವರಿಗೆ 1.7 ಲಕ್ಷ ಕೋಟಿ ರೂಪಾಯಿಗಳ ಉಚಿತ ಆಹಾರ ಧಾನ್ಯಗಳು ಮತ್ತು ಬಡ ಮಹಿಳೆಯರು ಮತ್ತು ವೃದ್ಧರಿಗೆ ನಗದು ಪ್ಯಾಕೇಜ್ ಜೊತೆಗೆ ರಿಸರ್ವ್ ಬ್ಯಾಂಕ್‌ನ ದ್ರವ್ಯತೆ ಕ್ರಮಗಳು ಮತ್ತು ಬಡ್ಡಿದರ ಕಡಿತಗಳನ್ನು ಒಳಗೊಂಡಿದೆ ಎನ್ನುತ್ತಾರಾದರೂ, ಉಳಿದ 18 ಲಕ್ಷ ಕೋಟಿ ಉದ್ಯಮಗಳ ಪಾಲಾಗಿದೆ.

ಸಾವಿನ ಸಂಖ್ಯೆ 5 ಲಕ್ಷ ಅಲ್ಲ, 50 ಲಕ್ಷ?

ಭಾರತ ಸರ್ಕಾರದ ಅಧಿಕೃತ ಅಂಕಿಅಂಶಗಳ ಪ್ರಕಾರ ಕೊರೋನಾ ಕ್ಕೆ ಪ್ರಾಣ ಕಳೆದುಕೊಂಡವರ ಸಂಖ್ಯೆ 5,33,454 (ಐದು ಲಕ್ಷದ, ಮುವತ್ಮೂರು ಸಾವಿರದ ನಾಲ್ಕುನೂರ ಐವತ್ತನಾಲ್ಕು). ಇದು ಭಾರತ ಸರ್ಕಾರ ನೀಡಿದ ಮಾಹಿತಿಯನ್ನು ಆದರಿಸಿ ವರ್ಲ್ಡೋರ್ ಮೀಟರ್ (worldometers)ನ ಪೆಬ್ರವರಿ 6, 2024 ರ ಅಂಕಿಅಂಶ. ಇದೇ ಮಾಹಿತಿ ಪ್ರಕಾರ ಭಾರತದಲ್ಲಿ ಕೊರೋನಾ ಸೋಂಕಿತರಾಗಿದ್ದವರ ಒಟ್ಟು ಸಂಖ್ಯೆ 4,50,26,261 (4 ಕೋಟಿ, 50 ಲಕ್ಷದ, 26 ಸಾವಿರದ 261).

2021 ರ ಅಂತ್ಯದ ವೇಳೆಗೆ ಸಾವುಗಳ ಸಂಖ್ಯೆ 4,81,000 ಎಂದು ಭಾರತ ಸರ್ಕಾರ ಹೇಳುತ್ತದೆ. ಆದರೆ, ಕೊವಿಡ್–19 ನಿಂದ ಭಾರತದಲ್ಲಿನ ಸಾವಿನ ಸಂಖ್ಯೆ ಸರ್ಕಾರದ ಅಧಿಕೃತ ಲೆಕ್ಕಕ್ಕಿಂತ ಸುಮಾರು 10 ಪಟ್ಟು ಹೆಚ್ಚಾಗಿದೆ ಮತ್ತು ವಿಶ್ವದಲ್ಲೇ ಅತಿ ಹೆಚ್ಚು ಎಂದು 2022 ರ ಏಪ್ರಿಲ್ ನಲ್ಲಿ ಬಿಡುಗಡೆ ಮಾಡಿರುವ ವಿಶ್ವ ಆರೋಗ್ಯ ಸಂಸ್ಥೆಯ ವರದಿ ಹೇಳುತ್ತದೆ. ಫಾಲೂಔ ಅಧ್ಯಯನವು 2021 ರ ಅಂತ್ಯದ ವೇಳೆಗೆ ಭಾರತದಲ್ಲಿನ ಕೊವಿಡ್–19 ಸಾವಿನ ಸಂಖ್ಯೆಯನ್ನು 40.70 ಲಕ್ಷ ಎಂದು ಹೇಳುತ್ತದೆ. ಜಾಗತಿಕವಾಗಿ ಸಂಭವಿಸಿದ 1.5 ಕೋಟಿ ಸಾವುಗಳಲ್ಲಿ ಸುಮಾರು ಮೂರನೇ ಒಂದು ಭಾಗದಷ್ಟು ಸಾವುಗಳು ಭಾರತದಲ್ಲಿ ಸಂಭವಿಸಿದೆ ಎಂದು WHO ಹೇಳಿದೆ.

ಜನರಿಗೆ ಬದುಕಲು ಅವಶ್ಯಕವಾದ ಕುಡಿಯುವ ನೀರು, ಎಳೆಯ ಕಂದಮ್ಮಗಳಿಗೆ ಹಾಲು, ಹಣ್ಣು, ಆಹಾರ ಪದಾರ್ಥಗಳು, ವಿವಿಧ ರೀತಿಯ ಖಾಯಿಲೆ ಹೊಂದಿದ್ದವರಿಗೆ ಅತ್ಯಗತ್ಯ ಔಷಧಿಗಳು, ತುರ್ತು ಸಮಯದಲ್ಲಿ ರೋಗಿಗಳಿಗೆ ಚಿಕಿತ್ಸೆ ದೊರಕುವಂತಹ ವ್ಯವಸ್ಥೆ ಇವೆಲ್ಲವನ್ನೂ ಮಾಡದ ಸರ್ಕಾರದ ವೈಫಲ್ಯಗಳೂ ಈ ಹೆಚ್ಚಿನ ಸಾವುಗಳಿಗೆ ಕಾರಣವಾಗಿವೆ. ರೋಗಿಗಳಿಗೆ ಆಸ್ಪತ್ರೆಗಳಲ್ಲಿ ಹಾಸಿಗೆ ಇಲ್ಲದ ಕಾರಣದಿಂದ ಸಾವನ್ನಪ್ಪಿದ ಘಟನೆಗಳೂ ನಡೆದಿವೆ. ಇಂತಹ ಸಂಕಷ್ಟದ ಸಮಯವನ್ನೇ ದಂದೆಕೋರರು ಹಣ ಮಾಡಿಕೊಳ್ಳಲು ದುರುಪಯೋಗ ಪಡಿಸಿಕೊಂಡರು. ಬೆಂಗಳೂರಿನಲ್ಲಿ ಬಿಜೆಪಿಯ ಒಬ್ಬ ಸಂಸದರು ಮತ್ತು ಒಬ್ಬ ಶಾಸಕರುಗಳ ಕಡೆಯವರಿಂದ 'ಬೆಡ್ ದಂದೆ' ನಡೆದ ವರದಿಗಳೂ ಸಾಕಷ್ಟು ಟೀಕೆಗೆ ಗುರಿಯಾಗಿತ್ತು.



ಇದರ ಪ್ರಕಾರ ಭಾರತದಲ್ಲಿ ಕೊರೋನಾಗೆ ಬಲಿಯಾದವರ ಸಂಖ್ಯೆ 50 ಲಕ್ಷಕ್ಕಿಂತ ಹೆಚ್ಚು. ಎಂದಿನಂತೆ ಭಾರತ ಸರ್ಕಾರ ವಿಶ್ವ ಆರೋಗ್ಯ ಸಂಸ್ಥೆ (WTO) ನ ಈ ವರದಿಯನ್ನು ತಿರಸ್ಕರಿಸುತ್ತದೆ. ಅದು ಬಳಸಿದ ವಿಧಾನವನ್ನು ಭಾರತ ಸರ್ಕಾರವು ಟೀಕಿಸುತ್ತದೆ. "ಸಂಖ್ಯಾಶಾಸ್ತ್ರೀಯವಾಗಿ ಅಸ್ಪಷ್ಟ ಮತ್ತು ವೈಜ್ಞಾನಿಕವಾಗಿ ಪ್ರಶ್ನಾರ್ಹ" ಎಂದು ಕರೆಯುವ ಮೂಲಕ WHO ವರದಿಯನ್ನು ತಿರಸ್ಕರಿಸಿದೆ.

ಆದಾಗ್ಯೂ, ಅದರ ಅಧ್ಯಯನವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು ಎಂದು ತಜ್ಞರು ಹೇಳುತ್ತಾರೆ.

ಆರರಿಂದ ಏಳು ಪಟ್ಟು

2022 ರಲ್ಲಿ ಬಿಡುಗಡೆಯಾದ ವೈದ್ಯಕೀಯ ಜರ್ನಲ್ ಲ್ಯಾನ್ಸೆಟ್ ಸೇರಿದಂತೆ ಇತರ ಅಧ್ಯಯನಗಳು, ಭಾರತದ ಸಾವುನೋವುಗಳನ್ನು ಸರ್ಕಾರದಿಂದ ಕಡಿಮೆ ಮಾಡಲಾಗಿದೆ ಎಂದು ಹೇಳಿದೆ. ಸಾವಿನ ಸಂಖ್ಯೆ ಅಧಿಕೃತ ಸಂಖ್ಯೆಗಿಂತ ಆರರಿಂದ ಏಳು ಪಟ್ಟು ಹೆಚ್ಚು ಎಂದು ಅವರು ಅಂದಾಜಿಸಿದ್ದಾರೆ.

ಅಧಿಕೃತ ಸಂಖ್ಯೆಗಳಿಗೆ ಹೋಲಿಸಿದರೆ ಭಾರತ ಸರ್ಕಾರವು ಬಹಿರಂಗಗೊಳಿಸಿದ ಅಂದಿನ ಮಾಹಿತಿಯು ಭಾರತದಲ್ಲಿ ಸರಾಸರಿ ಸಾವುಗಳಿಗಿಂದ ಹೆಚ್ಚಿನ ಸಾವಿನ ಸಂಖ್ಯೆಯನ್ನು ಸೂಚಿಸುತ್ತದೆ. ಸರ್ಕಾರವು 2020 ರಲ್ಲಿ 81 ಲಕ್ಷ ಸಾವುಗಳನ್ನು ತೋರಿಸುವ ಡೇಟಾವನ್ನು ಬಿಡುಗಡೆ ಮಾಡಿದೆ. ಅದು ಅದರ ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ. 6 ಹೆಚ್ಚಾಗಿದೆ ಅಥವಾ 5 ಲಕ್ಷ ಹೆಚ್ಚು ಸಾವುಗಳು ಸಂಭವಿಸಿವೆ. ಆದರೆ, ಸರ್ಕಾರ 2020 ರಲ್ಲಿ, COVID–19 ನಿಂದಾಗಿ 1,49,000 ಸಾವುಗಳನ್ನು ಲೆಕ್ಕಹಾಕಿದೆ. ಹಿಂದಿನ ವರ್ಷಕ್ಕಿಂತ ಹೆಚ್ಚಿನ 4.5 ಲಕ್ಷ ಜನರ ಸಾವುಗಳು ಹೇಗಾಯಿತು ಎಂಬ ಪ್ರಶ್ನೆಗೆ ಸರ್ಕಾರದ ಬಳಿ ಸಮರ್ಥನೀಯ ಉತ್ತರವಿಲ್ಲ ಎನ್ನುತ್ತಾರೆ ಅವರು.

ಕೊರೊನಾ ಸೋಂಕಿನಿಂದ ಮಾತ್ರವಲ್ಲ ಈ 48 ಲಕ್ಷಕ್ಕೂ ಹೆಚ್ಚಿನ ಸಾವು ಕೊರೊನಾ ಸೋಂಕಿನಿಂದಲ್ಲದೆ, ಜನರಿಗೆ ಬದುಕಲು ಅವಶ್ಯಕವಾದ ಕುಡಿಯುವ ನೀರು, ಎಳೆಯ ಕಂದಮ್ಮಗಳಿಗೆ ಹಾಲು, ಹಣ್ಣು, ಆಹಾರ ಪದಾರ್ಥಗಳು, ವಿವಿಧ ಬಗೆಯ ಖಾಯಿಲೆ ಹೊಂದಿದ್ದವರಿಗೆ ಅತ್ಯಗತ್ಯ ಔಷಧಿಗಳು, ತುರ್ತು ಸಮಯದಲ್ಲಿ ರೋಗಿಗಳಿಗೆ ಚಿಕಿತ್ಸೆ ದೊರಕುವಂತಹ ವ್ಯವಸ್ಥೆ ಇವೆಲ್ಲವನ್ನೂ ಮಾಡದ ಸರ್ಕಾರದ ವೈಫಲ್ಯಗಳೂ ಈ ಹೆಚ್ಚಿನ ಸಾವುಗಳಿಗೆ ಕಾರಣವಾಗಿವೆ. ಯಾವುದೇ ಪೂರ್ವಸಿದ್ದತೆಗಳಿಲ್ಲದೆ ಪ್ರಧಾನಿ ಮೋದಿಯವರಿಂದ ಅವೈಜ್ಞಾನಿಕ ಲಾಕ್ ಡೌನ್ ನ ದಿಡೀರ್ ಘೋಷಣೆಯೂ ಇಂತಹ ಅನಾವುತಗಳಿಗೆ ಬಹಳಷ್ಟು ಕಾಣಿಕೆ ನೀಡಿದೆ.

ಆಸ್ಪತ್ರೆಗಳಲ್ಲಿ ಆಮ್ಲಜನಕದ ಕೊರತೆಯಿಂದಾಗಿಯೇ ಹಲವು ಸೋಂಕಿತರು ಸಾವಿಗೀಡಾಗಿದ್ದಾರೆ. ತುರ್ತು ಚಿಕಿತ್ಸೆಗೆ ದಾಖಲಾದ ಇತರೆ ರೋಗಿಗಳು ಸಾವನ್ನಪ್ಪಿರುವ ಘಟನೆಗಳು ಸಾಕಷ್ಟು ನಡೆದಿವೆ. ರೋಗಿಗಳಿಗೆ ಆಸ್ಪತ್ರೆಗಳಲ್ಲಿ ಹಾಸಿಗೆ ಇಲ್ಲದ ಕಾರಣದಿಂದ ಸಾವನ್ನಪ್ಪಿದ ಘಟನೆಗಳೂ ನಡೆದಿವೆ. ಇಂತಹ ಸಂಕಷ್ಟದ ಸಮಯವನ್ನೇ ದಂದೆಕೋರರು ಹಣ ಮಾಡಿಕೊಳ್ಳಲು ದುರುಪಯೋಗ ಪಡಿಸಿಕೊಂಡರು. ಬೆಂಗಳೂರಿನಲ್ಲಿ ಬಿಜೆಪಿಯ ಒಬ್ಬ ಸಂಸದರು ಮತ್ತು ಒಬ್ಬ ಶಾಸಕರುಗಳ ಕಡೆಯವರಿಂದ 'ಬೆಡ್ ದಂದೆ' ನಡೆದ ವರದಿಗಳೂ ಸಾಕಷ್ಟು ಟೀಕೆಗೆ ಗುರಿಯಾಗಿತ್ತು. ಆಸ್ಪತ್ರೆಗಳಲ್ಲಿ ಆಮ್ಲಜನಕದ ಕೊರತೆ ಇತ್ತು ಎಂಬುದನ್ನು ಮೋದಿ ಸರ್ಕಾರ ಖಡಾಖಂಡಿತವಾಗಿ ನಿರಾಕರಿಸುತ್ತದೆಯಾದರೂ, ನಮ್ಮದೇ ರಾಜ್ಯದ ಚಾಮರಾಜನಗರದ ಆಸ್ಪತ್ರೆಯಲ್ಲಿ ಆಮ್ಲಜನಕ ಇಲ್ಲದ ಕಾರಣದಿಂದ ಹಲವರು ಸಾವನ್ನಪ್ಪಿದ ಘಟನೆ ನಮ್ಮ ಕಣ್ಣಮುಂದೆಯೇ ಇದೆ.

ತಿರಸ್ಕರಿಸಲು ಸರ್ಕಾರ ಸಮರ್ಥನೆ ಒದಗಿಸಬೇಕು

"WHO ನ ಅಂದಾಜು ಕೊವಿಡ್–19 ನಿಂದ ನೇರವಾಗಿ ಅಥವಾ ಆರೋಗ್ಯ

ಪುಟ 15 ಕ್ಕೆ

‘ಕೇರಳ ಸ್ಟೋರಿ’ ನಂತರ ಈಗ ‘ಬಸ್ತರ್ ಸ್ಟೋರಿ’ ಅಪಪ್ರಚಾರ – ‘ಯುನೈಟೆಡ್ ಸ್ಟೂಡೆಂಟ್ಸ್ ಆಫ್ ಇಂಡಿಯಾ’ ಖಂಡನೆ

“ರಾಷ್ಟ್ರವಾದದ ಸೋಗಿನಲ್ಲಿ ಜೇಬು ತುಂಬಿಸಿಕೊಳ್ಳಲು ಪ್ರಜಾಪ್ರಭುತ್ವ ಅವಕಾಶ ಮತ್ತು ಸಂಸ್ಕೃತಿಯ ಮೇಲೆ ದಾಳಿ”

ಮಾರ್ಚ್ 2024 ರಲ್ಲಿ ‘ಬಸ್ತರ್: ದಿ ನಕ್ಸಲ್ ಸ್ಟೋರಿ’ ಶೀರ್ಷಿಕೆಯಡಿಯಲ್ಲಿ ಬಿಡುಗಡೆ ಮಾಡಲು ಉದ್ದೇಶಿಸಿರುವ ಚಲನಚಿತ್ರದ ಟೀಸರ್ ಅನ್ನು ಇತ್ತೀಚೆಗೆ ಸಾಮಾಜಿಕ ಮಾಧ್ಯಮ ವೇದಿಕೆಗಳ ಮೂಲಕ ಹಂಚಿಕೊಳ್ಳಲಾಗಿದೆ. ‘ದಿ ಕೇರಳ ಸ್ಟೋರಿ’ ಎಂಬ ಅಪಪ್ರಚಾರ ಸಿನಿಮಾದ ಹಿಂದೆ ಇದ್ದ ತಂಡವೇ ಈ ಸಿನಿಮಾ ನಿರ್ಮಾಣದ ಹೊಣೆ ಹೊತ್ತಿದೆ. "ಅರ್ಬನ್ ನಕ್ಸಲ್" ಎಂಬುದು ಬಲಪಂಥೀಯರ ಒಂದು ನೆಚ್ಚಿನ ಅಪಪ್ರಚಾರ ಪದ, "ಎಡ ಉದಾರವಾದಿ ಖೋಟಾ ಬುದ್ಧಿಜೀವಿಗಳನ್ನು "ಗುಂಡಿಕ್ಕಿ ಸಾಯಿಸುವುದಾಗಿ ಈ ಚಲನಚಿತ್ರದ ಮುಖ್ಯ ಪಾತ್ರ ಹೇಳುವುದರೊಂದಿಗೆ ಈ ಟೀಸರ್ ಕೊನೆಗೊಳ್ಳುತ್ತದೆ. ಆಕೆ ವಿಶೇಷವಾಗಿ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಮೇಲೆ ದಾಳಿ ಮಾಡುತ್ತಾಳೆ.

“ಪ್ರತಿ ಕಲಾವಿದರು ವಾಕ್ ಸ್ವಾತಂತ್ರ್ಯವನ್ನು ಹೊಂದಿದ್ದಾರೆ ಎಂದು ‘ಯುನೈಟೆಡ್ ಸ್ಟೂಡೆಂಟ್ಸ್ ಆಫ್ ಇಂಡಿಯಾ’ ಬಲವಾಗಿ ನಂಬುತ್ತದೆ ಮತ್ತು ಅದರ ಪರವಾಗಿ ನಿಲ್ಲುತ್ತದೆ. ಆದರೆ ಕೊಲೆಗಳಿಗೆ ಕರೆ ನೀಡುವುದು ಮತ್ತು ಪ್ರತಿಷ್ಠಿತ ಸಂಸ್ಥೆಗಳ ಮೇಲೆ ದಾಳಿ ಮಾಡುವುದು ರಾಜಕೀಯ ಪ್ರಚಾರದ ಭಾಗವಾಗಿದೆ ಎಂದೂ ಅದು ಅರ್ಥಮಾಡಿಕೊಂಡಿದೆ. ಇದು ಭಾರತೀಯ ಎಡಪಂಥೀಯರನ್ನು ಮಾತ್ರವಲ್ಲದೆ ಕಾನೂನಿನ ಆಳ್ವಿಕೆ ಮತ್ತು ಭಾರತದ ಸಂವಿಧಾನದ ತತ್ವಗಳನ್ನು ದುರ್ಬಲಗೊಳಿಸಲು ನಡೆಯುತ್ತಿರುವ ಫ್ಯಾಸಿಸ್ಟ್ ತೆರನ ಯೋಜನೆಯ ಭಾಗವಾಗಿದೆ” ಎಂದು ಈ ಬಗ್ಗೆ 16 ವಿದ್ಯಾರ್ಥಿಗಳ ಸಂಘಟನೆಗಳ ಜಂಟಿ ವೇದಿಕೆಯಾದ ‘ಯುನೈಟೆಡ್ ಸ್ಟೂಡೆಂಟ್ಸ್ ಆಫ್ ಇಂಡಿಯಾ’ ಬಿಡುಗಡೆ ಮಾಡಿದ ಹೇಳಿಕೆ ಬಲವಾಗಿ ಖಂಡಿಸಿದೆ.

ವಿಶ್ವವಿದ್ಯಾನಿಲಯಗಳ ಮೇಲೆ ದಾಳಿ ಮಾಡುವುದನ್ನು ನಿಲ್ಲಿಸಿ, ಕೊಲೆಗಳಿಗೆ ಕರೆ ನೀಡುವುದನ್ನು ಕೊನೆಗೊಳಿಸಿ ಆದರೆ ಕೋಮುವಾದದ ವಿರುದ್ಧ ಒಂದಾಗಿ ಎಂದು ಅದು ಕರೆ ನೀಡಿದೆ.

ಕಳೆದ ಕೆಲವು ವರ್ಷಗಳಿಂದ, ವಿಶೇಷವಾಗಿ ಆರ್‌ಎಸ್‌ಎಸ್–ಬಿಜೆಪಿ ಸರ್ಕಾರದ ಅಡಿಯಲ್ಲಿ, ಮಾಧ್ಯಮ ಮತ್ತು ಸಂಸ್ಕೃತಿ ಉದ್ಯಮದಲ್ಲಿನ ಕೆಲವು ಶಕ್ತಿಗಳು ಪ್ರಭುತ್ವ ತನ್ನ ಹೊಣೆ ನಿಭಾಯಿಸಬೇಕು ಎಂದು ಕೇಳುವ, ಮತ್ತು ಭಾರತದಾದ್ಯಂತ, ಸಂವಿಧಾನದಲ್ಲಿ ಪ್ರತಿಪಾದಿಸಲಾದ ಸ್ವಾತಂತ್ರ್ಯ, ಸೋದರತ್ವ ಮತ್ತು ಸಮಾನತೆಯ ಆದರ್ಶಗಳನ್ನು ಸಾಧಿಸಲು ಹೆಣಗಾಡುತ್ತಿರುವ ಪ್ರಗತಿಪರ ಮತ್ತು ಪ್ರಜಾಸತ್ತಾತ್ಮಕ ಚಳುವಳಿಗಳ ವಿರುದ್ಧ ವ್ಯಾಪಕ ಪ್ರಚಾರದಲ್ಲಿ ತೊಡಗಿವೆ ಎಂಬುದನ್ನು ದೇಶವು ಕಾಣುತ್ತಿದೆ. ಹೀಗಾಗಿಯೇ ಭಾರತದ ಪ್ರಮುಖ ಸಂಸ್ಥೆಗಳಾದ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯ ಮತ್ತು ಇತರೆಡೆಗಳಲ್ಲಿ ಶಿಕ್ಷಣದ ಸರಕೀಕರಣದ ವಿರುದ್ಧದ ಹೋರಾಟದಲ್ಲಿ ವಿದ್ಯಾರ್ಥಿ ಚಳವಳಿಯನ್ನು ದೇಶದ್ರೋಹಿಗಳೆಂದು ಬಿಂಬಿಸಲಾಯಿತು, ಕೇಂದ್ರ ಸರ್ಕಾರದ ಕರಾಳ ಕೃಷಿ ಕಾಯ್ದೆಗಳ ವಿರುದ್ಧ ರಾಷ್ಟ್ರ ರಾಜಧಾನಿಯಲ್ಲಿ ಬೀದಿಗಿಳಿದ ರೈತರು ಖಲಿಸ್ತಾನಿ ಪ್ರತ್ಯೇಕತಾವಾದಿಗಳು ಎಂದು ಕರೆಯಲಾಯಿತು ಮತ್ತು ಸಾಮಾಜಿಕ ನ್ಯಾಯವನ್ನು ಖಚಿತಪಡಿಸಿಕೊಳ್ಳಲು ಕೆಲಸ ಮಾಡುವ ನಾಗರಿಕ ಸಮಾಜದ ಕಾರ್ಯಕರ್ತರು ಮತ್ತು ಅಧ್ಯಯನಕಾರರನ್ನು ದೇಶವಿರೋಧಿಗಳೆಂಬ ಹಣೆಪಟ್ಟಿ ಹಚ್ಚಿ ವಿಚಾರಣೆಯಿಲ್ಲದೆ ವರ್ಷಗಳ ಕಾಲ ಜೈಲುಕಂಬಿಗಳ ಹಿಂದೆ ಎಸೆಯಲಾಯಿತು ಎಂಬುದನ್ನು ನೋಡಿದ್ದೇವೆ. ಪ್ರಸ್ತುತ ಒಬ್ಬ ಕೇಂದ್ರ ಸಚಿವರೇ ತಮ್ಮ ಪಕ್ಷವು ದೇಶದ್ರೋಹಿಗಳೆಂದು ಪರಿಗಣಿಸುವವರನ್ನು ಗುಂಡೇಟಿನಿಂದ ಹೊಡೆದುರುಳಿಸಲು ಕರೆ ನೀಡಿದ ದಾಖಲೆಯೇ ಇರುವಾಗ, ಮತ್ತು ಆಳುವ ಪಕ್ಷದಲ್ಲಿ ಇಂತಹುದೇ ‘ಸಾಧನೆ’ ಮಾಡಿರುವ ಹಲವು ನಾಯಕರಿರುವಾಗ ಅದರಲ್ಲಿ ಆಶ್ಚರ್ಯವೇನಿಲ್ಲ ಎಂದು ಈ ವಿದ್ಯಾರ್ಥಿ ಸಂಘಟನೆಗಳ ಮುಖಂಡರು ಹೇಳಿದ್ದಾರೆ.



“ಇದಲ್ಲದೆ ಕಳೆದ ಕೆಲವು ವರ್ಷಗಳಿಂದ, ಕೇಂದ್ರ ಸರ್ಕಾರದ ತೀವ್ರ ಜನ–ವಿರೋಧಿ ಕ್ರಮಗಳಿಂದ ಧೈರ್ಯ ತುಂಬಿಕೊಂಡ ಅವಕಾಶವಾದಿಗಳು ಮತ್ತು ಬೂಟಾಟಿಕೆಯ ಮಂದಿ ರಾಷ್ಟ್ರವಾದದ ಸೋಗಿನಲ್ಲಿ ತಮ್ಮ ಬ್ಯಾಂಕ್ ಖಾತೆಗಳನ್ನು ಕೊಬ್ಬಿಸುವ ಪ್ರವೃತ್ತಿ ಹೆಚ್ಚುತ್ತಿದೆ. ಈ ಮೂಲಕ, ದೇಶಕ್ಕೆ ಮಾರಲಾಗುತ್ತಿರುವ ರಾಷ್ಟ್ರವಾದದ ಬ್ರಾಂಡೆಂದರೆ ಅದು ರಾಜಕೀಯ ಹಿಂದುತ್ವವ್ದು ಎಂಬುದು ಸ್ಪಷ್ಟವಾಗಿದೆ: ಆದ್ದರಿಂದ ಭಾರತದ ಅಲ್ಪಸಂಖ್ಯಾತರನ್ನು ‘ಅನ್ಯರು’ ಎಂದು ಬಿಂಬಿಸುವ, ಕೋಮು ವಿಭಜನೆ ಮತ್ತು ದ್ವೇಷದ ಬೀಜಗಳನ್ನು ಬಿತ್ತುವ ಏಕೈಕ ಉದ್ದೇಶ ಹೊಂದಿರುವ ಪ್ರಚಾರ ಸಾಮಗ್ರಿಗಳು ಭರದಿಂದ ತಯಾರಾಗುತ್ತಿವೆ. ಇವು ಆಳುವವರ ಅನೇಕ ಪಾಪಗಳತ್ತ ಗಮನ ಹರಿಯದಂತೆ ಮಾಡಲು, ಸರಕಾರ ಭಾರತದ ನೆಲ ಮತ್ತು ಸಂಪನ್ಮೂಲಗಳನ್ನು ಅಂತರಾಷ್ಟ್ರೀಯ ಹಣಕಾಸು ಮತ್ತು ಬಂಟ ಬಂಡವಾಳಶಾಹಿಗಳ ಸೇವೆಯಲ್ಲಿ ಹಂಚಲು ಅನುವು ಮಾಡಿಕೊಡುತ್ತಿವೆ. ಇದೇನು ಹೊಸ ವಿದ್ಯಮಾನವೇನಲ್ಲ. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹಲವು ತಲೆಮಾರುಗಳ ಎಡಪಂಥೀಯರು ಹುತಾತ್ಮರಾಗಿರುವಾಗ ಮತ್ತು ಈಗಲೂ ಭಾರತೀಯ ಗಣರಾಜ್ಯದ ರಕ್ಷಣೆಯಲ್ಲಿ ತಮ್ಮ ಪ್ರಾಣವನ್ನು ತ್ಯಾಗ ಮಾಡುತ್ತಲೇ ಇರುವಾಗ, ಆರ್‌ಎಸ್‌ಎಸ್ ಮತ್ತು ಅದಕ್ಕೆ ಸಂಬಂಧಪಟ್ಟವರು ಭಾರತದ ಭದ್ರತೆಯನ್ನು, ಶಾಂತಿ ಮತ್ತು ಸಾರ್ವಭೌಮತ್ವವನ್ನು ದುರ್ಬಲಗೊಳಿಸುವ ಶಕ್ತಿಗಳ ರಕ್ಷಣೆಯಲ್ಲಿ ಯಾವಾಗಲೂ ಹೇಗೆ ನಿಂತಿವೆ ಎಂಬುದನ್ನು ದೇಶವು ನೋಡಿದೆ” ಎಂದು ‘ಯುನೈಟೆಡ್ ಸ್ಟೂಡೆಂಟ್ಸ್ ಆಫ್ ಇಂಡಿಯಾ’ ಟಿಪ್ಪಣಿ ಮಾಡಿದೆ.

ಕಾನೂನಿನ ಆಳ್ವಿಕೆಯನ್ನು ದುರ್ಬಲಗೊಳಿಸುವುದರಿಂದ ಲಾಭ ಪಡೆಯಬಹುದೆಂದು ಯೋಚಿಸುವ ಮಂದಿಗಳ ತಪ್ಪು ಪ್ರಯತ್ನಗಳನ್ನು ದೇಶದ ಪ್ರಗತಿಪರ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಬಲವಾಗಿ ಪ್ರತಿರೋಧಿಸುತ್ತವೆ, ಭಾರತದಲ್ಲಿ ಪ್ರಜಾಸತ್ತಾತ್ಮಕ ಅವಕಾಶ ಮತ್ತು ಸಂಸ್ಕೃತಿಯ ಮೇಲಿನ ನಗ್ನ ದಾಳಿಯ ವಿರುದ್ಧ ಪ್ರತಿಭಟಿಸಬೇಕು ಎಂದು ವಿದ್ಯಾರ್ಥಿ ಸಮುದಾಯಕ್ಕೆ ಕರೆ ನೀಡಿರುವ ಯುನೈಟೆಡ್ ಸ್ಟೂಡೆಂಟ್ಸ್ ಆಫ್ ಇಂಡಿಯಾ, ಈ ಅಪಪ್ರಚಾರದ ಸಿನಿಮಾದ ವಿರುದ್ಧ ಒಗ್ಗಟ್ಟಾಗಿ ನಿಂತು ಜಾತ್ಯತೀತ ಮೌಲ್ಯಗಳನ್ನು ಎತ್ತಿಹಿಡಿಯಬೇಕು ಎಂದು ವಿದ್ಯಾರ್ಥಿ ಸಮುದಾಯಕ್ಕೆ ಮನವಿ ಮಾಡಿದೆ.

ಎಐಎಸ್‌ಎ, ಎಐಎಸ್‌ಬಿ, ಎಐಎಸ್‌ಎಫ್, ಎಸ್‌ಎಫ್‌ಐ, ಡಿಎಎಸ್‌ಎಫ್, ಸಮಾಜವಾದಿ ಛಾತ್ರ ಸಭಾ, ಆರ್‌ಎಲ್‌ಡಿ ಛಾತ್ರಸಭಾ, ಡಿಎಂಕೆ ವಿದ್ಯಾರ್ಥಿ ವಿಭಾಗ, ಸಿಆರ್‌ಜೆಡಿ, ಸಿವೈಎಸ್‌ಎಸ್, ಪಿಎಸ್‌ಎಫ್, ಟಿಎಸ್‌ಎಫ್, ಪಿಎಸ್‌ಯು, ಎಸ್‌ಎಸ್‌ಎಸ್ ಮುಂತಾದ 16 ವಿದ್ಯಾರ್ಥಿ ಸಂಘಟನೆಗಳ ಮುಖಂಡರು ಈ ಹೇಳಿಕೆಗೆ ಸಹಿ ಮಾಡಿದ್ದಾರೆ.

ದಲಿತ ಪ್ರಾಧ್ಯಾಪಕರಿಗೆ ಅನ್ಯಾಯ ನ್ಯಾಷನಲ್ ಕಾಲೇಜು ಆಡಳಿತ ಮಂಡಳಿ ನಿರ್ಧಾರದ ವಿರುದ್ಧ ಹೋರಾಟಕ್ಕೆ ಜಯ

ಡಾ. ರವಿ ಕುಮಾರ್ ಬಾಗಿಯವರು ಒಬ್ಬ ಪ್ರತಿಭಾವಂತ ಪ್ರಾಧ್ಯಾಪಕ. ಹದಿಮೂರು ವರ್ಷಗಳ ಹಿಂದೆ, ಬೆಂಗಳೂರಿನ ಪ್ರತಿಷ್ಠಿತ ಬಸವನಗುಡಿ ನ್ಯಾಷನಲ್ ಕಾಲೇಜಿನ ಪದವಿ ಮತ್ತು ಸ್ನಾತಕೋತ್ತರ ಕೇಂದ್ರಕ್ಕೆ ಸೇರಿ, ಇಲ್ಲಿಯವರೆಗೂ ಸೇವೆ ಸಲ್ಲಿಸುತ್ತಿರುವ ರವಿ ಕುಮಾರ್ ಬಾಗಿ ಕಾಲೇಜಿನಲ್ಲಿ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಘಟಿಸುವಲ್ಲಿಯೂ ಸಕ್ರಿಯ ಪಾತ್ರ ವಹಿಸುತ್ತಾ ಬರುತ್ತಿದ್ದಾರೆ. ಇದಲ್ಲದೇ ನಾಡಿನ ಶೈಕ್ಷಣಿಕ ಸಾಮಾಜಿಕ ಬೆಳವಣಿಗೆಗಳಿಗೆ ಸ್ಪಂದಿಸುವ ಸಂವೇದನಾಶೀಲ ವ್ಯಕ್ತಿಯಾಗಿದ್ದಾರೆ.

ಡಾ. ರವಿ ಕುಮಾರ್ ಬಾಗಿಯವರು ಕಾಲೇಜಿನ ಸ್ನಾತಕೋತ್ತರ ಕೇಂದ್ರದಲ್ಲಿ ಡಾಕ್ಟರೇಟ್ ಮಾಡುವ ಸಂಶೋಧಕರಿಗೆ ಮಾರ್ಗದರ್ಶನ ಮಾಡಲು ಸಾಧ್ಯವಾಗುವಂತೆ ವಿಶ್ವ ವಿದ್ಯಾಲಯದ ಮಾನ್ಯತೆ ಪಡೆಯಲು ಕಾಲೇಜಿನ ಆಡಳಿತ ಮಂಡಳಿಯಿಂದ ಕಳೆದ ಹದಿಮೂರು ವರ್ಷಗಳ ಅವರ ಸೇವೆಯನ್ನು ದೃಢೀಕರಿಸುವ ಪ್ರಮಾಣ ಪತ್ರದ ಅವಶ್ಯಕತೆ ಇತ್ತು. ಅದಕ್ಕಾಗಿ ರವಿಯವರು ಆಡಳಿತ ಮಂಡಳಿಗೆ ಮನವಿ ಸಲ್ಲಿಸಿದ್ದಾರೆ. ಆಡಳಿತ ಮಂಡಳಿಯು ರವಿಯವರಿಗೆ ಸೇವಾ ಅವಧಿಯ ಕುರಿತು ದೃಢೀಕರಣ ನೀಡುವ ಬದಲಿಗೆ ರವಿಕುಮಾರ್ ಬಾಗಿಯವರನ್ನು ತಮ್ಮದೇ ನ್ಯಾಷನಲ್ ಕಾಲೇಜಿನ



ಜಯನಗರದ ಪದವಿ ಪೂರ್ವ ಕಾಲೇಜಿಗೆ ವರ್ಗಾವಣೆ ಮಾಡಿ ಆದೇಶ ನೀಡಿದೆ.

ಡಾ. ರವಿಕುಮಾರ ಬಾಗಿಯವರಿಗೆ ಎಲ್ಲ ಶೈಕ್ಷಣಿಕ ಅರ್ಹತೆ ಇದ್ದರೂ, ಸ್ನಾತಕೋತ್ತರ ಕೇಂದ್ರದಲ್ಲಿ ರವಿಕುಮಾರ ಬಾಗಿಯವರಿಗೆ ಯಾವುದೇ ಸ್ಪರ್ದೆ ಇಲ್ಲದೇ ಇದ್ದರೂ ಸಹ ಆಡಳಿತ ಮಂಡಳಿಯ ಅವರಿಗೆ ಸೇವಾ ಅವಧಿ ದೃಢೀಕರಣ ಪ್ರಮಾಣ ಪತ್ರವನ್ನು ನೀಡದೇ, ಕೆಳ ಹಂತದ ಕಾಲೇಜಿಗೆ ವರ್ಗಾವಣೆ ಮಾಡಿರುವುದು ಸ್ಪಷ್ಟವಾಗಿ ಎದ್ದು ಕಾಣುವ ಅನ್ಯಾಯವಾಗಿದೆ. ಇದರಿಂದ ಅವರು ಪಿ.ಹೆಚ್.ಡಿ. ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಲು ಸಾಧ್ಯವಾಗುವುದಿಲ್ಲ. ದಲಿತ ಸಮುದಾಯದಿಂದ ಬಂದ ಒಬ್ಬ ಪ್ರತಿಭಾವಂತ ಪ್ರಾಧ್ಯಾಪಕರೊಬ್ಬರಿಗೆ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವ ಮಾನ್ಯತೆ ಪಡೆಯಲು ಅಗತ್ಯ ಪ್ರಮಾಣ ಪತ್ರ ನೀಡುವ ಮೂಲಕ ತಮ್ಮ ಸಂಸ್ಥೆಯ ಪ್ರಗತಿಗೆ ಬೆಂಬಲ ನೀಡುವ ಬದಲಿಗೆ ದಲಿತ ವಿರೋಧಿಯಾಗಿ ವರ್ತಿಸುವ ದಾರಿಯನ್ನು ಆಡಳಿತ ಮಂಡಳಿ ಆಯ್ಕೆ ಮಾಡಿಕೊಂಡಿದ್ದು ದುರದೃಷ್ಟಕರ.

ಈ ಅನ್ಯಾಯವನ್ನು ಪ್ರತಿಭಟಿಸಿ ಫೆಬ್ರವರಿ 6, 2024 ರಂದು ದಲಿತ ಮತ್ತು ಪ್ರಗತಿಪರ ಸಂಘಟನೆಗಳು, ಹಲವು ಸಾಹಿತಿ, ಚಿಂತಕರು ನ್ಯಾಷನಲ್ ಕಾಲೇಜಿನ ಬಳಿ ಸೇರಿದ್ದರು. ಪ್ರಗತಿಪರರೂ ಹಾಗೂ ಕಾಲೇಜಿನ ಆಡಳಿತ ಮಂಡಳಿಯ ಪದಾಧಿಕಾರಿಗಳ ನಡುವೆ ನಡೆದ ನೇರ ಮತುಕತೆಯಲ್ಲಿ ಆಡಳಿತ ಮಂಡಳಿಯ ಪ್ರತಿನಿಧಿಗಳು ತಮ್ಮ ವರ್ಗಾವಣೆ ಕ್ರಮವನ್ನು ಸಮರ್ಥಿಸಿಕೊಳ್ಳಲು ಸಾಧ್ಯವಾಗದೆ, ತಪ್ಪನ್ನು ಒಪ್ಪಿಕೊಂಡು ರವಿಕುಮಾರ್ ಬಾಗಿಯವರಿಗೆ ಮರಳಿ ಮೂಲ ಸ್ಥಾನದಲ್ಲಿ ಕೆಲಸ ಮಾಡಲು ಅವಕಾಶ ಕೊಡುವುದಾಗಿ ಒಪ್ಪಿಕೊಂಡು ಅದರಂತೆ ನಡೆದುಕೊಂಡಿದ್ದಾರೆ. ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಮಧ್ಯಪ್ರವೇಶದಿಂದ ಒಬ್ಬ ಪ್ರತಿಭಾವಂತ ಅಧ್ಯಾಪಕರಿಗೆ ಆಗಿದ್ದ ಅನ್ಯಾಯವನ್ನು ಸರಿಪಡಿಸಲು ಸಾಧ್ಯವಾಗಿದ್ದು ಸ್ವಾಗತಾರ್ಹ ವಿಷಯವಾಗಿದೆ.

ಜಿ.ಡಿ.ಪಿ.: ಸಮಾಜದ ಇಬ್ಭಾಗವನ್ನು ಮುಚ್ಚಿಡುವ ಸಾಧನ

ಅರ್ಥವ್ಯವಸ್ಥೆಯು ಹೆಚ್ಚೆಚ್ಚು ಇಬ್ಭಾಗಗೊಳ್ಳುತ್ತಿರುವ ಹಿನ್ನೆಲೆಯಲ್ಲಿ, ಆರ್ಥಿಕ ಯೋಗಕ್ಷೇಮದ ಅಳತೆಗೆ ಜಿಡಿಪಿಯಂತಹ ಎಲ್ಲವನ್ನೂ ಆವರಿಸುವ ಮಾಪಕವು ವಾಸ್ತವವನ್ನು ಮರೆಮಾಚುವ ಒಂದು ಸಾಧನವಾಗುತ್ತದೆ. ವರಮಾನದ ಹೆಚ್ಚುತ್ತಿರುವ ಅಸಮಾನತೆಯಿಂದಾಗಿ ಜಿಡಿಪಿ ಅಸಂಗತ ಅಳತೆಯಾಗುತ್ತದೆ ಎಂಬುದನ್ನಂತೂ ಒಪ್ಪಿಕೊಳ್ಳಲಾಗುತ್ತದೆ. ಆದರೆ ವಿಷಯ ಅಷ್ಟೇ ಅಲ್ಲ, ಹೆಚ್ಚುತ್ತಿರುವ ಈ ಅಸಮಾನತೆಯು ನವ ಉದಾರವಾದದ ಪ್ರಾಬಲ್ಯದ ಅಡಿಯಲ್ಲಿ ಆರ್ಥಿಕವಾಗಿ ದೇಶವನ್ನು ಮತ್ತೊಮ್ಮೆ ಇಬ್ಭಾಗಿಸುತ್ತದೆ. ನವ–ಉದಾರವಾದದ ಈ ಪ್ರಾಬಲ್ಯ ಸಾಮ್ರಾಜ್ಯಶಾಹಿಯ ಮರು–ಪ್ರತಿಪಾದನೆಯೇ ಆಗಿರುವುದರಿಂದ, ಜಿಡಿಪಿಯ ಬಳಕೆಯು ಸಮಾಜದ ಸಂರಚನೆಯಲ್ಲಿ ಸಾಮ್ರಾಜ್ಯಶಾಹಿಯು ಉಂಟುಮಾಡಿರುವ ಮತ್ತು ಬೆಳೆಯುತ್ತಿರುವ ಇಬ್ಬಾಗವನ್ನು ಮುಚ್ಚಿಡುವ ಕೆಲಸವನ್ನು ಮಾಡುತ್ತದೆ. ಸಂಕ್ಷಿಪ್ತವಾಗಿ, ಇದು ಸಾಮ್ರಾಜ್ಯಶಾಹಿಯ ಕಾರ್ಯಾಚರಣೆಯನ್ನು ಮರೆಮಾಚುವ ಕಾರ್ಯವನ್ನು ನಿರ್ವಹಿಸುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್ **ಅನು: ಕೆ. ಎಂ. ನಾಗರಾಜ್**

ಜಿಡಿಪಿಯ ಪರಿಕಲ್ಪನೆಯ ಬಗ್ಗೆ ಮತ್ತು ಅದನ್ನು ಅಳತೆಮಾಡುವ ಬಗ್ಗೆ ಇರುವ ಸಮಸ್ಯೆಗಳು ಎಲ್ಲರಿಗೂ ತಿಳಿದಿರುವ ಸಂಗತಿಯೇ. ಈಡಿಪಿಯಲ್ಲಿ ಸೇವಾ ವಲಯವನ್ನು ಸೇರಿಸುವ ಕ್ರಮವನ್ನು, ಆಡಮ್ ಸ್ಮಿತ್, ಈ ವಲಯದಲ್ಲಿ ಕೆಲಸ ಮಾಡುವವರು "ಅನುತ್ಪಾದಕ ಕೆಲಸಗಾರರು" ಎಂಬ ಪರಿಕಲ್ಪನೆಯ ಆಧಾರದ ಮೇಲೆ ಆಕ್ಷೇಪಿಸುತ್ತಿದ್ದರು. ನಿಸ್ಸಂಶಯವಾಗಿ ಹಿಂದಿನ ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪಿನ ಸಮಾಜವಾದಿ ದೇಶಗಳಲ್ಲಿ, ಸೇವಾ ವಲಯವನ್ನು ಹೊರತುಪಡಿಸಿದ, ಒಟ್ಟು ವಸ್ತು–ಸಾಮಗ್ರಿಗಳ ಉತ್ಪನ್ನವನ್ನು ಒಂದು ಸುಸಂಗತ ಅಳತೆ ಎಂದು ಪರಿಗಣಿಸಲಾಗಿತ್ತು.

ಸೇವಾ ವಲಯವನ್ನು ಜಿಡಿಪಿಯಲ್ಲಿ ಸೇರಿಸಿದರೂ ಸಹ, ಅಲ್ಲಿ ಮಾಡಲಾಗುವ ಕೆಲಸವನ್ನು ಅಳೆಯುವುದು ಒಂದು ಸಮಸ್ಯೆಯೇ. ಏಕೆಂದರೆ, ಸಲ್ಲಿಸಿದ ಸೇವೆ ಎಂಬುದನ್ನು ಬರಿಯ ವರ್ಗಾವಣೆ ಪಾವತಿ ಎಂಬುದರಿಂದ ಪ್ರತ್ಯೇಕಿಸುವುದು ಕಷ್ಟಕರವಾಗಿದೆ. ವರ್ಗಾವಣೆಯ ಪಾವತಿಯ ತೃಪ್ತಿಯನ್ನು, ಒಬ್ಬ ಸಂಗೀತಗಾರನ ಸಂಗೀತದಿಂದ ತೃಪ್ತಿ ಪಡೆಯುವ ರೀತಿಯಲ್ಲಿ ಪಡೆಯಬಹುದು. ಹಾಗಿರುವಾಗ ಇವುಗಳಲ್ಲಿ ಒಂದನ್ನು ಜಿಡಿಪಿಯ ವ್ಯಾಪ್ತಿಗೆ ತಂದು ಇನ್ನೊಂದನ್ನು ತಾರದೆ ಇರುವುದಾದರೂ ಹೇಗೆ? ಇಂತಹ ಪರಿಕಲ್ಪನೆಗಳ ಸಮಸ್ಯೆಗಳ ಜೊತೆಗೆ, ಜಿಡಿಪಿಯ ಅಳತೆಗೆ ಸಂಬಂಧಿಸಿದಂತೆ ಕೆಲವು ಸಮಸ್ಯೆಗಳಿವೆ. ನಮ್ಮ ಬಲು ದೊಡ್ಡ ಕಿರು ಉತ್ಪಾದನಾ ವಲಯದ ಉತ್ಪಾದನೆಯ ಬಗ್ಗೆ ವಿಶ್ವಾಸಾರ್ಹ, ನಿಗದಿತ ಸಮಯದ ಮತ್ತು ಸಕಾಲಿಕ ದತ್ತಾಂಶಗಳು ಲಭ್ಯವಿಲ್ಲದ ಕಾರಣದಿಂದ ಉದ್ಭವಿಸುವ ಸಮಸ್ಯೆಗಳಿವೆ. ಭಾರತದಲ್ಲಿ ಅನೇಕ ಮಂದಿ ಅರ್ಥಶಾಸ್ತ್ರಜ್ಞರು, ವಿವಿಧ ಕಾರಣಗಳಿಗಾಗಿ, ಜಿಡಿಪಿಯ ಬೆಳವಣಿಗೆಯ ದರದ ಅಳತೆಯು ಒಂದು ಅತಿ–ಅಂದಾಜು (ಓವರ್–ಎಸ್ಟಿಮೇಟ್) ಎಂದೇ ಹೇಳುತ್ತಾರೆ.

ಅಸಂಗತ ಮಾನದಂಡ

ಜಿಡಿಪಿಯು ದೇಶದ ಯೋಗಕ್ಷೇಮದ ಸೂಚ್ಯಂಕವಲ್ಲ ಎಂಬುದು ಸ್ವಯಂವೇದ್ಯ; ಇದಕ್ಕೆ ಪ್ರಮುಖವಾದ ಒಂದು ಕಾರಣವೆಂದರೆ, ಜಿಡಿಪಿಯ ಹಂಚಿಕೆ ಅತ್ಯಂತ ಅಸಮಾನವಾಗಿರಲೂ ಸಾಧ್ಯ ಎಂಬುದು. ಸಾಮ್ರಾಜ್ಯಶಾಹಿಯ ಕಾರ್ಯಾಚರಣೆಯು ಮೂರನೇ ಜಗತ್ತಿನ ದೇಶಗಳನ್ನು ಒಂದು ನಿರ್ದಿಷ್ಟ ರೀತಿಯಲ್ಲಿ ಇಭ್ಭಾಗ ಮಾಡುತ್ತದೆ. ಹಾಗಾಗಿ, ಜಿಡಿಪಿಯು ಆರ್ಥಿಕ ಪ್ರಗತಿಯನ್ನು ಅಳೆಯುವ ಒಂದು ಅಸಂಗತ ಮಾನದಂಡವಾಗುತ್ತದೆ. ಹಾಗೆ ನೋಡಿದರೆ, ಜಿಡಿಪಿಯು ಕಾಲಕ್ರಮದಲ್ಲಿ ವೃದ್ಧಿಸುತ್ತಿರುವ ಆರ್ಥಿಕ ಇಬ್ಭಾಗವನ್ನು ಮರೆಮಾಚುವ ಕೆಲಸವನ್ನು ಮಾಡುತ್ತದೆ.

ಸಾಮ್ರಾಜ್ಯಶಾಹಿಯು ಸಮಕಾಲೀನ ಮೂರನೇ ಜಗತ್ತಿನ ಅರ್ಥವ್ಯವಸ್ಥೆಯ ಮೇಲೆ ಎರಡು ವಿಭಿನ್ನ ಪರಿಣಾಮಗಳನ್ನು ಉಂಟುಮಾಡುತ್ತದೆ. ಈ ಅರ್ಥವ್ಯವಸ್ಥೆಗಳು ಸಾಮಾನ್ಯವಾಗಿ ಉಷ್ಣವಲಯದಲ್ಲಿ ನೆಲೆಗೊಂಡಿರುವುದರಿಂದ, ಬಂಡವಾಳಶಾಹಿಯ ನೆಲೆಯಾಗಿರುವ ಸಮಶೀತೋಷ್ಣ ವಲಯದ ಕೈಗಾರಿಕಾ–ಪ್ರಧಾನ ದೇಶಗಳಿಗೆ, ಉಷ್ಣವಲಯದಲ್ಲಿ ಮಾತ್ರವೇ ಬೆಳೆಯುವ ಅಥವಾ ಸಮಶೀತೋಷ್ಣ ವಲಯದ ದೇಶಗಳು ಹೆಪ್ಪುಗಟ್ಟುವ ಚಳಿಗಾಲದಲ್ಲಿ



ಬೆಳೆಯಲಾಗದ ಅನೇಕ ಕೃಷಿ ಉತ್ಪನ್ನಗಳ (ಖನಿಜಗಳ ಹೊರತಾಗಿ) ಅಗತ್ಯವಿದೆ. ಗೋಧಿ ಮತ್ತು ಮೆಕ್ಕೆಜೋಳದ ಹೊರತಾಗಿ, ಸಾಮ್ರಾಜ್ಯಶಾಹಿ ದೇಶಗಳು ಸ್ವತಃ ಯಾವುದೇ ಋತುವಿನಲ್ಲೂ ಬೆಳೆಯಲು ಸಾಧ್ಯವಿಲ್ಲದ, ಅಥವಾ ಬೇಸಿಗೆ ಕಾಲದಲ್ಲಿ ಮಾತ್ರವೇ (ಚಳಿಗಾಲದಲ್ಲಿ ಏನನ್ನೂ ಬೆಳೆಯಲಾಗದು) ಬೆಳೆಯಬಹುದಾದ, ದವಸ ಧಾನ್ಯಗಳ ಅಗತ್ಯವಿದೆ. ಹೀಗಾಗಿ, ಈ ಧಾನ್ಯಗಳನ್ನು ಆಮದು ಮಾಡಿಕೊಳ್ಳಬೇಕಾಗುತ್ತದೆ. ಆದರೆ, ಉಷ್ಣವಲಯದ ಭೂ–ಪ್ರದೇಶದ ವಿಸ್ತಾರವು ಸೀಮಿತವಾಗಿದೆ. ನೀರಾವರಿಯಂತಹ "ಭೂ–ವರ್ಧನೆ"ಯ ಕ್ರಮಗಳನ್ನು ಮತ್ತು ಭೂ ಉತ್ಪಾದಕತೆಯನ್ನು ಹೆಚ್ಚಿಸುವ ಇತರ ತಾಂತ್ರಿಕ ಬದಲಾವಣೆಗಳನ್ನು ಪರಿಚಯಿಸಲು ಪ್ರಭುತ್ವವು ಕ್ರಿಯಾಶೀಲವಾಗಿ ಮಧ್ಯಪ್ರವೇಶ ಮಾಡುವ ಅಗತ್ಯವಿರುತ್ತದೆ. ಆದರೆ, ಪ್ರಭುತ್ವದ ಉತ್ತೇಜನೆ ತನಗೆ ಮಾತ್ರ ಎನ್ನುವ ಬಕಾಸುರ ಬಂಡವಾಳಶಾಹಿಯು ರೈತ ಕೃಷಿಯನ್ನು ಬೆಂಬಲಿಸುವ ಪ್ರಭುತ್ವದ ಎಲ್ಲ ರೀತಿಯ ಬೆಂಬಲದ ಕ್ರಮಗಳನ್ನು ವಿರೋಧಿಸುವುದರಿಂದಾಗಿ ಸಾಕಷ್ಟು ಮಟ್ಟದಲ್ಲಿ "ಭೂ–ವರ್ಧನೆ" ಆಗಿಲ್ಲ. ಹಾಗಾಗಿ, ಈ ಮೆಟ್ರೋಪಾಲಿಟನ್ ದೇಶಗಳಿಗೆ ಅಗತ್ಯವಿರುವ ಉಷ್ಣವಲಯದ ಉತ್ಪನ್ನಗಳ ಸರಬರಾಜುಗಳನ್ನು, ಮೂರನೇ ಜಗತ್ತಿನ ದೇಶಗಳು ತಮ್ಮ ಆಂತರಿಕ ಬೇಡಿಕೆಯನ್ನು ಕುಗ್ಗಿಸುವ ಕ್ರಮಗಳ ಮೂಲಕ, ರಫ್ತು ಮಾಡುವಂತೆ ಪರೋಕ್ಷವಾಗಿ ಒತ್ತಾಯಿಸಲಾಗುತ್ತದೆ. ಆದ್ದರಿಂದ, ತನ್ನ ಒಂದು ಅಗತ್ಯವಾಗಿ ಸಾಮ್ರಾಜ್ಯಶಾಹಿಯು ಮೂರನೆಯ ಜಗತ್ತಿನ ದೇಶಗಳ ಮೇಲೆ ಒಂದು ರೀತಿಯ ಬೇಡಿಕೆಯ ಸಂಕೋಚನವನ್ನು ಮತ್ತು ಆ ಮೂಲಕ ವರಮಾನಗಳ ಸಂಕೋಚನವನ್ನು ಹೇರುತ್ತದೆ.

ನವ ಉದಾರವಾದಿ ಆಳ್ವಿಕೆಯ ಮುಖ್ಯವಾದ ಒಂದು ಕಾರ್ಯವೆಂದರೆ, ಸರಕುಗಳ ಅನಿಯಂತ್ರಿತ ರಫ್ತಿಗೆ ಮೂರನೇ ಜಗತ್ತನ್ನು ತೆರೆದಿಡುವುದು ಮತ್ತು ಅದನ್ನು ಸಾಧಿಸಲು ವಾಡಿಕೆಯಂತೆ ಬೇಡಿಕೆಯ ಸಂಕೋಚನವನ್ನು ಹೇರುವುದೇ ಆಗಿದೆ. ಮೂರನೇ ಜಗತ್ತಿನ ದೇಶಗಳ ಅರ್ಥವ್ಯವಸ್ಥೆಗಳನ್ನು ಈ ರೀತಿಯಲ್ಲಿ ತೆರೆದಿಟ್ಟಾಗ, ರೈತರು ಯಾವ ಬೆಳೆಗಳನ್ನು ಬೆಳೆಯಬೇಕು ಎಂಬ ಆಯ್ಕೆಯು ದೇಶದ ಆಹಾರ ಸ್ವಾವಲಂಬನೆ ಅಥವಾ ಸ್ಥಳೀಯ ಅಗತ್ಯಗಳ ಪರಿಗಣನೆಯಿಂದ ಪ್ರಭಾವಿತವಾಗದೆ, "ಮಾರುಕಟ್ಟೆ"ಯಿಂದ ಮಾತ್ರವೇ ಪ್ರಭಾವಿತವಾಗಿರಬೇಕಾಗುತ್ತದೆ. ಅಂದರೆ, ಅದು ಮೆಟ್ರೊಪಾಲಿಟನ್ ದೇಶಗಳ ಕೊಳ್ಳುವ ಶಕ್ತಿಯ ಸೆಳೆತ ಎಂದಾಗುತ್ತದೆ. ಇದನ್ನು ಖಚಿತಪಡಿಸಿಕೊಳ್ಳಲು, ಜಾಗತಿಕ ದಕ್ಷಿಣದ ದೇಶಗಳಲ್ಲಿ ಆಹಾರ ಧಾನ್ಯಗಳಿಗೆ ಕೊಡುವ ಸರ್ಕಾರದ ಬೆಂಬಲ ಬೆಲೆಯನ್ನು ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಉಳಿಸಿಕೊಳ್ಳುವ ಸಲುವಾಗಿ ಕೈಗೊಳ್ಳುವ ಆಹಾರ ಧಾನ್ಯಗಳ ಸಂಗ್ರಹಣೆಯನ್ನು ನಿಲ್ಲಿಸಬೇಕಾಗುತ್ತದೆ. ಎಲ್ಲ ಪರಿಮಾಣಾತ್ಮಕ ವ್ಯಾಪಾರ ನಿರ್ಬಂಧಗಳನ್ನು ತೆಗೆದುಹಾಕುವ ಕಾರಣದಿಂದಾಗಿ ದೇಶೀಯ ಬೆಲೆಗಳನ್ನು ಅಂತಾರಾಷ್ಟ್ರೀಯ ಬೆಲೆಗಳೊಂದಿಗೆ ಹೊಂದಿಸಿಕೊಳ್ಳಬೇಕಾಗುತ್ತದೆ ಮತ್ತು ಆಮದುಗಳ ಮೇಲೆ ಹೇರುವ ಸುಂಕಗಳನ್ನು ಶೂನ್ಯ ಅಥವಾ ಕನಿಷ್ಠ ಮಟ್ಟದಲ್ಲಿ ಇಡಬೇಕಾಗುತ್ತದೆ. ಇದನ್ನೇ ವಿಶ್ವ ವ್ಯಾಪಾರ ಸಂಸ್ಥೆಯು ಖಚಿತಪಡಿಸಿಕೊಳ್ಳಲು ಬಯಸುವುದು. ಅದೇ ಸಮಯದಲ್ಲಿ, ತಮ್ಮ ಕೃಷಿಕರು ಬೆಳೆಯುವ ಹತ್ತಿ ಮತ್ತು ಆಹಾರ ಧಾನ್ಯಗಳಿಗೆ ಅತಿ ಹೆಚ್ಚು ನೇರ ನಗದು ಸಬ್ಸಿಡಿಗಳನ್ನು



ನೀಡುವುದನ್ನು ಈ ಕೈಗಾರಿಕಾ–ಪ್ರಧಾನ ದೇಶಗಳು ಮುಂದುವರೆಸುತ್ತವೆ ಮತ್ತು ಈ ಸಬ್ಸಿಡಿಗಳಿಗೆ 'ವ್ಯಾಪಾರೇತರದವು ಮತ್ತು ವಿರೂಪಗೊಳಿಸದವು' ಎಂಬ ಹಣೆಪಟ್ಟಿ ಹಚ್ಚುತ್ತವೆ.

ಮೆಟ್ರೋಪಾಲಿಟನ್ ದೇಶಗಳು ಆಮದು ಮಾಡಿಕೊಳ್ಳುವ ಬೆಳೆಗಳ ಪೂರೈಕೆಯು ಸಾಕಾಗುವಷ್ಟು ಇಲ್ಲದಿದ್ದರೆ, ಹಣದುಬ್ಬರ ಉಂಟಾಗುತ್ತದೆ. ಅದನ್ನು ಹತೋಟಿಯಲ್ಲಿಡಲು, ವಾಡಿಕೆಯಾಗಿ ಬೇಡಿಕೆಯನ್ನು ಸಂಕೋಚನಗೊಳಿಸುವ ಕ್ರಮಗಳನ್ನು ಅನುಸರಿಸಲಾಗುತ್ತದೆ. ಬೇಡಿಕೆಯ ಈ ಸಂಕೋಚನವು ದೇಶದ ಆಂತರಿಕ ಬೇಡಿಕೆಯನ್ನು ಹದುಬಸ್ತಿನಲ್ಲಿಡುತ್ತದೆ ಮತ್ತು ಮೆಟ್ರೋಪಾಲಿಟನ್ ದೇಶಗಳಿಗೆ ಪೂರೈಕೆಯನ್ನು ಹೆಚ್ಚಿಸಲು ಕಾರಣವಾಗುತ್ತದೆ. ಈ ಎಲ್ಲಾ ಕಾರ್ಯವಿಧಾನಗಳ ಮೂಲಕ ನವ ಉದಾರವಾದಿ ಆಳ್ವಿಕೆಯು ಉಂಟುಮಾಡುವ ಒಟ್ಟಾರೆ ಪರಿಣಾಮವೆಂದರೆ, ಮೂರನೆಯ ಜಗತ್ತಿನ ದೇಶಗಳಲ್ಲಿ ನಿವ್ವಳ ತಲಾ ಆಹಾರಧಾನ್ಯ ಲಭ್ಯತೆಯನ್ನು ಕಡಿಮೆ ಮಾಡುವುದು ಮತ್ತು ಮೆಟ್ರೋಪಾಲಿಟನ್ ದೇಶಗಳಿಂದ ಬೇಡಿಕೆ ಇರುವ ಬೆಳೆಗಳನ್ನು ಬೆಳೆಯುವಂತೆ ಮಾಡುವುದು. ಕರಾರುವಾಕ್ಕಾಗಿ ಇದನ್ನೇ ನಾವು ಕಾಣುತ್ತಿದ್ದೇವೆ.

ಮೂರನೆಯ ಜಗತ್ತಿನ ದೇಶಗಳಿಗೆ ಸಾಮ್ರಾಜ್ಯಶಾಹಿಯು ಉಂಟು ಮಾಡಿದ ಇನ್ನೊಂದು ಪರಿಣಾಮವೆಂದರೆ, ವೇತನಗಳ ವ್ಯತ್ಯಾಸದ ಸಮಸ್ಯೆಯೇ. ವಸಾಹತುಶಾಹಿಯ ಅಪ–ಕೈಗಾರಿಕೀಕರಣವು ಸೃಷ್ಟಿಸಿದ ಬೃಹತ್ ಶ್ರಮ ಮೀಸಲು ಪಡೆಯು ಈ ದೇಶಗಳಲ್ಲಿ ನಿಜ ವೇತನವನ್ನು ಬರಿಯ ಒಂದು ಜೀವನಾಧಾರದ ಮಟ್ಟಕ್ಕೆ ಕಟ್ಟಿಹಾಕಿತು. ಅದೇ ಸಮಯದಲ್ಲಿ, ಮೆಟ್ರೋಪಾಲಿಟನ್ ದೇಶಗಳಲ್ಲಿ, ಶ್ರಮಿಕ ಉತ್ಪಾದಕತೆ ಹೆಚ್ಚಿದಂತೆಲ್ಲಾ ಶ್ರಮಿಕರ ನಿಜ ವೇತನವೂ ಹೆಚ್ಚುತ್ತಿತ್ತು. ಈ ಎರಡು ಪ್ರದೇಶಗಳ ವೇತನಗಳ ನಡುವಿನ ಅಂತರದ ಲಾಭ ಪಡೆಯಲು ಮೆಟ್ರೋಪಾಲಿಟನ್ ದೇಶಗಳ ಬಹುರಾಷ್ಟ್ರೀಯ ಸಂಸ್ಥೆಗಳು ಈಗ ತಮ್ಮ ಕಾರ್ಖಾನೆಗಳನ್ನು ಮೂರನೇ ಜಗತ್ತಿನ ದೇಶಗಳಲ್ಲಿ ನೆಲೆಗೊಳಿಸಲು ಸಿದ್ಧವಾಗಿವೆ, ಸ್ಥಳೀಯ ಮಾರುಕಟ್ಟೆಯ ಅಗತ್ಯಗಳಿಗಾಗಿ ಅಲ್ಲ, ಬದಲಿಗೆ, ವಿಶ್ವ ಮಾರುಕಟ್ಟೆಯ ಅಗತ್ಯಗಳನ್ನು ಪೂರೈಸುವ ಸಲುವಾಗಿ. ಮೆಟ್ರೋಪಾಲಿಟನ್ ದೇಶಗಳಿಂದ ಜರುಗುತ್ತಿರುವ "ಕೆಳ–ದರ್ಜೆಯ" ಅಥವಾ ಕಡಿಮೆ ಕೌಶಲ್ಯ–ತೀವ್ರ (ಅಂದರೆ ಹೆಚ್ಚೇನೂ ಕೌಶಲ ಬೇಕಿರದ) ಚಟುವಟಿಕೆಗಳ ಈ ಸ್ಥಳಾಂತರವು ಆ ಮೂರನೇ ಜಗತ್ತಿನ ದೇಶಗಳಲ್ಲಿರುವ ಶ್ರಮ ಮೀಸಲುಗಳನ್ನು ಹೀರಿಕೊಳ್ಳುವಷ್ಟು ಪ್ರಮಾಣದಲ್ಲಿಲ್ಲ. ಹಾಗಾಗಿ, ಈ ದೇಶಗಳಲ್ಲಿ ಬರಿಯ ಜೀವನಾಧಾರದ ಮಟ್ಟದಲ್ಲೇ ಉಳಿದಿರುವ ನಿಜ ವೇತನ ಮುಂದುವರೆಯುತ್ತದೆ ಮತ್ತು ವರಮಾನದ ಸಂಕೋಚನವು (ಬೇಡಿಕೆಯ ಸಂಕೋಚನದ ಮೂಲಕ ಉಂಟಾಗುವ ವರಮಾನಗಳ ಸಂಕೋಚನದ ಬಗ್ಗೆ ಈ ಹಿಂದೆ ಉಲ್ಲೇಖಿಸಲಾಗಿದೆ) ಉಲ್ಬಣಗೊಳ್ಳುತ್ತದೆ. ಮೂರನೇ ಜಗತ್ತಿನ ಮಧ್ಯಮ–ವರಮಾನದ ಉದ್ಯೋಗ ಸನ್ನಿವೇಶವೂ ಸೇರಿದಂತೆ ಈ ವಿದ್ಯಮಾನವು ನಗರಗಳ ಬೆಳವಣಿಗೆಯ

ಪುಟ 14 ಕ್ಕೆ







ಸೌಹಾರ್ದ ಮಾನವ ಸರಪಳಿಗಳು–ಸಭೆಗಳು

ಮಹಾತ್ಮ ಗಾಂಧಿಯವರು ಹುತಾತ್ಮರಾದ ಜನವರಿ 30 ರಂದು 'ಸೌಹಾರ್ದ ಕರ್ನಾಟಕ'ದ ವತಿಯಿಂದ ಸಂಘಟಿಸಲಾದ, ರಾಜ್ಯವ್ಯಾಪಿಯಾಗಿ ಸೌಹಾರ್ದ ಮಾನವ ಸರಪಳಿ ಹಾಗೂ ಸೌಹಾರ್ದ ಸಭೆಗಳ ವಿವರವಾದ ವರದಿಯನ್ನು ಕಳೆದ ವಾರದ ಸಂಚಿಕೆಯಲ್ಲಿ ಈಗಾಗಲೇ ಓದಿದ್ದೀರಿ.

ತಡವಾಗಿ ದೊರೆತ ಇನ್ನು ಕೆಲವು ವರದಿಗಳು ಇಲ್ಲಿವೆ. ಮೂಸೂರು ಜಿಲ್ಲೆಯ ಹುಣಸೂರಿನಲ್ಲಿ ಸುಮಾರು ನೂರು ಜನರು ಪಾಲ್ಗೊಂಡ ಮಾನವ ಸರಪಳಿಯು ಕಲ್ಪತರು ಸರ್ಕಲ್‌ನಲ್ಲಿ ನಡೆದಿದೆ. ಡಿ.ಎಸ್.ಎಸ್.ನ ನಗರ ಸಂಚಾಲರಾದ ರಾಜು, ಶಿವರಾಜು, ಅಲ್ಪಸಂಖ್ಯಾತ ಸಮುದಾಯ ಮುಖಂಡರುಗಳಾದ ಮುಜಾಫೀರ್, ಖಾಲಿದ್, ಅಜೀಜುಲ್ಲಾ ಅವರಲ್ಲದೇ ಅಸಂಘಟಿತ ಕಾರ್ಮಿಕರು ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ತುಮಕೂರು ಜಿಲ್ಲೆಯಲ್ಲಿ ತುಮಕೂರು ಕೇಂದ್ರದಲ್ಲಿ ಸುಮಾರು 1000 ಜನರು ಪಾಲ್ಗೊಂಡ ಸೌಹಾರ್ದತಾ ಮಾನವ ಸರಪಳಿಯ ಅಲ್ಲದೇ, ಜಿಲ್ಲೆಯ ತಿಪಟೂರು, ಮುಧುಗಿರಿ ಎರಡೂ ಕಡೆ ಸುಮಾರು 200 ಜನರು ಪಾಲ್ಗೊಂಡ ಮಾನವ ಸರಪಳಿ ನಡೆದಿದೆ. ಪಾವಗಡ, ಕುಣಿಗಲ್‌ಗಳಲ್ಲಿ ತಲಾ 100 ಜನರು ಪಾಲ್ಗೊಂಡ ಮಾನವ ಸರಪಳಿ, ಅಮೃತೂರಿನಲ್ಲಿ ಸುಮಾರು 400 ಜನರು ಪಾಲ್ಗೊಂಡ ಮಾನವ ಸರಪಳಿಗಳು ನಡೆದಿವೆ.

ಕೊಪ್ಪಳ ಜಿಲ್ಲೆಯ ಕುಷ್ಠಗಿಯಲ್ಲಿ ಸುಮಾರು 130 ಜನರು ಪಾಲ್ಗೊಂಡ ಮಾನವ ಸರಪಳಿ ಮತ್ತು ಸಭೆ ಬಸವೇಶ್ವರ ವೃತ್ತದಲ್ಲಿ ನಡೆದಿದೆ. ರಾಜ್ಯ ರೈತ ಸಂಘದ ಜಿಲ್ಲಾ ಅಧ್ಯಕ್ಷ ನಾಸೀರ್ ಮೂಲಿಮನೆ, ಆರ್.ಕೆ. ದೇಸಾಯಿ, ಹುಲಿಕಟ್ಟಿ ಚೆನ್ನಬಸಪ್ಪ, ಮುಸ್ಲಿಂ ಅಲ್ಪಸಂಖ್ಯಾತ ಸಮುದಾಯದ ಪ್ರತಿನಿಧಿಗಳು, ವಿದ್ಯಾರ್ಥಿಗಳು, ಅಂಗನವಾಡಿ ನೌಕರರು ಮತ್ತಿತರು ಪಾಲ್ಗೊಂಡಿದ್ದಾರೆ.

ಗದಗ ಜಿಲ್ಲೆಯಲ್ಲಿ ಗಜೇಂದ್ರಗಡ ಅಲ್ಲದೇ ಜಿಲ್ಲಾ ಕೇಂದ್ರ ಗದಗದಲ್ಲಿ ಸುಮಾರು 50 ಜನರು ಪಾಲ್ಗೊಂಡ ಮಾನವ ಸರಪಳಿ ನಡೆದಿದೆ.

ಚಿತ್ರದುರ್ಗ ಜಿಲ್ಲೆಯ ಕೇಂದ್ರದಲ್ಲಿ ಸುಮಾರು 100 ಜನರು, ಮೊಳಕಾಲ್ಮೂರಿನಲ್ಲಿ ಸುಮಾರು 100 ವಿದ್ಯಾರ್ಥಿಗಳು ಸೇರಿದಂತೆ 200 ಜನರು, ಚಳ್ಳಕೆರೆಯಲ್ಲಿ ಸುಮಾರು 200 ಜನರು ಪಾಲ್ಗೊಂಡ ಮಾನವ ಸರಪಳಿಗಳು ನಡೆದಿವೆ.

ಜಿ.ಡಿ.ಪಿ.: ಸಮಾಜದ ಇಬ್ಭಾಗವನ್ನು ಮುಚ್ಚಿಡುವ ಸಾಧನ.... ಪುಟ 13 ರಿಂದ

ಮೂಲ ಕಾರಣವೂ ಆಗಿದೆ.

ಇಬ್ಬಗೆಯ ಸಮಾಜದ ಸೃಷ್ಟಿ

ಸಾಮ್ರಾಜ್ಯಶಾಹಿಯ ಈ ಎರಡು ಪರಿಣಾಮಗಳು ಮೂರನೆಯ ಜಗತ್ತಿನಲ್ಲಿ ಒಂದು ಇಬ್ಬಗೆಯ ಸಮಾಜವನ್ನು ಸೃಷ್ಟಿಸುತ್ತವೆ. ವಿದೇಶಿ ಬಂಡವಾಳವು ಸಕ್ರಿಯವಾಗಿದ್ದ ಮೂರನೇ ಜಗತ್ತಿನ ದೇಶಗಳಲ್ಲಿ "ಆವೃತ್ತಪ್ರದೇಶ"(enclaves) ಗಳನ್ನು ಸೃಷ್ಟಿಸಿದ್ದ ವಸಾಹತುಶಾಹಿಯು ಅಂತಹ ಇಬ್ಬಗೆಯ ಸಮಾಜವನ್ನು ಹೇಗೂ ಹುಟ್ಟುಹಾಕಿತ್ತು. ವಸಾಹತುಶಾಹಿಯ ನಿರ್ಗಮನದ ನಂತರದ ಮೂರನೇ ಜಗತ್ತಿನ ದೇಶಗಳಲ್ಲಿ ವಸಾಹತುಶಾಹಿ-ವಿರೋಧಿ ಹೋರಾಟದ ಆಧಾರದ ಮೇಲೆ ಹೊರಹೊಮ್ಮಿದ ಪ್ರಭುತ್ವವು ಈ ಇಬ್ಬಗೆಯ ಸಮಾಜವನ್ನು ಕೊನೆಗೊಳಿಸಲು ಬದ್ಧವಾಗಿತ್ತು. ಆದರೆ, ನಿಯಂತ್ರಣ ನೀತಿಯ (dirigist) ಆಳ್ವಿಕೆಯನ್ನು ಬದಲಿಸಿದ ನವ ಉದಾರವಾದವು ಈ ಎರಡರ ನಡುವಿನ ಅಂತರವು ಕಾಲಕ್ರಮದಲ್ಲಿ ಹೆಚ್ಚುತ್ತಿದ್ದಂತೆಯೇ ಮೂರನೇ ಜಗತ್ತಿನಲ್ಲಿ ಈ ಇಬ್ಬಗೆಯ ಸಮಾಜದ ಪ್ರವೃತ್ತಿಯನ್ನು ಮರು-ಹುಟ್ಟಿಸಿದೆ.

ಖಚಿತವಾಗಿ ಹೇಳುವುದಾದರೆ, ಮೂರನೇ ಜಗತ್ತಿನ ವರ್ಧಿಸುತ್ತಿರುವ "ಆಧುನಿಕ" ವಿಭಾಗದ ಕಾರ್ಮಿಕರು ಮತ್ತು ಬೆಳವಣಿಗೆ ನಿಂತು ಹೋದ ಅಥವಾ ಅವನತಿ ಹೊಂದುತ್ತಿರುವ ರೈತ ಕೃಷಿ ಹಾಗೂ ಕಿರು ಉತ್ಪಾದನೆಯಂತಹ ವಿಭಾಗದಲ್ಲಿ ದುಡಿಯುತ್ತಿರುವವರ ನಡುವಿನ ಅಂತರವು ಹೆಚ್ಚಾಗುವುದಿಲ್ಲ. ಏಕೆಂದರೆ, ವೃದ್ಧಿಸುತ್ತಿರುವ ಮತ್ತು ಬೃಹತ್ ಗಾತ್ರದ ಶ್ರಮ ಮೀಸಲುಗಳು "ಆಧುನಿಕ" ಕೆಲಸಗಾರರ ನಿಜ ವೇತನ ದರವನ್ನು ಕೆಳ ಮಟ್ಟದಲ್ಲಿ ಇಡುತ್ತದೆ. ಅದೇ ರೀತಿಯ ಪರಿಣಾಮವನ್ನು, ಗಮನಾರ್ಹ ಮಟ್ಟದ ಹಣದುಬ್ಬರವನ್ನು ಉಂಟುಮಾಡದೆ ಮೆಟ್ರೊಪಾಲಿಟನ್ ದೇಶಗಳ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಉಷ್ಣವಲಯದ ಭೂ-ಪ್ರದೇಶಗಳಿಗೆ ವಿಧಿಸಲಾದ ಬೇಡಿಕೆಯ ಸಂಕೋಚನವು ಇನ್ನೊಂದು ವಿಭಾಗದ ಮೇಲೆ ಉಂಟುಮಾಡುತ್ತದೆ. ಹಾಗಾಗಿ, ಎರಡೂ ವಿಭಾಗದ ಕಾರ್ಮಿಕರೂ ಬಲಿಪಶುಗಳೇ. ಆದರೆ, ಒಂದು ಕಡೆಯಲ್ಲಿ "ಆಧುನಿಕ" ವಿಭಾಗದಲ್ಲಿ ತೊಡಗಿರುವ ಮೇಲ್ಮಧ್ಯಮ ಆದಾಯದ ವೃತ್ತಿಪರರ ಮತ್ತು ಸ್ಥಳೀಯ ದೊಡ್ಡ ಬೂರ್ಜ್ವಾಗಳು ಮತ್ತು ಇನ್ನೊಂದೆಡೆಯಲ್ಲಿ ಆಧುನಿಕ ಮತ್ತು ಸಾಂಪ್ರದಾಯಿಕ ಈ ಎರಡೂ ವಿಭಾಗಗಳಲ್ಲಿ ತೊಡಗಿರುವ ದುಡಿಯುವ ಜನರು ಇವರ ನಡುವಿನ ಅಂತರವು ಸ್ಪಷ್ಟವಾಗಿ ಹೆಚ್ಚಾಗುತ್ತಿದೆ. ಈ ಅಂಶವು ಕೂಡ ಒಂದು ಪ್ರಾದೇಶಿಕ ಆಯಾಮವನ್ನು ಸಹ ಹೊಂದಿದೆ, ಇದು ಸ್ಪಷ್ಟವಾಗಿ ಗ್ರಾಮೀಣ-ನಗರ ಇಬ್ಭಾಗದಲ್ಲಿ ಪ್ರಕಟಗೊಳ್ಳುತ್ತದೆ.

ಗ್ರಾಮೀಣ-ನಗರ ಇಬ್ಭಾಗ

ಈ ಬೆಳೆಯುತ್ತಿರುವ ಗ್ರಾಮೀಣ-ನಗರ ಇಬ್ಭಾಗವು ಭಾರತದ ಅಧಿಕೃತ ದತ್ತಾಂಶಗಳಲ್ಲಿಯೇ ಸ್ಪಷ್ಟವಾಗಿ ಗೋಚರಿಸುತ್ತದೆ. ನಗರ ಭಾರತದಲ್ಲಿ ಪ್ರತಿ ವ್ಯಕ್ತಿಯು ದಿನಕ್ಕೆ 2100 ಕ್ಯಾಲೊರಿಗಳಿಗಿಂತ ಕಡಿಮೆ ಆಹಾರ ಸೇವಿಸುವವರು ಮತ್ತು ಗ್ರಾಮೀಣ ಭಾರತದಲ್ಲಿ 2200 ಕ್ಯಾಲೊರಿಗಳಿಗಿಂತ ಕಡಿಮೆ ಆಹಾರ ಸೇವಿಸುವವರು ಬಡವರು ಎಂಬ ವ್ಯಾಖ್ಯಾನದ ಪ್ರಕಾರ ಪೌಷ್ಟಿಕಾಂಶ-ಬಡತನದ ಅಗಾಧತೆಯನ್ನು ನೋಡುವುದಾದರೆ, ಈ ಪ್ರಮಾಣಕ್ಕಿಂತ ಕೆಳಗಿನ ಸೇವನೆಯ ನಗರ ಜನಸಂಖ್ಯೆಯ ಪ್ರಮಾಣವು 1993-94ರಲ್ಲಿದ್ದ ಶೇ. 57 ರಿಂದ 2017-18ರ ವೇಳೆಗೆ ಸುಮಾರು ಶೇ. 60ಕ್ಕೆ ಏರಿಕೆಯಾಗಿತ್ತು. ಇದಕ್ಕೆ ತದ್ವಿರುದ್ಧವಾಗಿ ಗ್ರಾಮೀಣ ಭಾರತದಲ್ಲಿ ಈ ಪ್ರಮಾಣವು ಇದೇ ಅವಧಿಯಲ್ಲಿ ಶೇ. 58ರಿಂದ ಶೇ. 80ಕ್ಕಿಂತಲೂ ಹೆಚ್ಚಿಗೆ ಇತ್ತು. (ಈ ಲೆಕ್ಕಾಚಾರಗಳನ್ನು ಉತ್ಸಾ ಪಟ್ನಾಯಕ್ ಅವರು ತಮ್ಮ ಮುಂಬರಲಿರುವ ಪುಸ್ತಕದಲ್ಲಿ ಪ್ರಸ್ತಾಪಿಸಿದ್ದಾರೆ; ರಾಷ್ಟ್ರೀಯ ಮಾದರಿ ಸಮೀಕ್ಷೆಯ ದತ್ತಾಂಶಗಳು ತೋರಿಸಿದ ಚಿತ್ರಣವು ಕಳಪೆಯಾಗಿತ್ತು ಎಂಬ ಕಾರಣದಿಂದ ಭಾರತ ಸರ್ಕಾರವು ಈ ದತ್ತಾಂಶಗಳನ್ನು ಹಿಂತೆಗೆದುಕೊಂಡಿದೆ). ವಾಸ್ತವಾಂಶವೆಂದರೆ, ನವ-ಉದಾರವಾದಿ ನೀತಿಯನ್ನು ಆಕ್ರಮಣಕಾರಿಯಾಗಿ, ಯಾವ ನಾಚಿಕೆಯೂ ಇಲ್ಲದೆ ಅನುಸರಿಸಿದ ಎನ್‌ಡಿಎ ಸರ್ಕಾರದ ಅಡಿಯಲ್ಲಿ ಈ ಇಬ್ಭಾಗ ಇನ್ನೂ ಅಗಾಧವಾಗಿ ಬೆಳೆದಿದೆ.

ಅರ್ಥವ್ಯವಸ್ಥೆಯ ಎರಡು ವಿಭಾಗಗಳ ನಡುವೆ ಇಂತಹ ಎದ್ದುಕಾಣುವ ಮತ್ತು ಹೆಚ್ಚುತ್ತಿರುವ ಇಬ್ಭಾಗದ ಹಿನ್ನೆಲೆಯಲ್ಲಿ, ಆರ್ಥಿಕ ಯೋಗಕ್ಷೇಮದ ಅಳತೆಗೆ ಜಿಡಿಪಿಯಂತಹ ಎಲ್ಲವನ್ನೂ ಆವರಿಸುವ ಮಾಪಕವು ವಾಸ್ತವವನ್ನು ಮರೆಮಾಚುವ ಒಂದು ಸಾಧನವಾಗುತ್ತದೆ. ವರಮಾನದ ಹೆಚ್ಚುತ್ತಿರುವ ಅಸಮಾನತೆಯಿಂದಾಗಿ ಜಿಡಿಪಿ ಆರ್ಥಿಕ ಯೋಗಕ್ಷೇಮದ ಅಳತೆಗೆ ಅಸಂಗತವಾಗುತ್ತದೆ ಎಂಬುದನ್ನಂತೂ ಒಪ್ಪಿಕೊಳ್ಳಲಾಗುತ್ತದೆ. ಆದರೆ ವಿಷಯ ಅಷ್ಟೇ ಅಲ್ಲ, ಹೆಚ್ಚುತ್ತಿರುವ ಈ ಅಸಮಾನತೆಯು ಒಂದು ಪ್ರಾದೇಶಿಕ ಆಯಾಮವನ್ನು ಹೊಂದಿದ್ದು, ಅದು ನವ ಉದಾರವಾದದ ಪ್ರಾಬಲ್ಯದ ಅಡಿಯಲ್ಲಿ ಈ ಆಯಾಮವು ಆರ್ಥಿಕವಾಗಿ ದೇಶವನ್ನು ಮತ್ತೊಮ್ಮೆ ಇಬ್ಭಾಗಿಸುತ್ತದೆ. ನವ-ಉದಾರವಾದದ ಈ ಪ್ರಾಬಲ್ಯ ಸಾಮ್ರಾಜ್ಯಶಾಹಿಯ ಮರು-ಪ್ರತಿಪಾದನೆಯನ್ನು ಪ್ರತಿನಿಧಿಸುತ್ತದೆಯಾದ್ದರಿಂದ, ಜಿಡಿಪಿಯ ಬಳಕೆಯು ಸಮಾಜದ ಸಂರಚನೆಯಲ್ಲಿ ಸಾಮ್ರಾಜ್ಯಶಾಹಿಯು ಉಂಟುಮಾಡಿರುವ ಮತ್ತು ಬೆಳೆಯುತ್ತಿರುವ ಇಬ್ಭಾಗವನ್ನು ಮುಚ್ಚಿಡುವ ಕೆಲಸವನ್ನು ಮಾಡುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಇದು ಸಾಮ್ರಾಜ್ಯಶಾಹಿಯ ಕಾರ್ಯಾಚರಣೆಯನ್ನು ಮರೆಮಾಚುವ ಕಾರ್ಯವನ್ನು ನಿರ್ವಹಿಸುತ್ತದೆ.

ಅಷ್ಟೇ ಅಲ್ಲ. ಭಾರತದಲ್ಲಿ ಜಿಡಿಪಿಯ ಎಲ್ಲ ಪ್ರಾಥಮಿಕ ಅಂದಾಜುಗಳೂ ಬೃಹತ್-ಉತ್ಪಾದನಾ ವಲಯದ ದತ್ತಾಂಶವನ್ನೇ ಆಧರಿಸಿವೆ. ಈ ಬೃಹತ್-ಉತ್ಪಾದನಾ ವಲಯದ ಬೆಳವಣಿಗೆಯ ದರವನ್ನೇ, ಅನೇಕ ಪ್ರಕರಣಗಳಲ್ಲಿ, ಸಣ್ಣ-ಪ್ರಮಾಣದ ಉತ್ಪಾದನಾ ವಲಯಕ್ಕೂ ಒಂದು "ತಾತ್ಕಾಲಿಕ" ಕ್ರಮವಾಗಿ ಅನ್ವಯಿಸಲಾಗುತ್ತದೆ. ಆದರೆ, ಈ ಕ್ರಮವು, ಸೊರಗುತ್ತಿರುವ ಸಣ್ಣ-ಪ್ರಮಾಣದ ಉತ್ಪಾದನಾ ವಲಯವೂ ಬೃಹತ್-ಉತ್ಪಾದನಾ ವಲಯದಂತೆಯೇ ವೇಗವಾಗಿ ಬೆಳೆಯುತ್ತಿದೆ ಎಂಬುದಾಗಿ ಸೂಚಿಸುತ್ತದೆ. ಇದು ಸತ್ಯದ ಒಂದು ಅಣಕವಾಗಿದೆ.

ಶಿಕ್ಷಣ ನಿಧಿಯನ್ನು ತೀವ್ರವಾಗಿ ಕಡಿತಗೊಳಿಸಿದ ವಿದ್ಯಾರ್ಥಿ ವಿರೋಧಿ ಮಧ್ಯಂತರ ಬಜೆಟ್–ಎಸ್.ಎಫ್.ಐ.

ಕೇಂದ್ರ ಬಿಜೆಪಿ ಸರ್ಕಾರವು 2024 ರ ಚುನಾವಣೆಗೆ ಮುಂಚಿತವಾಗಿ ಮಧ್ಯಂತರ ಬಜೆಟ್ ಮಂಡಿಸಿದೆ. 10 ವರ್ಷಗಳ ತನ್ನ ಆಡಳಿತದಲ್ಲಿ ದೇಶ ಹಲವು ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿದೆ, 25 ಕೋಟಿ ಜನರನ್ನು ಬಡತನದಿಂದ ಮುಕ್ತಗೊಳಿಸಲಾಗಿದೆ ಎಂದು ಆ ಬಜೆಟ್‌ನಲ್ಲಿ ಹೇಳಲಾಗಿದೆ. ಬಜೆಟ್ ಭಾಷಣದಲ್ಲಿ ಮಾತನಾಡಿದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ರಾಷ್ಟ್ರೀಯ ಶಿಕ್ಷಣ ನೀತಿ 2020 ದೇಶದ ಶಿಕ್ಷಣದಲ್ಲಿ ಹಲವು ಪ್ರಮುಖ ಬದಲಾವಣೆಗಳನ್ನು ತಂದಿದೆ ಎಂದಿದ್ದಾರೆ. ಆದರೆ ಅದು ಸುಳ್ಳು ಎಂಬುದನ್ನು ಅವರು ಮಂಡಿಸಿದ ಬಜೆಟ್ ನಿಂದ ಸಾಬೀತಾಗಿದೆ.

ದೀರ್ಘಕಾಲದವರೆಗೆ, 1960 ರ ಕೊಠಾರಿ ಆಯೋಗ ಸೇರಿದಂತೆ ಅನೇಕರು ಭಾರತದ ಬಜೆಟ್ ಹಂಚಿಕೆಯಲ್ಲಿ ಶೇ. 6 ರಷ್ಟನ್ನು ಶಿಕ್ಷಣ ಕ್ಷೇತ್ರಕ್ಕೆ ಮೀಸಲಿಡಬೇಕು ಎಂದು ಶಿಫಾರಸು ಮಾಡಿದ್ದಾರೆ ಮಾತ್ರವಲ್ಲ ಅದಕ್ಕಾಗಿ ಒತ್ತಾಯಿಸಿದ್ದಾರೆ. ಬಿಜೆಪಿ ಕೂಡ ತನ್ನ 2019 ರ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ ಭರವಸೆಯಂತೆ ರಾಷ್ಟ್ರೀಯ ಶಿಕ್ಷಣ ನೀತಿಯ ಉದ್ದೇಶಗಳಲ್ಲಿ ಒಂದಾಗಿ ಶಿಕ್ಷಣಕ್ಕೆ ಶೇ. 6 ರಷ್ಟು ಮೀಸಲಿಡಬೇಕು ಎಂಬುದನ್ನು ಕಡೆಗಣಿಸಿದೆ. ಈ ಮಧ್ಯಂತರ ಬಜೆಟ್ ಸಹಾ ಇದನ್ನು ನಿರ್ಲಕ್ಷಿಸಿದೆ.

ಶಾಲಾ ಶಿಕ್ಷಣಕ್ಕೆ ಧನಸಹಾಯ ಕಡಿಮೆ ನಿಗದಿ

ಬಜೆಟ್‌ನಲ್ಲಿ ಶಾಲಾ ಶಿಕ್ಷಣಕ್ಕಾಗಿ 2023 ಕ್ಕಿಂತ ಸ್ವಲ್ಪ ಹೆಚ್ಚಳವನ್ನು (ಶೇ. 1ರಷ್ಟು) ಮೀಸಲಿಟ್ಟಿದೆ. ಆದರೆ ನಾವು ದೇಶದ ಆರ್ಥಿಕ ಬಿಕ್ಕಟ್ಟು ಮತ್ತು ಹಣದುಬ್ಬರವನ್ನು ಗಣನೆಗೆ ತೆಗೆದುಕೊಂಡರೆ, ಹಣವನ್ನು ವಾಸ್ತವವಾಗಿ ಶೇ. 5 ಕ್ಕಿಂತ ಕಡಿಮೆ ನಿಗದಿಪಡಿಸಲಾಗಿದೆ. ಕರೋನಾ ಸಾಂಕ್ರಾಮಿಕ ರೋಗದಿಂದಾಗಿ, ಬಡವರ ಕಲಿಕೆಯ ಸ್ಥಿತಿಯು ಅವರ ಜೀವನವನ್ನು ಕಂಗೆಡಿಸಿದೆ. ಇಂತಹ ಕುಟುಂಬಗಳ ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಪುನರಾರಂಭಿಸಲು ವಿಶೇಷ ಸುಧಾರಣಾ ಯೋಜನೆಗಳಿಗೆ ಮಧ್ಯಂತರ ಬಜೆಟ್‌ನಲ್ಲಿ ಯಾವುದೇ ಘೋಷಣೆಯೂ ಇಲ್ಲ.

ಉನ್ನತ ಶಿಕ್ಷಣಕ್ಕಾಗಿ ಹಣ ಹಂಚಿಕೆ ಕಡಿತ

ಪ್ರತಿ ವರ್ಷ ಉನ್ನತ ಶಿಕ್ಷಣಕ್ಕೆ ನೀಡುತ್ತಿದ್ದ ಅನುದಾನವನ್ನು ಬಿಜೆಪಿ ಸರ್ಕಾರ ಕಡಿತಗೊಳಿಸುತ್ತಾ ಬಂದಿದೆ. ಈ ಮಧ್ಯಂತರ ಬಜೆಟ್‌ನಲ್ಲಿಯೂ ಇದನ್ನೇ ಮಾಡಲಾಗಿದೆ. ಕಳೆದ ವರ್ಷ 2023 ರ ಬಜೆಟ್ ಗಿಂತ ಈ ಬಜೆಟ್ ನಲ್ಲಿ ಶೇ. 17 ರಷ್ಟು ಕಡಿಮೆ ಮಾಡಿದೆ. ಸಾರ್ವಜನಿಕ ಶಿಕ್ಷಣಕ್ಕೆ ಶೇ.20ರಷ್ಟು ಮತ್ತು ವೃತ್ತಿ ಶಿಕ್ಷಣಕ್ಕೆ ಶೇ.22ರಷ್ಟು ಅನುದಾನ ಕಡಿತಗೊಳಿಸಿದೆ.

ಮುಖ್ಯವಾಗಿ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಕಳೆದ ವರ್ಷ 6,409 ಕೋಟಿ ರೂ. ಅನುದಾನ ಕೊಡಲಾಗಿತ್ತು. ಈ ವರ್ಷ ಕೇವಲ ರೂ. 2,500 ಕೋಟಿಗೆ ಇಳಿಸುವ ಮೂಲಕ ಶೇ. 60ರಷ್ಟು ಹಣವನ್ನು ಕಡಿತಗೊಳಿಸಿದೆ. ದೇಶದ ಉನ್ನತ ಶಿಕ್ಷಣ ಕ್ಷೇತ್ರದ ಮೇಲಿನ ಈ ದಾಳಿಯು ಮಧ್ಯಂತರ ಬಜೆಟ್‌ನಲ್ಲಿ ಘೋಷಿಸಲಾದ ಐಐಟಿ ಮತ್ತು ಐಐಎಂಗಳಂತಹ ಸಂಸ್ಥೆಗಳಿಗೆ ಕಡಿಮೆ ಅನುದಾನವನ್ನು ನೀಡಿದೆ. ಇದರಿಂದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ದೊಡ್ಡ ಸಮಸ್ಯೆ ತಲೆದೋರಿದೆ.



ಈ ಬಜೆಟ್ ಜಮ್ಮು ಮತ್ತು ಕಾಶ್ಮೀರ ವಿದ್ಯಾರ್ಥಿಗಳಿಗೆ ವಿಶೇಷ ವಿದ್ಯಾರ್ಥಿವೇತನಕ್ಕಾಗಿ ನಿಧಿಯ ಹಂಚಿಕೆಯನ್ನು ನಿರ್ಲಕ್ಷಿಸುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ, ದೇಶದ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕಾಗಿ ಮಧ್ಯಂತರ ಬಜೆಟ್‌ನಲ್ಲಿ ಯಾವುದೇ ಹೊಸ ಹಣವನ್ನು ಬಿಡುಗಡೆ ಮಾಡಿಲ್ಲ. ಬಿಜೆಪಿ ಸರ್ಕಾರ ಶಿಕ್ಷಣವನ್ನು ದೇಶದ ಆಧಾರ ಸ್ತಂಭ ಎಂದು ಹೇಳುತ್ತಿರುವಾಗ, ಬಜೆಟ್‌ನಲ್ಲಿ ಶಾಲಾ ಶಿಕ್ಷಣ ಮತ್ತು ಉನ್ನತ ಶಿಕ್ಷಣ ಕ್ಷೇತ್ರಗಳು ಎದುರಿಸುತ್ತಿರುವ ಸವಾಲುಗಳು ಮತ್ತು ಸಮಸ್ಯೆಗಳನ್ನು ಗಣನೆಗೆ ತೆಗೆದುಕೊಂಡಿಲ್ಲ.

ಹಣದುಬ್ಬರಕ್ಕೆ ಯಾವುದೇ ನಿಬಂಧನೆ ಇಲ್ಲ

ದೇಶದ ಆರ್ಥಿಕ ಬೆಳವಣಿಗೆಯು ಅತ್ಯಲ್ಪ ಶೇ. 7 ರಲ್ಲಿ ತೂಗಾಡುತ್ತಿದೆ. ಹಣದುಬ್ಬರ ದರಗಳನ್ನು ಗಣನೆಗೆ ತೆಗೆದುಕೊಂಡರೆ, ಆರ್ಥಿಕ ಬೆಳವಣಿಗೆಯು ವಾಸ್ತವವಾಗಿ 5 ರಿಂದ 7 ಪ್ರತಿಶತದಷ್ಟು ಇರುತ್ತದೆ. ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೆ ಹೆಚ್ಚಿನ ನಿಧಿಯ ಹಂಚಿಕೆಯು ಈ ದೇಶದ ಆರ್ಥಿಕತೆಯ ಬೆನ್ನೆಲುಬಾಗಿರುವ ಬಹುಪಾಲು ಜನರ ಜೀವನ ಮಟ್ಟವನ್ನು ಸುಧಾರಿಸುತ್ತದೆ. ಅದರ ಮೂಲಕ ಭಾರತದ ಆರ್ಥಿಕ ಬೆಳವಣಿಗೆ ಶೇ. 12ರಷ್ಟು ಹೆಚ್ಚಲಿದೆ.

ಈ ಮಧ್ಯಂತರ ಬಜೆಟ್‌ನಲ್ಲಿ ಶಾಲಾ ಶಿಕ್ಷಣ, ಸಾಕ್ಷರತೆ ಮತ್ತು ಉನ್ನತ ಶಿಕ್ಷಣಕ್ಕೆ ಅಂದಾಜು 10 ಸಾವಿರ ಕೋಟಿ ರೂ.ಗಳ ಅನುದಾನವನ್ನು ಕಡಿತಗೊಳಿಸಲಾಗಿದೆ. ನಿರಂತರವಾಗಿ ಮತ್ತು ಗುಣಮಟ್ಟದ ಶಿಕ್ಷಣವನ್ನು ಪಡೆಯುವಲ್ಲಿ ಹಾಗೂ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುವಲ್ಲಿ ಗಂಭೀರ ಸಮಸ್ಯೆ ಇದೆ. ಇದರಿಂದ ಕಡಿಮೆ ವೇತನಕ್ಕೆ ಅರ್ಜಿ ಸಲ್ಲಿಸುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ದೇಶದ ಯುವಜನತೆಗೆ ಶಿಕ್ಷಣ ನೀಡುವ ತನ್ನ ಹೊಣೆಗಾರಿಕೆಯಿಂದ ಸರ್ಕಾರ ಹಿಂದೆ ಸರಿದಿರುವುದನ್ನು ಇದು ತೋರಿಸುತ್ತದೆ.

ವೃತ್ತಿ ಶಿಕ್ಷಣವನ್ನು ಕಡೆಗಣಿಸಲಾಗಿದೆ

ವಿಶ್ವಾದ್ಯಂತ ಶಿಕ್ಷಣದ ಮೇಲಿನ ಖರ್ಚು ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಯಲ್ಲಿ ಗಮನಾರ್ಹ ಬದಲಾವಣೆಗಳನ್ನು ಮಾಡಿದೆ. ಆದರೆ ಯುವಜನತೆ ಹೆಚ್ಚಿರುವ ದೇಶ ಎಂದು ಬಿಜೆಪಿ ಸರ್ಕಾರ ಬಿಂಬಿಸುತ್ತಿದೆಯಾದರೂ, ಅದಕ್ಕೆ ಮಾನವ ಸಂಪನ್ಮೂಲ ಅಭಿವೃದ್ಧಿ ನಿಧಿಯನ್ನು ಮೀಸಲಿಡುತ್ತಿಲ್ಲ. ಒಕ್ಕೂಟ ಸರ್ಕಾರವು ಮೇಲ್ವರ್ಗದವರಿಗೆ ವಿಶ್ವದರ್ಜೆಯ ಉನ್ನತ ಶಿಕ್ಷಣ ಸಂಸ್ಥೆಗಳನ್ನು ರಚಿಸಲು ನಿರಂತರವಾಗಿ ಗಮನಹರಿಸುತ್ತಿದೆ ಮತ್ತು ಅದಕ್ಕಾಗಿ ಸಾಕಷ್ಟು ಹಣವನ್ನು ವ್ಯಯಿಸುತ್ತಿದೆ. ಆದರೆ ದೇಶದಲ್ಲಿ ಬಹುಪಾಲು ಜನರು ವ್ಯಾಸಂಗ ಮಾಡುತ್ತಿರುವ ವೃತ್ತಿಪರ ಶಿಕ್ಷಣ ಸಂಸ್ಥೆಗಳಿಗೆ 25 ಸಾವಿರ ಕೋಟಿ ರೂ.ಗಿಂತ ಕಡಿಮೆ ಹಣ ಮೀಸಲಿಡಲಾಗಿದೆ. ದೇಶದಲ್ಲಿ ಉದ್ಯೋಗ ಸೃಷ್ಟಿಯಲ್ಲಿ ವೃತ್ತಿ ಶಿಕ್ಷಣ ಪ್ರಮುಖ ಪಾತ್ರ ವಹಿಸುತ್ತದೆ. ಆದರೆ ಅದಕ್ಕೆ ನಿಧಿಯ ಮೊತ್ತವನ್ನು ಕಡಿತಗೊಳಿಸಿ ಮೇಲ್ವರ್ಗದವರು ಓದುವ ಶಿಕ್ಷಣ ಸಂಸ್ಥೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದೆ.

ಅಲ್ಲದೆ, ಕೇಂದ್ರ ಸರ್ಕಾರವು ರಾಷ್ಟ್ರೀಯ ಶಿಕ್ಷಕರ ತರಬೇತಿ ಸಂಸ್ಥೆಗಳು ಮತ್ತು ಭಾರತೀಯ ವೃತ್ತಿ ಶಿಕ್ಷಣ ಸಂಶೋಧನಾ ಇಲಾಖೆಗಳಿಗೆ ಅನುದಾನ ಹಂಚಿಕೆಯನ್ನು ಸಹ ತೀವ್ರವಾಗಿ ಕಡಿತಗೊಳಿಸಿದೆ. ಶಾಲಾ ಶಿಕ್ಷಣ ಮತ್ತು ಉನ್ನತ ಶಿಕ್ಷಣ ಕ್ಷೇತ್ರಗಳ ಹಂಚಿಕೆಯಲ್ಲಿ ಮಧ್ಯಂತರ ಬಜೆಟ್ ಹಂಚಿಕೆಗಳು ಪಕ್ಷಪಾತಿಯಾಗಿವೆ. ದೇಶದ ಆರ್ಥಿಕ ಅಭಿವೃದ್ಧಿಗೆ ಪ್ರಮುಖ ಕೊಡುಗೆ ನೀಡುವ ಯುವಜನರಿಗೆ ಗುಣಮಟ್ಟದ ಶಿಕ್ಷಣ ಸಂಸ್ಥೆಗಳನ್ನು ರಚಿಸುವುದನ್ನು ಸರ್ಕಾರ ಕೈಬಿಟ್ಟಿದೆ.

–ಡಾ. ಸಂಸೀರ್ ಅಹಮದ್

ಭಾರತದಲ್ಲಿ ಕೊರೋನಾಕ್ಕೆ...... ಪುಟ 11 ರಿಂದ

ವ್ಯವಸ್ಥೆಗಳ ಮೇಲೆ ಸಾಂಕ್ರಾಮಿಕದ ವ್ಯಾಪಕ ಪ್ರಭಾವದ ಮೂಲಕ ಪರೋಕ್ಷವಾಗಿ ಸಾವನ್ನಪ್ಪಿದ ಜನರನ್ನು ಒಳಗೊಂಡಿದೆ. ಆದರೆ, ಅದು ಬಳಸಿದ ವಿಧಾನವನ್ನು ಭಾರತ ಸರ್ಕಾರವು ಟೀಕಿಸಿದೆ. ಈ ಅಧ್ಯಯನಗಳಿಗೆ ಬಳಸಲಾದ ಮಾಡೆಲಿಂಗ್ ವ್ಯವಸ್ಥೆಗಳು ತಕ್ಕಮಟ್ಟಿಗೆ ಪ್ರಮಾಣಿತವಾಗಿವೆ ಮತ್ತು ಭಾರತ ಸರ್ಕಾರವು ಇದನ್ನು ಒಪ್ಪದಿದ್ದರೆ, ಅವುಗಳನ್ನು ತಿರಸ್ಕರಿಸಲು ಅವರು ಅದಕ್ಕೆ ತಕ್ಕ ಸಮರ್ಥನೆ ಒದಗಿಸಬೇಕು" ಎಂದು ಭಾರತದ ಅಶೋಕ ವಿಶ್ವವಿದ್ಯಾಲಯದ ಜೀವಶಾಸ್ತ್ರ ಮತ್ತು ಭೌತಶಾಸ್ತ್ರದ ಪ್ರಾಧ್ಯಾಪಕ ಮತ್ತು ಗಣಿತದ ಮಾಡೆಲಿಂಗ್ ತಜ್ಞ ಗೌತಮ್ ಮೆನನ್ ಹೇಳುತ್ತಾರೆ.

ಭಾರತದಲ್ಲಿನ 130 ಕೋಟಿಗಿಂತ ಹೆಚ್ಚಿನ ಜನರಲ್ಲಿ ಮೂರನೇ ಎರಡರಷ್ಟು ಜನರು ಅಂದರೆ, 80 ಕೋಟಿಗಿಂತ ಹೆಚ್ಚಿನವರು ಕನಿಷ್ಠ ಸೌಲಭ್ಯಗಳಿರುವ ಆಸ್ಪತ್ರೆಗಳು ಮತ್ತು ಆರೋಗ್ಯ ವ್ಯವಸ್ಥೆಗಳು ಅಸಮರ್ಪಕವಾಗಿರುವ ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ. ಈ ಕಾರಣದಿಂದಲೂ ಜನರ ಸಾವು ಯಾವ ಕಾರಣದಿಂದ ಸಂಭವಿಸುತ್ತದೆ ಎಂದು ತಿಳಿಯಲು ಸಾಧ್ಯವಾಗುತ್ತಿಲ್ಲ ಎಂಬುದು ನಿಜವಾದರೂ, ಮೋದಿ ಸರ್ಕಾರ ಉದ್ದೇಶ ಪೂರ್ವಕವಾಗಿ ಕೊರೊನಾ ಸಾವುಗಳ ಸಂಖ್ಯೆಯನ್ನು ಮರೆಮಾಚುತ್ತಿದೆ ಎಂಬುದಕ್ಕೆ ಬಹಳಷ್ಟು ಉದಾಹರಣೆಗಳಿವೆ.

ಗುಜರಾತಿನಲ್ಲಿ ಪರಿಹಾರಕ್ಕೆ ಹೆಚ್ಚಿನ ಅರ್ಜಿ

ಸರ್ಕಾರಗಳು ಕೊರೊನಾ ಸಾವುಗಳ ಸಂಖ್ಯೆಯನ್ನು ಹೇಗೆಲ್ಲಾ ಮುಚ್ಚಿಟ್ಟಿವೆ ಎಂಬುದಕ್ಕೆ ಒಂದು ಉದಾಹರಣೆ ಪ್ರಧಾನಿ ನರೇಂದ್ರ ಮೋದಿ ಅವರ ತವರು ರಾಜ್ಯ ಗುಜರಾತ್. ರಾಜ್ಯದ ಆರೋಗ್ಯ ಬುಲೆಟಿನ್ ಪ್ರಕಾರ, 2021ರ ಡಿಸೆಂಬರ್ ತಿಂಗಳ ಒಂದು ನಿರ್ದಿಷ್ಟ ದಿನದಂದು, ಅದುವರೆಗಿನ ಸಾವಿನ ಸಂಖ್ಯೆ 10,099 ಆಗಿತ್ತು. ಆದರೆ, ಮೃತರ ಕುಟುಂಬಗಳಿಂದ ಪರಿಹಾರ ಕೋರಿ 22,557 ಅರ್ಜಿಗಳನ್ನು ಸ್ವೀಕರಿಸಲಾಗಿದೆ ಮತ್ತು 16,175 ಅರ್ಜಿಗಳನ್ನು ಅನುಮೋದಿಸಿ ಪರಿಹಾರ ನೀಡಲಾಗಿದೆ ಎಂದು ಗುಜರಾತ್ ಸರ್ಕಾರ ಅಫಿಡವಿಟ್ ಮೂಲಕ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಈ ಮೂಲಕ ಗುಜರಾತ್ ತನ್ನ ಅಧಿಕೃತ ಲೆಕ್ಕಾಚಾರಕ್ಕಿಂತ ಹೆಚ್ಚಿನ ಕೋವಿಡ್–19 ಸಾವುಗಳನ್ನು ಒಪ್ಪಿಕೊಂಡಿದೆ. ಇದು ದೇಶದ ಸಾವುಗಳ ಸಂಖ್ಯೆ ಕುರಿತಂತೆ ಒಕ್ಕೂಟ ಸರ್ಕಾರ ನೀಡುವ ವರದಿಗಿಂತ ನಿಜವಾದ ಸಂಖ್ಯೆ ಹೆಚ್ಚು ಎಂಬ ಆತಂಕಕ್ಕೆ ಪುಷ್ಟಿ ನೀಡುತ್ತದೆ ಎಂದು ರಾಯಿಟರ್ಸ್ ಡಿಸೆಂಬರ್ 13, 2021ರ ತನ್ನ ವರದಿಯಲ್ಲಿ ಹೇಳಿದೆ.

"ರಾಯಿಟರ್ಸ್ ಮತ್ತು ಇತರ ಮಾಧ್ಯಮಗಳು, ಸ್ಮಶಾನಗಳು ಮತ್ತು ಸ್ಮಶಾನಗಳಿಂದ ಸಂಗ್ರಹಿಸಿದ ಅಂಕಿಅಂಶಗಳ ಆಧಾರದ ಮೇಲೆ ವರದಿ ಮಾಡಿವೆ. ಏಪ್ರಿಲ್ ಮತ್ತು ಜೂನ್ ನಡುವೆ ಎರಡನೇ ಅಲೆಯ ಪ್ರಕರಣಗಳಲ್ಲಿ, ಗುಜರಾತ್ ಸೇರಿದಂತೆ ಇತರೆ ರಾಜ್ಯಗಳು ಕಡಿಮೆ ಅಂದಾಜು ಲೆಕ್ಕ ಮಾಡಿವೆ. ಏಕೆಂದರೆ ಆಸ್ಪತ್ರೆ, ಹಾಸಿಗೆಗಳು ಮತ್ತು ಆಮ್ಲಜನಕದ ತೀವ್ರ ಕೊರತೆಯಿಂದಾಗಿ ಅನೇಕ ಜನರು ಮನೆಗಳಲ್ಲಿಯೇ ಸಾವನ್ನಪ್ಪಿದ್ದಾರೆ" ಎಂದು ಆ ವರದಿ ಹೇಳಿದೆ.

ಕೊರೊನಾದಿಂದ ಪ್ರಾಣ ಕಳೆದುಕೊಂಡ ಮೃತರ ಕುಟುಂಬಗಳು ಪರಿಹಾರಕ್ಕೆ ಸಲ್ಲಿಸಿದ ಅರ್ಜಿಗಳ ಸಂಖ್ಯೆ ಮತ್ತು ಪರಿಹಾರ ಪಡೆಯಲು ಅರ್ಹ ಕುಟುಂಬಗಳ ಸಂಖ್ಯೆಯನ್ನು ನ್ಯಾಯಾಲಯಕ್ಕೆ ಸರ್ಕಾರ ನೀಡುವ ಮೂಲಕ, ಇವುಗಳು ತಾನು ನೀಡಿದ ಅಧಿಕೃತ ಸಂಖ್ಯೆಗಿಂತ ಹೆಚ್ಚು ಎಂಬುದನ್ನು ಸರ್ಕಾರವೇ ಒಪ್ಪಿಕೊಂಡಂತಾಗಿದೆ. ಆದರೂ, 2024ರ ಫೆಬ್ರವರಿಯ ಸರ್ಕಾರದ ಅಂಕಿಅಂಶಗಳ ಪ್ರಕಾರ ಗುಜರಾತಿನಲ್ಲಿ ಕೊರೊನಾ ಸಾವಿನ ಸಂಖ್ಯೆ 11,084 ಮಾತ್ರ!

ಈ ವಿಷಯದ ನೇರ ಜ್ಞಾನ ಹೊಂದಿರುವ ಗುಜರಾತ್ ಅಧಿಕಾರಿಯೊಬ್ಬರು, ಅರ್ಜಿಗಳು ಈಗ 40,000 ಕ್ಕಿಂತ ಹೆಚ್ಚಿವೆ ಮತ್ತು ಸುಮಾರು ಅರ್ಧದಷ್ಟು ಅರ್ಜಿಗಳನ್ನು ಅನುಮೋದಿಸಲಾಗಿದೆ ಎಂದು ಹೇಳಿದರು. ಅವರೆಲ್ಲರೂ ತಲಾ 50,000 ರೂಪಾಯಿಗಳನ್ನು ಪಡೆಯುತ್ತಾರೆ. ಈ ಸಂಬಂಧ ಮಾಹಿತಿ ಪಡೆಯಲು ಮುಂದಾದಾಗ, ಗುಜರಾತ್ ಕಂದಾಯ ಸಚಿವ ರಾಜೇಂದ್ರ ತ್ರಿವೇದಿ ಪ್ರತಿಕ್ರಿಯಿಸಲಿಲ್ಲ ಎಂದು ರಾಯಿಟರ್ಸ್ ಹೇಳಿದೆ.

ಕೊರೊನಾದಿಂದ ಸಾವುಗಳ ಸಂಖ್ಯೆ ಎಷ್ಟೇ ಆಗಿರಲಿ, ನಿಜವಾದ ಸಂಖ್ಯೆ ಸರ್ಕಾರ ನೀಡುತ್ತಿರುವ ಸಂಖ್ಯೆಗಿಂತ ಬಹಳಷ್ಟು ಹೆಚ್ಚಾಗಿದೆ ಎಂಬುದಂತೂ ಈ ಎಲ್ಲಾ ಅಂಶಗಳಿಂದ ಸ್ಪಷ್ಟವಾಗುತ್ತದೆ. ಮೋದಿಯವರ ಇಮೇಜ್ ಗೆ ಎಲ್ಲಿ ದಕ್ಕೆಯಾಗುತ್ತದೋ ಎಂಬ ಭಯದಿಂದ ಕೊರೊನಾ ಸಾವಿನ ಸಂಖ್ಯೆಯನ್ನು ಉದ್ದೇಶಪೂರ್ವಕವಾಗಿ ಕಡಿಮೆ ತೋರಿಸಲಾಗುತ್ತಿದೆ ಎಂಬುದಂತೂ ಸತ್ಯ.

NEW No. MAG(3)/NPP/205/2021-2022
JANASHAKTHI KANNADA VARA PATRIKE February 12-18, 2024 Price: Rs. 10/- Date of Publication: 9 February 2024 RNI No. KARKAN /2006/17926 Posted on 13-02-2024
Posted at BG PSO, BG - 560026 **Posted at Periodical Rate -** Rs. 2

ಮಕ್ಕಳ ಸಾಹಿತ್ಯ: ಹೊಸ ತಲೆಮಾರು



ಸಹಯಾನದ ಅಂಗಳದಲ್ಲಿ ಸಾಹಿತ್ಯೋತ್ಸವ

ಕರ್ನಾಟಕದ ಸಾಂಸ್ಕೃತಿಕ ಚಳುವಳಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದ ಪ್ರಖರ ಪ್ರಗತಿಪರ ಬರಹಗಾರರೂ ಜಾತ್ಯತೀತ ಪ್ರಜಾಸತ್ತಾತ್ಮಕ ವಿಚಾರವಾದಿಗಳೂ ಆದ ಬದುಕಿನುದ್ದಕ್ಕೂ ಸಮಾನತೆಯ ಸದಾಶಯಕ್ಕಾಗಿ ದುಡಿದ ಡಾ.ಆರ್.ವಿ. ಭಂಡಾರಿಯವರು ಮಕ್ಕಳು ಮತ್ತು ಯುವ ಮನಸ್ಸಿನ ಕುರಿತು ಅಪಾರ ಕಾಳಜಿ ಹಾಗೂ ನಂಬಿಕೆಯನ್ನು ಇಟ್ಟವರಾಗಿದ್ದರು. ಇವರು ಮಕ್ಕಳಿಗಾಗಿಯೇ ಕಥೆ, ಕವಿತೆ, ಕಾದಂಬರಿ, ನಾಟಕಗಳನ್ನು ಬರೆದು ಮಕ್ಕಳ ಸಾಹಿತ್ಯಕ್ಕೆ ದೊಡ್ಡ ಕೊಡುಗೆಯನ್ನು ನೀಡಿದರು. ಬೆಳಕಿನ ಬಿತ್ತವನ್ನೇ ತಮ್ಮ ಕೃತಿಗಳಲ್ಲಿ ಹುದುಗಿಸಿಟ್ಟ ಇವರ ಸಾಹಿತ್ಯ ಕನ್ನಡ ಮಕ್ಕಳ ಸಾಹಿತ್ಯಕ್ಕೆ ವಿಶೇಷ ನಡೆಯನ್ನೂ ಮೆರಗನ್ನೂ ನೀಡಿವೆ. ಹೀಗಾಗಿ ಅವರಿಗೆ ಇಷ್ಟವಾದ ಮಕ್ಕಳ ಸಾಹಿತ್ಯವನ್ನು ಪ್ರಧಾನ ವಿಷಯವಾಗಿಸಿ 'ಸಹಾಯನ ಸಾಹಿತ್ಯೋತ್ಸವ' ಸಹಯಾನದ ಅಂಗಳದಲ್ಲಿ ಜರುಗಿತು.

ಸಾಹಿತ್ಯ ಓದುವುದು ಕಲಿಕೆ ಅಲ್ಲ ಅದೊಂದು ಅನುಭವಿಸುವಿಕೆ. ಬರವಣಿಗೆಯು ನನಗಾಗಿ ಬರೆದಾಗ ಮಾತ್ರ ಬರೆದವರಿಗೆ ದೊಡ್ಡ ಬಿಡುಗಡೆ ಎಂದೆನಿಸುತ್ತದೆ. ಬಾಲ್ಯದ ಮೂಲ ದ್ರವ್ಯದ ಆಳಕ್ಕೆ ಹೋದಾಗ ತನಗಾಗಿ ಬರೆಯುವ ಬರವಣಿಗೆಯೆ ಮಕ್ಕಳ ಸಾಹಿತ್ಯವಾಗುತ್ತದೆ. ವಯಸ್ಕರು ರಚಿಸುವ ಮಕ್ಕಳ ಸಾಹಿತ್ಯದಲ್ಲಿ ಕಳೆದು ಹೋದ ತಮ್ಮ ಬಾಲ್ಯದ ನೆನಪಿದೆ. ಕಥೆ ಕವಿತೆ ಓದುವ ಮಗುವಿನಲ್ಲಿಯೂ ಅದನ್ನು ಉಳಿಸಿಕೊಳ್ಳಬೇಕಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ದಿನಕರ ದೇಸಾಯಿ ಹಾಗೂ ಆರ್.ವಿ. ಭಂಡಾರಿ ಅವರು ಸಾಮಾಜಿಕ ದೃಷ್ಟಿಕೋನ ಮತ್ತು ಬದುಕನ್ನು ಕೇಂದ್ರವಾಗಿಸಿ ಮಕ್ಕಳ ಸಾಹಿತ್ಯವನ್ನು ರಚಿಸಿದರು ಎಂದು ಕೇಂದ್ರ ಸಾಹಿತ್ಯ ಅಕಾಡೆಮಿಯ ಬಾಲ ಸಾಹಿತ್ಯ ಪ್ರಶಸ್ತಿ ಪುರಸ್ಕೃತರಾದ ಹಿರಿಯ ಸಾಹಿತಿ ಡಾ.ಆನಂದ ಪಾಟೀಲ ಅವರು ಹೇಳಿದರು.

ಸಹಯಾನ ಕೆರೆಕೋಣದಲ್ಲಿ ದಿನಾಂಕ 21.01.2024 ರಂದು ನಡೆದ ಹದಿಮೂರನೆಯ ಸಹಯಾನ ಸಾಹಿತ್ಯೋತ್ಸವದಲ್ಲಿ 'ಮಕ್ಕಳ ಸಾಹಿತ್ಯ:ಹೊಸ ತಲೆಮಾರು' ಇದರ ಸರ್ವಾಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಹಯಾನ ಸಾಹಿತ್ಯೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಕೇಂದ್ರ ಸಾಹಿತ್ಯ ಅಕಾಡೆಮಿ ಬಾಲ ಸಾಹಿತ್ಯ ಪ್ರಶಸ್ತಿ ಪುರಸ್ಕೃತರಾದ ಸಾಹಿತಿ ತಮ್ಮಣ್ಣ ಬೀಗಾರ ಅವರು ಮಾನವೀಯ ಮೌಲ್ಯವನ್ನು ಬಿತ್ತುವುದೇ ಮಕ್ಕಳ ಸಾಹಿತ್ಯದ ಮೂಲ ಉದ್ದೇಶ. ಇದು ಹೃದಯದೊಂದಿಗಿನ ಸಂವಾದವಾಗಿರುತ್ತದೆ. ಮಕ್ಕಳು ಸಾಹಿತ್ಯಾಸಕ್ತಿಯನ್ನು ಬೆಳೆಸಿಕೊಳ್ಳಲು ಅನೇಕ ಕಮ್ಮಟಗಳ, ಶಿಬಿರಗಳ, ತರಬೇತಿಗಳ ಅವಶ್ಯಕತೆ ಇದೆ. ಮಕ್ಕಳದ್ದೇ ಸಾಹಿತ್ಯ ಸಮ್ಮೇಳನ ಬಹಳ ವಿರಳ. ಹೀಗಾಗಿ ಈ ಸಹಯಾನ ಸಾಹಿತ್ಯೋತ್ಸವ ಅಪರೂಪದ ಕಾರ್ಯಕ್ರಮವಾಗಿದೆ. ಅದರಲ್ಲೂ ಮಕ್ಕಳ ಕುರಿತು ಅಪಾರ ಆಸಕ್ತಿ, ದೀನದಲಿತರ ಬಗ್ಗೆ ಅತೀವ ಆಸ್ಥೆ ಇದ್ದ ಡಾ.ಆರ್.ವಿ. ಭಂಡಾರಿ ಹಾಗೂ ಸಂವಿಧಾನವನ್ನು ಜನಸಾಮಾನ್ಯರ ಮನೆಮನಕ್ಕೆ ತಲುಪಿಸುವ ವಿಶೇಷ ಕಾರ್ಯ ಕೈಗೊಂಡ ಅದಮ್ಯ ಚೇತನವಾಗಿದ್ದ ವಿಠ್ಠಲ ನಡೆದಾಡಿದ ಅಂಗಳದಲ್ಲಿ ನಾವು ಕಲೆತಿರುವುದು ನನ್ನ ಬದುಕಿನ ವಿಶೇಷ ಗಳಿಗೆಯಾಗಿದೆ ಎಂದು ಹೇಳಿದರು.

ಅತಿಥಿಗಳಾಗಿ ಆಗಮಿಸಿದ್ದ ಕವಿ, ಕಥೆಗಾರ್ತಿ ಹಾಗೂ ಮಕ್ಕಳ ಕಾದಂಬರಿಕಾರರು, ಕೇಂದ್ರ ಸಾಹಿತ್ಯ ಅಕಾಡೆಮಿ ಬಾಲ ಸಾಹಿತ್ಯ ಪ್ರಶಸ್ತಿ ಪುರಸ್ಕೃತರಾದ ವಿಜಯಶ್ರೀ ಹಾಲಾಡಿ ಅವರು ಮಕ್ಕಳ ಸಾಹಿತ್ಯದಲ್ಲಿ ಅಧ್ಯಯನ ಹಾಗೂ ಸಂಶೋಧನೆ ತೀರಾ ಅಗತ್ಯ. ಮಕ್ಕಳ ಆಸಕ್ತಿ ಮತ್ತು ಮಕ್ಕಳ ಸಾಹಿತ್ಯವು ಇಂದು ಅಲಕ್ಷಿತ ಸಂಗತಿಯಾಗಿದೆ. ಈ ಕಾಲದ ದೊಡ್ಡ ವಿಷಾದವೆಂದರೆ ವೈಚಾರಿಕವಾಗಿ, ವೈಜ್ಞಾನಿಕವಾಗಿ ಚಿಂತಿಸುವ ಶಿಕ್ಷಣ ವ್ಯವಸ್ಥೆ ಕಾಣದಾಗಿದೆ. ನಮ್ಮ ಬಾಲ್ಯದ ನೆನಪೇ ಮಕ್ಕಳಿಗೆ ಪೂರಕವಾದ ಸಾಹಿತ್ಯ ಸೃಷ್ಟಿಗೆ ಪ್ರೇರಣೆಯಾಗುತ್ತದೆ ಎಂದು ಹೇಳಿದರು. ಇಂದಿರಾ ಭಂಡಾರಿ ವೇದಿಕೆಯಲ್ಲಿದ್ದರು. ಮಾಧವಿ ಭಂಡಾರಿ ಕಾರ್ಯಕ್ರಮ ನಿರೂಪಿಸಿದರು.

'ಮಕ್ಕಳ ಕಾವ್ಯರಂಗ' ಗೋಷ್ಠಿಗೆ ಅತಿಥಿಯಾಗಿ ಭಾಗಿಯಾದ ಚಿಂತಕಿ ವಾಣಿ ಪೆರಿಯೋಡಿ ಮಕ್ಕಳನ್ನು ಪ್ರೀತಿಸುವುದು ನಮಗೆ ತಿಳಿದಿದೆ. ಆದರೆ ಮಕ್ಕಳನ್ನು ಗೌರವಿಸುವುದು ನಮಗೆ ತಿಳಿದಿಲ್ಲ. ಮಕ್ಕಳಲ್ಲಿ ಅಪಾರ ಗೌರವ ಇದ್ದಾಗ ಅವರೊಂದಿಗೆ ಎಲ್ಲ ವಿಷಯಗಳನ್ನು ಹಂಚಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಹೇಳುತ್ತ 'ಯಾಕೆ ಯಾಕೆ ಹುಡುಗಿ' ಕತೆಯನ್ನು ಉದಾಹರಿಸುತ್ತ ಮಕ್ಕಳು ಪ್ರಶ್ನಿಸುತ್ತಲೇ ಬೆಳೆಯುತ್ತಾರೆ. ಪ್ರಶ್ನಿಸುವ ಗುಣವನ್ನು ನಾವಿಂದು ಬೆಳೆಸಬೇಕಾಗಿದೆ ಎಂದು ಹೇಳಿದರು. ಮಕ್ಕಳಾದ ವೇದಾ ನಾಯ್ಕ, ಭೂಮಿಕಾ ಗೌಡ, ದಿನೇಶ್ ಗೌಡ, ಸಂಜನಾ ನಾಯ್ಕ, ಮಯಾಂಕ್ ನಾಯ್ಕ, ಪ್ರತೀಕ್ಷಾ ನಾಯ್ಕ, ಮೇಘರಾಜ ಹರಿಜನ, ದರ್ಶನ್ ಎಚ್., ಪ್ರಿಯಾಂಕಾ ಮರಾಠಿ, ಕೀರ್ತನ ಗೌಡ ಇವರು ಕುವೆಂಪು, ಜಿ.ಪಿ. ರಾಜರತ್ನಂ, ಕಯ್ಯಾರ ಕಿಞ್ಞಣ್ಣ ರೈ, ಸವಿತಾ ನಾಗಭೂಷಣ, ಎನ್. ಆರ್. ನಾಯಕ್, ಆರ್. ವಿ. ಭಂಡಾರಿ, ಆನಂದ ಪಾಟೀಲ್, ಭಾಗೀರಥಿ ಹೆಗಡೆ, ತಮ್ಮಣ್ಣ ಬೀಗಾರ ಮುಂತಾದ ಹಿರಿಯ ಸಾಹಿತಿಗಳ ಮಕ್ಕಳ ಕವಿತೆಗಳನ್ನು ರಸವತ್ತಾಗಿ ವಾಚಿಸಿದರು. ಶ್ರೀನಿವಾಸ ನಾಯ್ಕ ಸಂಯೋಜಿಸಿ ನಿರ್ವಹಿಸಿದರು.

ಪಾಶ್ಚಾತ್ಯ ಸಾಹಿತ್ಯದ ಪ್ರಭಾವವಾದಾಗ ಭಾರತೀಯ ಸಾಹಿತ್ಯದ ಅನುಸಂಧಾನ ಆಯಿತು. ಮಕ್ಕಳ ಸಾಹಿತ್ಯದ ಕಲ್ಪನೆ ಮೂಡಿತು. ಕಡ್ಡಾಯ ಶಿಕ್ಷಣ ಜಾರಿಯಾದಾಗ ಸಿದ್ಧಪಠ್ಯಗಳಾಗಿ ಮಕ್ಕಳ ಸಾಹಿತ್ಯ ಬೆಳಕಿಗೆ ಬಂತು. ಪರಸ್ಪರ ಮುಖಾಮುಖಿಯಾಗಿ ದೊಡ್ಡವರು ಮಕ್ಕಳ ಜಗತ್ತನ್ನೂ ಮಕ್ಕಳು ದೊಡ್ಡವರ ಜಗತ್ತನ್ನು ನೋಡಬೇಕಾಗಿದೆ. ಮಕ್ಕಳ ಸಾಹಿತ್ಯ ಸಂಪ್ರದಾಯ ಮನಸ್ಥಿತಿಯಿಂದ ಮುಕ್ತವಾಗಿ ವಾಸ್ತವ ಜಗತ್ತನ್ನು ಕಟ್ಟಿಕೊಡಬೇಕಾಗಿದೆ. ಮಕ್ಕಳೇ ತಮಗೆ ಬೇಕಾದ ಪುಸ್ತಕವನ್ನು ಆರಿಸಿಕೊಳ್ಳುವ ಸನ್ನಿವೇಶ ಸೃಷ್ಟಿಯಾಗಬೇಕಿದೆ ಎಂದು 'ಕನ್ನಡ ಮಕ್ಕಳ ಸಾಹಿತ್ಯ ಪರಂಪರೆ'ಯ ಕುರಿತು ವಿಷಯ ಮಂಡಿಸಿದ ಡಾಕ್ಟರ್ ಮಾದುಪ್ರಸಾದ್ ಹುಣಸೂರು ಇವರು ಹೇಳಿದರು. 'ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಇತ್ತೀಚಿನ ಪ್ರವೃತ್ತಿಗಳು' ಈ ವಿಷಯದ ಕುರಿತು ವಿಷಯ ಮಂಡಿಸಿದ ರೇಣುಕಾಪ್ರಸಾದ್ ಎಸ್.ಕೆ. ಇವರು ಮಕ್ಕಳೊಂದಿಗಿನ ಸಹಜ ಒಡನಾಟದಿಂದ ಶಿಕ್ಷಕರು ಮಕ್ಕಳ ಮನಕ್ಕೆ ಮುದ ನೀಡುವ ಸಾಹಿತ್ಯ ರಚಿಸಿದರೆ ಬೇರೆ ಕ್ಷೇತ್ರದಲ್ಲಿ ಕೆಲಸ ಮಾಡುವವರು ಮಕ್ಕಳ ಸಾಹಿತ್ಯಕ್ಕೆ ವಿವಿಧ ಕ್ಷೇತ್ರದ ಸಾರವನ್ನು ತಂದು ಹೊಸ ಆಯಾಮವನ್ನು ನೀಡಲು ಸಾಧ್ಯವಾಯಿತು. ಪ್ರಾಸಪದಗಳನ್ನು ಬಿಟ್ಟ ಗೇಯತೆಯುಳ್ಳ ಕವಿತೆಗಳು, ಗದ್ಯ ಹಾಗೂ ಲಲಿತ ಪ್ರಬಂಧಗಳು ಇತ್ತೀಚೆಗೆ ರಚನೆಯಾಗುತ್ತಿವೆ. ಮಕ್ಕಳ ಸಾಹಿತ್ಯ ಯಾವ ಕ್ಷೇತ್ರದಲ್ಲಿ ಆಗಲಿಲ್ಲವೋ ಅಲ್ಲಿ ಅತಿ ಹೆಚ್ಚು ಕೆಲಸ ಮಾಡಬೇಕಾಗಿದೆ. ಸಾಹಿತ್ಯದಿಂದ ಸಮಾಜ ಅಭಿವೃದ್ಧಿಯಾದರೆ ನಾವು ಗೆದ್ದ ಹಾಗೆ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದರು. ಛಾಯಾ ಐ.ಕೆ ಕಾರ್ಯಕ್ರಮವನ್ನು ನಿರೂಪಿಸಿದರು.

ಕವಿಗೋಷ್ಠಿಯ ಆಶಯ ನುಡಿಗಳನ್ನಾಡಿದ ಕವಿ ಡಾ. ವಿನಾಯಕ ಕಮತದ ಇವರು ಬರವಣಿಗೆಯಲ್ಲಿ ಭಿನ್ನತೆಯನ್ನು ಉಳಿಸಿಕೊಂಡಾಗ ಮಾತ್ರ ಮಕ್ಕಳ ಸಾಹಿತ್ಯದ ಸೊಗಡು ಹೆಚ್ಚುತ್ತದೆ. ನೆನಪುಗಳನ್ನು ವಾಸ್ತವಕ್ಕೆ ತಂದುಕೊಂಡು ಕವಿತೆ ರಚನೆಯಾಗಬೇಕು ಎಂದರು. ಕಲ್ಪನಾ ಸೋಮನಹಳ್ಳಿ, ಪಿ.ಆರ್. ನಾಯಕ್, ಬೈಲೂರು ವೆಂಕಟೇಶ್, ರೇಖಾ ಭಟ್, ರಾಜಾ ಎಂ.ಬಿ, ಸೋಮಲಿಂಗ ಬೇಡರ, ಸಾತು ಗೌಡ ಕೇಣಿ, ಅಶೋಕ ಬಳ್ಳ, ಲತಾ ಗೌಡ ಇವರು ತಮ್ಮ ಮಕ್ಕಳ ಕವಿತೆಗಳನ್ನು ವಾಚಿಸಿದರು. ಕಾವ್ಯಶ್ರೀ ನಾಯ್ಕ ಮನಮನೆಯವರು ಕಾರ್ಯಕ್ರಮ ನಿರ್ವಹಿಸಿದರು.

ಸಮಾರೋಪದ ನುಡಿಗಳನ್ನಾಡಿದ ಬಸು ಬೇವಿನಗಿಡದ ಇವರು ಮಕ್ಕಳಲ್ಲಿ ಸ್ವಕಲಿಕೆಯ ಗುಣವನ್ನು ಉತ್ತೇಜಿಸುವ ಕೆಲಸ ಆಗಬೇಕಾಗಿದೆ. ಅಂತಃಕರಣ, ಸಾಮಾಜಿಕ ಪ್ರಜ್ಞೆ, ಮಾನವೀಯ ಮೌಲ್ಯವನ್ನು ಸಾಹಿತ್ಯ ಬೆಳೆಸಬೇಕು. ಮಕ್ಕಳಲ್ಲಿ ನಲಿವಿನೊಂದಿಗೆ ನೋವನ್ನು ಸಹಿಸುವ ಮನೋಸ್ಥೈರ್ಯ ಬೆಳೆಸಿ ವಾಸ್ತವದ ಸ್ಪಂದನಾ ಮನೋಭಾವ ಸ್ಫುರಿಸುವಲ್ಲಿ ನಾವು ಸೋತಿದ್ದೇವೆ. ಪಾಶ್ಚಾತ್ಯ ಸಾಹಿತ್ಯಕ್ಕೆ ಹೋಲಿಸಿದಲ್ಲಿ ನಮ್ಮಲ್ಲಿ ಮಕ್ಕಳ ಸಾಹಿತ್ಯ ರಚನೆಯ ಪ್ರಮಾಣ ಕಡಿಮೆ ಇದೆ. ಪ್ರಾದೇಶಿಕ ನುಡಿಗಟ್ಟಿನೊಂದಿಗೆ ಆಕರ್ಷಣೀಯ ಸಾಹಿತ್ಯಸ್ಪರ್ಶ ಮಕ್ಕಳಿಗೆ ಸಿಗುವಂತಾಗಲಿ ಎಂದು ಶುಭ ಹಾರೈಸಿದರು. ಯಮುನ ಗಾಂವ್ಕರ್ ಕಾರ್ಯಕ್ರಮ ನಿರ್ವಹಿಸಿ ಅಭ್ಯಾಗತರೆಲ್ಲರನ್ನೂ ವಂದಿಸಿದರು.

ಹಿರಿಯ ಯಕ್ಷಗಾನ ಕಲಾವಿದರಾದ ಗಣೇಶ್ ಭಂಡಾರಿ ಅವರ ನಿರ್ದೇಶನದಲ್ಲಿ ವಿಷ್ಣು ಮರಾಠಿಯವರ ಭಾಗವತಿಕೆ ಹಾಗೂ ನಾಗರಾಜ್ ಭಂಡಾರಿಯವರ ಮದ್ದಳೆಯ ಸಾಂಗತ್ಯದೊಂದಿಗೆ 'ಯಕ್ಷ ಹೆಜ್ಜೆ' ಮೂಡಿ ಬಂದಿತು. 'ಸುಧನ್ವಾರ್ಜುನ ಕಾಳಗ'ದ ಯುದ್ಧದ ಸನ್ನಿವೇಶವನ್ನು ಅದಿತಿ ಭಂಡಾರಿ ಹಾಗೂ ಶ್ವೇತಾ ಭಂಡಾರಿ ಇವರು ಮನಮೋಹಕವಾಗಿ ಅಭಿನಯಿಸಿದರು.

ಎಲ್ಲರ ಕುತೂಹಲದ ಕೇಂದ್ರವಾದ ಅಂಬೇಡ್ಕರ್ ವಸತಿ ಶಾಲೆ ಅಳ್ಳಂಕಿಯ ಮಕ್ಕಳಾದ ಎಂಟನೇ ತರಗತಿಯ ರಾಘವೇಂದ್ರ ಮತ್ತು ಮಾನ್ಯ ಸುಗ್ರೀವನಾಗಿ, 9ನೇ ತರಗತಿಯ ಆಶಿಕ್ ಜೋಗಿ ಹಾಗೂ ಸೌಜನ್ಯ ನಾಯ್ಕ ರಾಮನಾಗಿ, ಎಂಟನೇ ತರಗತಿಯ ವಿಶ್ವನಾಥ್ ಹನುಮಂತನಾಗಿ, ಏಳನೇ ತರಗತಿಯ ಸಂಜನಾ ಗೌಡ ಬಾಲ ಬ್ರಹ್ಮಚಾರಿಯಾಗಿ ತಮ್ಮ ಚುರುಕಿನ ಮಾತುಗಾರಿಕೆ, ಹಸ್ತಾಭಿನಯದಿಂದ ತಾಳಮದ್ದಲೆಯನ್ನು ಭಾವಪೂರ್ಣವಾಗಿ ಪ್ರಸ್ತುತಪಡಿಸಿ ಪ್ರೇಕ್ಷಕರಿಂದ ಸೈ ಎನಿಸಿಕೊಂಡರು. ಮಾರುತಿ ನಾಯ್ಕ ಬೈಲಗದ್ದೆಯವರ ಸುಶ್ರಾವ್ಯ ಭಾಗವತಿಕೆ ಹಾಗೂ ಮಂಜುನಾಥ್ ಭಂಡಾರಿ ಕಡತೋಕ ಇವರ ಚಮತ್ಕಾರಿಕ ಮೃದಂಗ ವಾದನದೊಂದಿಗೆ ರಂಗಭೂಮಿ, ಯಕ್ಷಗಾನ ಕಲಾವಿದರಾದ ವಿನಾಯಕ್ ಎಸ್.ಎಂ. ಇವರ ನಿರ್ದೇಶನದಲ್ಲಿ 'ಸುಗ್ರೀವ ಸಖ್ಯ' ಎಂಬ ದಿವಂಗತ ಜಿ.ಎಸ್.ಭಟ್ (ಧಾರೇಶ್ವರ ಮಾಸ್ತರರು) ನೆನಪಿನ ತಾಳಮದ್ದಳೆಯ ಪ್ರಸ್ತುತಿಯೊಂದಿಗೆ ಸಹಯಾನ ಸಾಹಿತ್ಯೋತ್ಸವ ಸಂಪನ್ನವಾಯಿತು.

ಆರ್.ವಿ. ಯವರ ಮೂಲ ಮನೆ ಹೊನ್ನಾವರ ತಾಲೂಕಿನ ಕೆರೆಕೋಣದಲ್ಲಿ ಮಗನಾದ ಡಾ. ವಿಠ್ಠಲ್ ಭಂಡಾರಿ ಅವರ ಕನಸಿನ ಕೂಸಾದ 'ಸಹಾಯಾನ' (ಡಾ.ಆರ್.ವಿ. ಭಂಡಾರಿ ನೆನಪಿನ ಸಂಸ್ಕೃತಿ ಅಧ್ಯಯನ ಕೇಂದ್ರ)ದ ಅಂಗಳದಲ್ಲಿ ಯಶಸ್ವಿಯಾಗಿ ನಡೆದ ಈ ಕಾರ್ಯಕ್ರಮ ಮಕ್ಕಳ ಸಾಹಿತ್ಯದ ಮೇಲೆ ಹೊಸ ಬೆಳಕು ಚೆಲ್ಲಿದ ಮೊದಲ ಪೂರ್ಣ ಪ್ರಮಾಣದ ವೈಶಿಷ್ಟ್ಯ ಪೂರ್ಣ ಕಾರ್ಯಕ್ರಮವೆಂಬ ಪ್ರಶಂಸೆಗೆ ಪಾತ್ರವಾಯಿತು.

ವರದಿ: ಮಂಜುನಾಥ್ ಶೆಟ್ಟಿ, ಕೆರೆಕೋಣ



JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**